ಮಹಿಳೆಯರಲ್ಲಿ ಮದ್ಯವ್ಯಸನ
ಕಾರಣಗಳು ಮತ್ತು ಪರಿಸ್ಥಿತಿಗಳು - ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿ, ಅಭಿವೃದ್ಧಿ ಅದ್ಯಯನ
ಎಂ. ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಕ್ಲಾರಾ ಡಿ' ಕುನ್ಹಾ
ನೋಂದಣಿ ಸಂಖ್ಯೆ: KTSM/D007

ಮಾರ್ಗದರ್ಶಕರು
ಪ್ರೊ. ಡಾ. ವಾಲ್ಟರ್ ಡಿ' ಸೋಜ
ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು,
ಬಲ್ಮಟ, ಮಂಗಳೂರು ೫೭೫೦೦೧

ಜುಲೈ – 2016

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ, ಬಲ್ಮಟ, ಮಂಗಳೂರು ೫೭೫೦೦೧.

ಮಹಿಳೆಯರಲ್ಲಿ ಮದ್ಯವ್ಯಸನ

ಕಾರಣಗಳು ಮತ್ತು ಪರಿಸ್ಥಿತಿಗಳು – ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿ, ಅಭಿವೃದ್ಧಿ ಅದ್ಯಯನ
ಎಂ. ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಕ್ಲಾರಾ ಡಿ' ಕುನ್ಹಾ
ನೋಂದಣಿ ಸಂಖ್ಯೆ: KTSM / D007

ಮಾರ್ಗದರ್ಶಕರು
ಪ್ರೊ. ಡಾ. ವಾಲ್ಟರ್ ಡಿ' ಸೋಜ
ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು,
ಬಲ್ಮಟ, ಮಂಗಳೂರು ೫೭೫ ೦೦೧.

ಜುಲೈ – 2016

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ, ಬಲ್ಮಟ, ಮಂಗಳೂರು ೫೭೫ ೦೦೧.

ಯೋಗ್ಯತಾ ಪತ್ರ

ಶ್ರೀಮತಿ. ಕ್ಲಾರಾ ಡಿ'ಕುನ್ಹಾ ನವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "ಮಹಿಳೆಯರಲ್ಲಿ ಮದ್ಯವ್ಯಸನ: ಕಾರಣಗಳು ಮತ್ತು ಪರಿಸ್ಥಿತಿಗಳು" ಎಂಬ ಶೀರ್ಷಿಕೆಯ ಪ್ರಬಂದವನ್ನು ಎಂ. ಫಿಲ್. ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ನಿಬಂಧವು ಸಂಶೋಧಕಿಯ ಸ್ವಂತ ಪರಿಶ್ರಮ, ಅಭಿಪ್ರಾಯ, ಸಂಗ್ರಹ, ಬೋಧನೆ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಪ್ರಬಂಧದ ವಿಷಯವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಪ್ರೊ. ಡಾ. ವಾಲ್ಟರ್ ಡಿ' ಸೋಜ,
ಮಾರ್ಗದರ್ಶಕರು,
ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ,
ಬಲ್ಮಟ, ಮಂಗಳೂರು ೫೭೫ ೦೦೧.

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ. ಫಿಲ್. ಪದವಿಗಾಗಿ ಸಾದರಪಡಿಸಿದ "ಮಹಿಳೆಯರಲ್ಲಿ ಮದ್ಯವ್ಯಸನ: ಕಾರಣಗಳು ಮತ್ತು ಪರಿಸ್ಥಿತಿಗಳು" ಒಂದು ಅಧ್ಯಯನ ಈ ಸಂಪ್ರಬಂಧವು ನನ್ನ ಸ್ವಂತ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ.

ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಪ್ರೊ. ಡಾ. ವಾಲ್ಟರ್ ಡಿ' ಸೋಜರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಉಪಾದಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢಪಡಿಸುತ್ತೇನೆ.

ಕ್ಲಾರಾ ಡಿ'ಕುನ್ಹಾ,
ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ,
ಬಲ್ಮಟ, ಮಂಗಳೂರು.

ಪರಿವಿಡಿ

ಅಧ್ಯಾಯ	ವಿಷಯಗಳು	ಪುಟ ಸಂಖ್ಯೆ
೧	ಅಧ್ಯಯನದ ಪ್ರಸ್ತಾವ, ವ್ಯಸನ – ಅರ್ಥ, ವ್ಯಾಖ್ಯಾನ	೧-೮
೨	ಗ್ರಂಥ ಪರಾಮರ್ಶೆ	೯-೧೭
೩	ಪ್ರಶ್ನೆ, ಉತ್ತರಗಳ ವಿಶ್ಲೇಷಣೆ	೧೭-೭೭
೪	ಸಾರ, ಶೋಧನೆಗಳು, ಸಲಹೆ	೭೮-೭೩
	ಪ್ರಶ್ನಾವಳಿ	೭೪-೭೯
	ಪರಾಮರ್ಶನ ಪುಸ್ತಕಗಳ ಪಟ್ಟಿ	೮೦-೮೧

ಮಹಿಳೆಯರಲ್ಲಿ ಮದ್ಯವ್ಯಸನ - ಕಾರಣಗಳು ಮತ್ತು ಪರಿಸ್ಥಿತಿಗಳು - ಒಂದು ಅಧ್ಯಯನ

ಕೋಷ್ಟಕಗಳ ವಿವರ

ಕೋಷ್ಟಕ ಸಂಖ್ಯೆ	ವಿವರ	ಪುಟ ಸಂಖ್ಯೆ
೧	ಪ್ರಾಯ	೪೮
೨	ವಿದ್ಯಾಭ್ಯಾಸ	೪೮
೩	ವೈವಾಹಿಕ ಸ್ಥಿತಿ	೪೯
೪	ಉದ್ಯೋಗ	೪೯
೫	ತಿಂಗಳ ಆದಾಯ	೫೦
೬	ಧರ್ಮ	೫೦
೭	ಜಾತಿ	೫೧
೮	ವಾಸವಿರುವ ಪ್ರದೇಶ	೫೧
೯	ಖಿನ್ನತೆ, ಬೇಜಾರು ಕಳೆಯಲು	೫೨
೧೦	ವಿಶ್ರಾಂತಿಗೆ	೫೨
೧೧	ಮೈ ಕೈ ನೋವು ನಿವಾರಣೆಗೆ	೫೨
೧೨	ಕೈ ನಡುಕ ನಿಲ್ಲಿಸಲು	೫೩
೧೩	ನಿದ್ರೆಗೆ	೫೩
೧೪	ಮತ್ತೇರಲು	೫೩
೧೫	ಸಂತೋಷಕ್ಕಾಗಿ	೫೪
೧೬	ಸಂತೋಷ ಕೂಟಗಳಲ್ಲಿ	೫೪
೧೭	ಸ್ನೇಹಿತರ ಒತ್ತಾಯ	೫೪
೧೮	ಆತ್ಮ ವಿಶ್ವಾಸ ವೃದ್ಧಿಸಲು	೫೫
೧೯	ಸಮಯ ಕಳೆಯಲು	೫೫
೨೦	ಸಿಟ್ಟು ನಿಭಾಯಿಸಲು	೫೫
೨೧	ಉತ್ತಮವಾಗಿ ಕೆಲಸ ಮಾಡಲು	೫೬
೨೨	ಕೌಟುಂಬಿಕ ಸಮಸ್ಯೆಗಳಿಗಾಗಿ	೫೬
೨೩	ಸಾಲ, ಹಣದ ಸಮಸ್ಯೆ	೫೬
೨೪	ಹೆದರಿಕೆ ಕಡಿಮೆ ಮಾಡಲು	೫೭
೨೫	ದುಃಖ ಕಡಿಮೆ ಮಾಡಲು	೫೭

೧೬	ಕೀಳರಿಮೆ ಹೋಗಲಾಡಿಸಲು	೫೭
೧೭	ಹತಾಶೆಯಿಂದ	೫೮
೧೮	ಜಾತಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕುಡಿತ	೫೮
೧೯	ಕುಡಿತಕ್ಕೆ ಪ್ರೋತ್ಸಾಹಿಸುವ ಸಂಧರ್ಭಗಳು - ಹಬ್ಬ, ಜಾತ್ರೆ ಇತ್ಯಾದಿ	೫೮
೩೦	ಪರಿಸರದಲ್ಲಿ ಕುಡಿತ	೫೯
೩೧	ಸುಲಭದಲ್ಲಿ ಮದ್ಯದ ಪೂರೈಕೆ, ಲಭ್ಯತೆ	೫೯
೩೨	ಧಾರ್ಮಿಕ ಕಾರಣಗಳಿಗಾಗಿ ಕುಡಿತ	೫೯
೩೩	ವ್ಯಸನದ ಬಗ್ಗೆ ತಿಳುವಳಿಕೆ ಇಲ್ಲ	೬೦
೩೪	ಕುಡಿತದ ಬಗ್ಗೆ ಇರುವ ಮೂಢ ನಂಭಿಕೆಗಳು	೬೦
೩೫	ದೈಹಿಕ ಹಿಂಸೆ	೬೦
೩೬	ಮಾನಸಿಕ ಕಿರುಕುಳ	೬೧
೩೭	ಆರೋಗ್ಯದ ಬಗ್ಗೆ ನಿರ್ಲಕ್ಷ್ಯ	೬೧
೩೮	ಕೌಟುಂಬಿಕ ಹಿನ್ನೆಲೆ - ಕುಟುಂಬದ ವಿಧ	೬೧
೩೯	ಕುಟುಂಬದಲ್ಲಿ ಒಟ್ಟು ಸದಸ್ಯರು	೬೨
೪೦	ಕುಟುಂಬದಲ್ಲಿ ಕುಡಿತದ ಅಭ್ಯಾಸವಿರುವ ಇತರ ಸದಸ್ಯರು	೬೨
೪೧	ಕುಟುಂಬದಲ್ಲಿ ಮದ್ಯವ್ಯಸನವಿರುವ ಇತರ ಸದಸ್ಯರು	೬೩
೪೨	ಕುಟುಂಬದಲ್ಲಿ ಮಹಿಳೆಯರು ಕುಡಿಯುವುದು ಸಮ್ಮತವೇ?	೬೩
೪೩	ಪ್ರಥಮ ಕುಡಿತದ ರುಚಿ ಕೊಟ್ಟವರು	೬೪
೪೪	ಪ್ರಥಮ ಕುಡಿದಾಗಿನ ಪ್ರಾಯ	೬೪
೪೫	ಪ್ರಥಮ ಕುಡಿತದ ಸಂದರ್ಭ	೬೫
೪೬	ನಿಯಂತ್ರಣ ತಪ್ಪಿದ ಮದ್ಯಸೇವನೆ ಒಂದು ವ್ಯಸನ	೬೫
೪೭	ಮದ್ಯ ಸೇವಿಸುವ ಯಾರೂ ಕೂಡ ಮದ್ಯವ್ಯಸನಿಯಾಗಲು ಸಾಧ್ಯ	೬೬
೪೮	ಮದ್ಯ ವ್ಯಸನಕ್ಕೆ ಚಿಕಿತ್ಸೆ ಇದೆ	೬೬
೪೯	ಪರಿಸರ ಮತ್ತು ಪರಿಸ್ಥಿತಿಗಳಿಂದಾಗಿ ವ್ಯಕ್ತಿ ಮದ್ಯವ್ಯಸನಿಯಾಗಲು ಸಾಧ್ಯ	೬೭
೫೦	ಚಿಕಿತ್ಸೆ, ಸಲಹೆ, ಮಾರ್ಗದರ್ಶನದಿಂದ ಅಮಲು ಮುಕ್ತ ಜೀವನ ಸಾಧ್ಯ	೬೭

ಅಧ್ಯಾಯ ೧

ಅಧ್ಯಯನದ ಪ್ರಸ್ತಾವ,

ಮದ್ಯವ್ಯಸನ - ಅರ್ಥ, ವ್ಯಾಖ್ಯಾನ,

ವ್ಯಸನದಿಂದಾಗುವ ಹಾನಿ,

ಮಹಿಳೆ ಮತ್ತು ಮದ್ಯವ್ಯಸನ

ಪ್ರಸ್ತಾವ:

ಮನುಷ್ಯನ ಇತಿಹಾಸದೊಂದಿಗೇ ಆಲ್ಕೊಹಾಲ್ ನ ಇತಿಹಾಸವೂ ಬೆರೆತುಕೊಂಡಿದೆ. ಅತ್ಯಲ್ಪ ಅಥವಾ ಯಾವ ಶ್ರಮವಿಲ್ಲದೆ ಖುಶಿಪಡಲು ಇಚ್ಚಿಸುವ ಮನುಷ್ಯನ ಬಯಕೆಯನ್ನು ಪೂರೈಸಲು ಆಲ್ಕೊಹಾಲ್ ಸೇವನೆ ಬಳಕೆಯಲ್ಲಿರುವುದು ಪ್ರಪಂಚದೆಲ್ಲೆಡೆ, ಎಲ್ಲ ಜನಾಂಗಗಳಲ್ಲಿ ಕಂಡು ಬರುತ್ತದೆ. ಆಲ್ಕೊಹಾಲ್ ಬಗ್ಗೆ ಈ ವ್ಯಾಮೋಹಕ್ಕೆ ಕಾರಣ ಏನು? ಮದ್ಯಪಾನದ ಬಗ್ಗೆ ಹಲವು ಜನಪ್ರಿಯ, ಕಾಲ್ಪನಿಕ ತಪ್ಪು ನಂಬಿಕೆಗಳಿವೆ.

ದೇವರಿಗೆ ಅರ್ಪಿಸಲು ಮೊದಲು ನೀರನ್ನು ಬಳಸಲಾಗುತಿತ್ತು. ತರುವಾಯ ಹಾಲು, ಜೇನು ಬಳಸುವ ರೂಡಿ ಬಂದಿತು. ಕ್ರಿ.ಪೂ.೩೦೦ರ ತರುವಾಯ ಪುರಾತನ ಗ್ರೀಕ್, ರೋಮನ್, ಹಿಬ್ರೂ ಸಂಸ್ಕೃತಿಗಳು ಬೆರೆತು ಯುರೋಪಿಯನ್ ಸಂಸ್ಕೃತಿಗಳಾಗಿ ರೂಪುಗೊಂಡವು. ದ್ರಾಕ್ಷಾರಸದ ದೇವತೆಯಾದ ಡಿಯೊನಿಸಸ್ ಅಥವಾ ಬಚ್ಚುಸ್ ನ ಆರಾದನೆಯು ಇಂಗ್ಲೀಷ್ ಗೆ ಕುಡಿತ ಲೋಲುಪ್ತಿಯ ಸಾಹಿತ್ತಿಕ ಹೆಸರೊಂದನ್ನು ನೀಡಿದೆ. ಸ್ತ್ರೀ ಭಕ್ತೆಯರು ಕುಡಿತದ ಅಮಲಿನಲ್ಲಿ ಆ ದೇವತೆಯನ್ನು ಪೂಜಿಸುತ್ತಿದ್ದರು. ಗ್ರೀಕೊ - ರೋಮನ್ ಕ್ಲಾಸಿಕ್ ಗಳು ಯತೇಷ್ಟ ಕುಡಿತದ ಹಾಗೂ ಮಿತಿ ಮೀರಿದ ಕುಡುಕುತನದ ವರ್ಣನೆಗಳಿಂದ ತುಂಬಿದೆ.

ಗ್ರೀಕ್ ಸಾಹಿತ್ಯ ಮಿತಿಮೀರಿದ ಕುಡಿತದ ಬಗ್ಗೆ ಎಚ್ಚರಿಕೆಯನ್ನು ಒಳಗೊಂಡಿತ್ತು. ಬೈಬಲಿನಲ್ಲಿ ಸಹ ಇದರ ಬಗ್ಗೆ ಎಚ್ಚರಿಸಿರುವುದು ಕಂಡು ಬರುತ್ತದೆ. ೭ನೇ ಶತಮಾನದಲ್ಲಿ ಇಸ್ಲಾಮ್ ಧರ್ಮವು ಮದ್ಯದ ಕೆಡುಕನ್ನು ಅರಿತು, ಮದ್ಯಪಾನವನ್ನು ಪೂರ್ತಿಯಾಗಿ ನಿಷೇದಿಸಿತು. ಕುರಾನ್ ಮದ್ಯವನ್ನು ಖಂಡಿಸಿತು. ಇದರ ಪರಿಣಾಮುವಾಗಿ ಮಹಮದನ ಅನುಯಾಯಿಗಳಿದ್ದ ಅರೇಬಿಯಾದಲ್ಲಿ ಹಾಗೂ ಇತರ ಖಂಡಗಳಲ್ಲಿ ಮದ್ಯಪಾನ ನಿಶೇದ ಜಾರಿಗೆ ಬಂದಿತು. ಸುಮಾರು ೧೦೦೦ ವರ್ಷಗಳ ತರುವಾಯ ಯುರೋಪಿನಲ್ಲಿ ಮತ್ತೆ ಅಮೇರಿಕಾದಲ್ಲಿ ಕೆಲವು ಕ್ರೈಸ್ತ ಪಂಥಗಳು ಇಂಥದೇ ಕ್ರಮ ಕೈಗೊಂಡವು.

ಮಿತಿಮೀರಿ ಕುಡಿಯುವುದರಿಂದ ದೇಹ ಮತ್ತು ಮನಸ್ಸಿನ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ದೇಹದ ಮೇಲಾಗುವ ಪರಿಣಾಮಕ್ಕಿಂತ ಮನಸ್ಸಿನ ಮೇಲಾಗುವ ಪರಿಣಾಮ ಹಾನಿಕರವಾದದ್ದು. ಕುಡಿಯದೇ ಬದುಕಲು ಸಾದ್ಯವಿಲ್ಲ ಎಂಬ ಅವಸ್ಥೆಗೆ ತಲುಪುವುದಕ್ಕೆ 'ಆಲ್ಕೊಹಾಲಿಸಮ್' (ಮದ್ಯವ್ಯಸನ) ಎಂದು ಹೆಸರು. ಅಮೇರಿಕದ ವೈದ್ಯರ ಸಂಘ ೧೯೫೬ ರಷ್ಟು

ಹಿಂದೆಯೇ ಇದು ಒಂದು ವ್ಯಾದಿ ಎಂದು ತೀರ್ಮಾನಿಸಿತು. ಹೃದ್ರೋಗದ ತರುವಾಯ ಇದು ಜಗತ್ತಿನಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಜನರನ್ನು ಬಲಿ ತೆಗೆದುಕೊಳ್ಳುತ್ತಿರುವ ವ್ಯಾಧಿ.

ಹಲವಾರು ನಂಬಿಕೆಗಳಿಂದ ಕೆಲವರು ಮದ್ಯಸೇವನೆಯನ್ನು ಪ್ರಾರಂಬಿಸುತ್ತಾರೆ. ಕುತೂಹಲ, ಸಂಗಡಿಗರ ಒತ್ತಾಯ, ಪರಿಸರ, ಸಾಹಸೀ ಪ್ರವೃತ್ತಿ ಹೊಸಬಗೆಯ ಸುಖದ ಅನ್ವೇಷಣೆ, ಇತರರ ಸಲಹೆ - ಮಾದರಿಗಳಿಂದ ಸೇವನೆ ಶುರುವಾಗುತ್ತದೆ. ಸಮಾಜದ ಕೆಲವು ವರ್ಗಗಳಲ್ಲಿ ಆಲ್ಕೊಹಾಲ್ ಸೇವನೆ ಪ್ರತಿಷ್ಠೆಯ ಕುರುಹಾಗುತ್ತದೆ. ವ್ಯಕ್ತಿ ಆಗಾಗ್ಗೆ ಆಲ್ಕೊಹಾಲ್ ತೆಗೆದುಕೊಳ್ಳುತ್ತಾ ಅದಕ್ಕೆ ಹೊಂದಿಕೊಳ್ಳತೊಡಗುತ್ತಾನೆ. ಈ ಹಂತದಲ್ಲಿ ಆರೋಗ್ಯ ದೃಷ್ಟಿಯಿಂದ ಯಾವ ತೊಂದರೆಯೂ ಇರದೆ, ವ್ಯಕ್ತಿ ಆಲ್ಕೊಹಾಲ್ ನ್ನು ಪ್ರೀತಿಸತೊಡಗುತ್ತಾನೆ.

ಭಾರತದಂತಹ ಮುಂದುವರಿಯುತ್ತಿರುವ ದೇಶಗಳಲ್ಲಿ ಇಂದು ಅಮಲು ವ್ಯಸನವು ಒಂದು ದೊಡ್ಡ ಪಿಡುಗಾಗಿದೆ. "ದೇಶದ ಅಭಿವೃದ್ದಿ ಹಳ್ಳಿಗಳ ಅಭಿವೃದ್ಧಿಯಲ್ಲಿದೆ ಹಾಗೂ ಅಭಿವೃದ್ಧಿಯು ಪಾನ ನಿಷೇದದಿಂದ ಮಾತ್ರ ಸಾದ್ಯ" - ಮಹಾತ್ಮಾ ಗಾಂಧಿ.

ಮಾದಕ ವಸ್ತುಗಳು ಅನರ್ಥಕಾರಿ, ಅಪಾಯಕಾರಿ ಎಂದು ಗೊತ್ತಿದ್ದ ಮೇಲೂ ಸಮಾಜ, ಸರಕಾರ ಅವುಗಳ ಉತ್ಪಾದನೆಗೆ ಅನುಮತಿಯನ್ನು ಕೊಡುತ್ತದೆ. ಅವುಗಳ ಸಾಗಾಟ, ಮಾರಾಟ, ಪ್ರಚಾರ ಹಾಗೂ ಸಮಾರಂಭಗಳಲ್ಲಿ ಆಲ್ಕೋಹಾಲ್ ಸೇವನೆಗೆ ಅನುವು ಮಾಡಿ ಕೊಡುತ್ತದೆ. ಹಿಂದಿನಿಂದ ಹಿಡಿದು ಇಂದಿನವರೆಗೆ, ಮಾದಕ ವಸ್ತುಗಳ ಬಗ್ಗೆ ಬಹುತೇಕ ಸಮಾಜಗಳು ಸರಕಾರಗಳು ದ್ವಂದ್ವ ನೀತಿಯನ್ನು ಅನುಸರಿಸಿರುವುದು ಐತಿಹಾಸಿಕ ಕಟು ಸತ್ಯ. ಪ್ರಸಕ್ತದಲ್ಲಿ ನಮ್ಮ ದೇಶದಲ್ಲಿ ಯಾವುದೇ ದೇಶದ ಬೊಕ್ಕಸಕ್ಕೆ. ಆಲ್ಕೋಹಾಲ್ ಮೂಲದಿಂದ ಬರುವ ಆದಾಯದ ಪ್ರಮಾಣ ತಳ್ಳಿ ಹಾಕುವಂತದ್ದಲ್ಲ. ಅನೇಕ ರಾಜ್ಯಗಳು ಪಾನನಿಷೇದವನ್ನು ಜಾರಿಗೆ ತಂದು ಭ್ರಮನಿರಸಗೊಂಡವು. ಮಾಡಿದ ಶಾಸನವನ್ನು ನಿಷ್ಠೆಯಿಂದ ಅವು ಜಾರಿಗೆ ತರಲೂ ಇಲ್ಲ. ಪಾನ ನಿರೋದದಿಂದಾಗಿ ಕಳ್ಳಭಟ್ಟಿಯ ಉತ್ಪಾದನೆ - ವಿತರಣೆ ಮುಗಿಲು ಮುಟ್ಟಿತು. ಹಲವು ಬಗೆಯ ಅನಾಚಾರ - ಭ್ರಷ್ಟಾಚಾರಗಳಿಗೆ ದಾರಿಮಾಡಿಕೊಟ್ಟಿತು. ಜನ ಕುಡಿಯಬಾರದ ಮಿಥೈಲ್ ಅಲ್ಕೋಹಾಲ್, ಸ್ಪಿರಿಟ್, ಟರ್ಪಂಟೈನ್ ಗಳನ್ನು ಕುಡಿದು ಆರೋಗ್ಯ ಕೆಡಿಸಿಕೊಂಡರು. ಕೆಲವರು ಸತ್ತರು. 'ಪಾನ ನಿರೋಧ ಶಾಸನದಿಂದ ಸಾಧ್ಯವಿಲ್ಲ, ಶಾಸನದಿಂದ ಸರ್ಕಾರಕ್ಕೆ ಬರುವ ಆದಾಯಕ್ಕೆ ಸೊನ್ನೆ, ಕಳ್ಳಭಟ್ಟಿ ವ್ಯಾಪಾರಕ್ಕೆ ಕುಮ್ಮಕ್ಕು, ಶಾಸನ ವ್ಯಾವಹಾರಿಕ ದೃಷ್ಟಿಯಿಂದ ಸಾಧುವಲ್ಲ ಎಂಬ ವಾದವನ್ನೊಡ್ಡಿ ಆಲ್ಕೋಹಾಲ್ ಉತ್ಪಾದನೆ - ವಿತರಣೆಗೆ ಅವಕಾಶ ಮಾಡಿಕೊಟ್ಟಿವೆ. ಸರಕಾರದ ಜೊತೆಗೆ ಸಿನೆಮಾ,

ದೂರದರ್ಶನದಂತಹ ಪ್ರಬಲ ಪ್ರಸಾರ ಮಾಧ್ಯಮಗಳು, ವೃತ್ತಪತ್ರಿಕೆ, ನಿಯತಕಾಲಿಕೆಗಳು ನೇರವಾಗಿ ಮತ್ತು ಪರೋಕ್ಷವಾಗಿ ಆಲ್ಕೋಹಾಲ್ ಸೇವನೆಯನ್ನು ವೈಭವೀಕರಿಸುತ್ತವೆ. ಯುವಜನರಿಗೆ ಉಪಯೋಗಿಸಲು ಪ್ರಚೋದನೆ ನೀಡುತ್ತವೆ. ಇದು ನಿಜಕ್ಕೂ ವಿಷಾದನೀಯ.

ಮಾದಕ ವಸ್ತುಗಳ ನಿಯಂತ್ರಣಕ್ಕೆ ಸರಕಾರವನ್ನು, ಕಾನೂನನ್ನು ಅವಲಂಬಿಸುವ ಬದಲು, ಪ್ರತಿಯೊಬ್ಬ ವ್ಯಕ್ತಿ ವೈಯಕ್ತಿಕವಾಗಿ ಈ ವಸ್ತುಗಳ ವಿರುದ್ಧ ಹೋರಾಟಕ್ಕೆ ಸಜ್ಜಾಗಬೇಕು. ಅವುಗಳಿಂದಾಗುವ ಹಾನಿಯ ಬಗ್ಗೆ ಜನಜಾಗ್ರತಿ ಬೆಳೆಸಬೇಕು. ಇದನ್ನು ವ್ಯಕ್ತಿ ತನ್ನ ಮನೆಯಿಂದ ಪ್ರಾರಂಭಿಸಬಹುದು. ಕುಟುಂಬದ ಹದಿವಯಸ್ಸಿನವರಿಗೆ, ಯುವಜನರಿಗೆ ಮಾದಕ ವಸ್ತುಗಳ ಪ್ರಾರಂಭದ ಆಕರ್ಷಣೆಯ ಸೆಳೆತ ಮತ್ತು ಅನಂತರದ ಹಾನಿಯ ಬಗ್ಗೆ ತಿಳಿಯ ಹೇಳಬೇಕು. ಮನರಂಜನೆಗೆ ಆರೋಗ್ಯಕರ ಚಟುವಟಿಕೆಗಳಾದ ಕ್ರೀಡೆಗಳು, ಸಾಹಿತ್ಯ, ಸಂಗೀತ, ಲಲಿತ ಕಲೆಗಳನ್ನು ಅವಲಂಬಿಸಬೇಕೇ ವಿನಾ ಮಾದಕ ವಸ್ತುಗಳನ್ನಲ್ಲ ಎಂದು ಸ್ಪಷ್ಟಪಡಿಸಬೇಕು. ಅನಂತರ ನೆರೆಹೊರೆಯವರಿಗೆ, ಸ್ನೇಹಿತರಿಗೆ, ಸಹೋದ್ಯೋಗಿಗಳಿಗೆ ತಿಳಿವಳಿಕೆ ನೀಡಿ, ಮಾದಕ ವಸ್ತುಗಳಿಂದ ದೂರವಿರಲು ಪ್ರೋತ್ಸಾಹಿಸಬೇಕು. ಮುಖ್ಯವಾಗಿ ಆಲ್ಕೋಹಾಲ್ ಬಗ್ಗೆ ಇರುವ ತಪ್ಪು ನಂಬಿಕೆಗಳನ್ನು ನಿವಾರಿಸಬೇಕು. ವ್ಯಕ್ತಿ ತಾನು ಯಾವುದೇ ಮಾದಕ ವಸ್ತುವನ್ನು ಸೇವಿಸದೇ ಇತರರಿಗೆ ಮಾದರಿಯಾಗಬೇಕು.

ಆಲ್ಕೋಹಾಲ್ ಎಂದರೆ ಏನು?

ಆಲ್ಕೋಹಾಲ್ ಅಥವಾ ಮದ್ಯಸಾರದಲ್ಲಿ ಅನೇಕ ಬಗೆಗಳಿವೆ. ಮನುಷ್ಯರು ಕುಡಿಯುವ ಆಲ್ಕೋಹಾಲ್ ಗೆ ಈಥೈಲ್ ಆಲ್ಕೋಹಾಲ್ ಎಂದು ಹೆಸರು. ಇದರ ರಾಸಾಯನಿಕ ಸೂತ್ರ C2H5OH. ಇದು ವರ್ಣರಹಿತವಾದದ್ದು, ತೀಕ್ಷ್ಣವಾದ ಚುರುಗುಟ್ಟಿಸುವ ರುಚಿಯುಳ್ಳದ್ದು. ಇದು ಶರ್ಕರ ಪಿಷ್ಟಗಳನ್ನು ಹುದುಗಿನಲ್ಲಿ ಕೊಳೆ ಹಾಕುವ ಮೂಲಕ ತಯಾರಿಸುವಂತಾದ್ದು.

ಮತ್ತೊಂದು ಮಿಥೈಲ್ ಆಲ್ಕೋಹಾಲ್. ಇದು ಮೇಲಿನದಕ್ಕಿಂತ ಭಿನ್ನವಾದದ್ದು. ಇದು ಉದ್ಯಮಗಳಲ್ಲಿ ಬಳಕೆಯಾಗುವಂತಾದ್ದು, ವಿಷಭರಿತವಾಗಿದ್ದು, ಮರಗಳಿಂದ ತೆಗೆಯುವಂತಾದ್ದು.

ಈಥೈಲ್ ಆಲ್ಕೋಹಾಲ್ ಯಾವ ಪೋಷಕಾಂಶಗಳೂ ಇಲ್ಲದ ಆಹಾರವಾಗಿದೆ. ಅದು ಪ್ರತಿ ಸ್ಟಾಂಡರ್ಡ್ ಡ್ರಿಂಕ್ ಗೆ ೧೦೦ ಕ್ಯಾಲೊರಿಗಳನ್ನು ಒಳಗೊಂಡಿರುತ್ತದೆ. ಆದರೆ ವಿಟಮಿನ್ ಗಳು

ಪ್ರೋಟೀನ್ ಗಳು, ಕಾರ್ಬೋ ಹೈಡ್ರೇಟ್ ಗಳು ಅಥವಾ ಕೊಬ್ಬನ್ನು ಹೊಂದಿರುವುದಿಲ್ಲ. ಬೀರು ಕುಡಿಯುವವರಿಗೆ ಡೊಳ್ಳು ಬರಲು ಈ ಕ್ಯಾಲೊರಿಗಳು ಕಾರಣವಾಗಿರುತ್ತವೆ.

ಮಹಿಳೆ ಮತ್ತು ಮದ್ಯವ್ಯಸನ

ಮದ್ಯವ್ಯಸನವು ಪುರುಷರಿಗೆ ಮಾತ್ರ ಸೀಮಿತವಾಗಿಲ್ಲ. ಕುಡಿತದ ಅಭ್ಯಾಸವಿರುವ ಯಾರೂ ಸಹ ಮದ್ಯವ್ಯಸನಿಯಾಗಬಹುದು. ಬಹಳಷ್ಟು ಸ್ತ್ರೀಯರೂ ಇದರಿಂದ ಬಾದಿತರಾಗಿದ್ದಾರೆ. ಅಮೆರಿದ ದೇಶದಲ್ಲಿ ೧೦೦ ಮಂದಿ ಅಮಲು ವ್ಯಸನಿಗಳಲ್ಲಿ ೨೫ ಮಂದಿ ಸ್ತ್ರೀಯರಿದ್ದಾರೆ. ಮದ್ಯವ್ಯಸನಕ್ಕೆ ಶ್ರೀಮಂತ ಅಥವಾ ಬಡವ ಎಂಬ ತಾರತಮ್ಯವಿಲ್ಲ.

ಆಲ್ಕೋಹಾಲಿಕ್ ಯಾ ವ್ಯಸನಿ ಎಂಬ ಪದವೇ ನೋವು ತರುತ್ತದೆ, ಅದರಲ್ಲೂ ಒಂದು ಮಹಿಳೆ ಅಮಲು ವ್ಯಸನಿಯಾದರೆ ಸಮಾಜವು ಅವಳನ್ನು ನೋಡುವ ರೀತಿಯೇ ಬೇರೆ. ಒಬ್ಬ ಪುರುಷ ಅಮಲುವ್ಯಸನಿಯಾದರೆ ಅದನ್ನು ಸಮಾಜವು ಸಹಿಸಿಕೊಂಡು ಹೋಗುವುದನ್ನು ನೋಡಿದರೆ, ಅದೇ ಪರಿಸ್ಥಿತಿಯಲ್ಲಿರುವ ಮಹಿಳೆಯನ್ನು ಸಮಾಜ ಅಂಗೀಕರಿಸುವುದಿಲ್ಲ.

ಮದ್ಯ ಅಥವಾ ಆಲ್ಕೋಹಾಲ್ ನಿಂದಾಗುವ ಕಷ್ಟ ನಷ್ಟಗಳು ಅಪಾರ. ಅಪಘಾತಗಳು, ದೈಹಿಕ, ಮಾನಸಿಕ ಹಿಂಸೆ, ಕೌಟುಂಬಿದ ದೌರ್ಜನ್ಯಗಳು, ಕುಟುಂಬದ ಮಕ್ಕಳಲ್ಲಿ ದುರ್ಗುಣಗಳು ಅತಿಯಾಗಿರುವುದು ಅಮಲು ವ್ಯಸನಿಯ ಕುಟುಂಬದಲ್ಲಿ ಕಾಣಬಹುದು.

ವ್ಯಸನವು ಮಾನಸಿಕ, ದೈಹಿಕ ದುರ್ಬಲತೆಯಲ್ಲ. ಮದ್ಯವ್ಯಸನವು ಒಂದು ಬೆಳೆದುಕೊಂಡು ಹೋಗುವ ಕಾಯಿಲೆಯೆಂದು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಅಮೇರಿಕನ್ ಸೈಕಿಯಾಟ್ರಿಕ್ ಅಸೋಸಿಯೇಶನ್ ೧೯೫೬ ರಲ್ಲಿ ಹೇಳಿದೆ.

ಮಹಿಳೆಯರಲ್ಲಿ ಸಣ್ಣ ಪ್ರಮಾಣದ ಮದ್ಯ ಸೇವನೆಯು ಕೂಡ ಬಹಳಷ್ಟು ಹಾನಿ ಮಾಡುತ್ತದೆ ಮತ್ತು ಅತಿಯಾದ ಕುಡಿತ ಅವರ ದೇಹ ಪ್ರಕ್ರುತಿಗೇ ಮಾರಕವಾಗಿದೆ. ಆದರೆ ವ್ಯಸನವು ಗಂಡು, ಹೆಣ್ಣು ಎಂಬ ಭೇಧವಿಲ್ಲದೆ, ಪ್ರಾಯದ ಹಂಗಿಲ್ಲದೆ, ವಿದ್ಯಾಭ್ಯಾಸ, ಸಮಾಜದ ಸ್ಥಾನಮಾನ ಇದು ಯಾವುದೂ ವ್ಯಸನಿಯಾಗದಂತೆ ತಡೆಯುವುದು ಸಾಧ್ಯವಿಲ್ಲ ಎಂಬುದನ್ನು ಬಹಳಷ್ಟು ಅಧ್ಯಯನಗಳು ಹೇಳುತ್ತವೆ.

ಇತ್ತೀಚಿನ ವೈದ್ಯಕೀಯ ಶೋಧನೆಗಳಿಂದ ತಿಳಿದು ಬರುವಂತೆ ಮದ್ಯ ಸೇವಿಸುವ ಹೆಂಗಸರಿಗೆ ಗಂಡಸರಿಗಿಂತಲೂ ಬೇಗ ಅಮಲೇರುತ್ತದೆ. ಏಕೆಂದರೆ ಅವರ ಹೊಟ್ಟೆಗಳು ಮದ್ಯವನ್ನು ತಟಸ್ಥಗೊಳಿಸಲು ಸಮರ್ಥವಾಗಿರುವುದಿಲ್ಲ. ಪರಿಣಾಮವೆಂದರೆ ಸಾಮಾನ್ಯವಾಗಿ ನಡೆಯುವಂತೆ ಯಕೃತ್ತು ಮದ್ಯದ ಸಂಸ್ಕರಣ ಕಾರ್ಯ ಮಾಡುವುದಿಲ್ಲ, ಬದಲು ಮದ್ಯ ಜಠರ ಕವಚಗಳ ಮೂಲಕ ನೇರ ರಕ್ತನಾಳಗಳಿಗೆ, ಅಲ್ಲಿಂದ ಮೆದುಳಿಗೆ ತಲುಪಿ ಹೆಂಗಸರು ಹೆಚ್ಚು ಬೇಗ ಅಮಲೇರುವಂತೆ ಮಾಡುತ್ತದೆ. ಇದರಿಂದ ಯಕೃತ್ತಿಗೆ ಹಾನಿಯಾಗುತ್ತದೆ. ಗಂಡಸರು ತಾವು ಕುಡಿಯುವ ಮದ್ಯದ ಸ್ವಲ್ಪ ಭಾಗವನ್ನಾದರೂ ಜೀರ್ಣಿಸಿಕೊಳ್ಳುತ್ತಾರಾದರೆ, ಕುಡಿತರೋಗಿ ಹೆಂಗಸರ ಹೊಟ್ಟೆಗಳು ಮದ್ಯ ಜೀರ್ಣಿಸಿಕೊಳ್ಳುವುದನ್ನು ಪೂರ್ತಿಯಾಗಿ ನಿಲ್ಲಿಸುತ್ತವೆ ಎಂಬುದು ಹೆಚ್ಚು ಸ್ಪಷ್ಟವಾಗಿದೆ.

ದೇಹದ ಗಾತ್ರಕ್ಕೆ ತಕ್ಕ ಪರಿಮಾಣದ ಮದ್ಯ ಸೇವಿಸಿದರೂ ಸಹ ಅದರ ಪರಿಣಾಮದ ತೀವ್ರತೆ ಹೆಚ್ಚಾಗುವುದೇಕೆ? ಅಲ್ಲದೆ ಮದ್ಯವ್ಯಸನಿ (ಆಲ್ಕೋಹಾಲಿಕ್) ಗಳಾಗಿರುವ ಗಂಡಸರಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಹೆಂಗಸುರು ಯಕೃತ್ ಹಾನಿಗೆ ಒಳಗಾಗುವುದೇಕೆ?

ಹೊಟ್ಟೆಯಲ್ಲಿರುವ ಎನ್ ಜೈಮ್ (ರಾಸಾಯನಿಕ ಕಿಣ್ವ) ಅಲ್ಲಿಗೆ ಸೇರುವ ಹೆಚ್ಚು ಪ್ರಮಾಣದ ಮದ್ಯದ ತೀವ್ರತೆ ಕಡಿಮೆಯಾಗುವುದಕ್ಕೆ ಸಹಾಯಕವಾಗುತ್ತದೆ. ಹಾಗಾಗಿ ಕುಡಿದ ಎಲ್ಲ ಮದ್ಯ ನೇರ ಮೆದುಳಿಗೆ ಸೇರುವುದಿಲ್ಲ. ಆದರೆ ಹೆಂಗಸರ ಹೊಟ್ಟೆಯಲ್ಲಿ ಎನ್ ಜೈಮ್ ಗಂಡಸರಿಗಿಂತ ಕಡಿಮೆ ಪ್ರಮಾಣದಲ್ಲಿರುತ್ತದೆ. ಆದುದರಿಂದ ಅವರು ಕುಡಿಯುವ ಮದ್ಯದ ಹೆಚ್ಚು ಭಾಗ ಶುದ್ಧ ಮದ್ಯದ ರೂಪದಲ್ಲೇ ರಕ್ತ ಪ್ರವಾಹಕ್ಕೆ ಸೇರುತ್ತದೆ. ಹೆಂಗಸರ ಹೊಟ್ಟೆಯಲ್ಲಿ ಎನ್ ಜೈಮ್ ಕಡಿಮೆಯಾಗಿರುವುದಕ್ಕೆ ಕಾರಣವೇನೆಂಬುದು ತಿಳಿದು ಬಂದಿಲ್ಲ. ಗಂಡಸಿನಷ್ಟೇ ಪ್ರಮಾಣದ ಮದ್ಯ ಸೇವಿಸುವ ಹೆಂಗಸಿನ ರಕ್ತಕ್ಕೆ ಶೇ. ೩೦ಕ್ಕಿಂತ ಅಧಿಕ ಮದ್ಯ ಸೇರುತ್ತದೆ. ಎಂದರೆ ಗಂಡರು ತೆಗೆದುಕೊಳ್ಳುವ ಒಂದು ಡ್ರಿಂಕ್, ಹೆಂಗಸು ಎರಡು ಡ್ರಿಂಕ್ಸ್ ತೆಗೆದುಕೊಳ್ಳುವುದಕ್ಕೆ ಸಮನಾಗುತ್ತದೆ.

ಜನರು ಹೆಚ್ಚು ಕುಡಿಯುವಾಗ ಹೊಟ್ಟೆಯ ಎನ್ ಜೈಮ್ ಹೆಚ್ಚು ಕೆಲಸ ಮಾಡುವುದಿಲ್ಲ. ಆಲ್ಕೋಹಾಲಿಕ್ ಆಗಿರುವ ಗಂಡಸು ಆಲ್ಕೋಹಾಲನ್ನು ಅರಗಿಸಿಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾನೆ. ಹೆಂಗಸರ ಹೊಟ್ಟೆಯಲ್ಲಿ ಕೆಲಸ ಮಾಡುವ ಎನ್ ಜೈಮ್ ಇಲ್ಲದ ಕಾರಣ, ಅವರ ಪಾಲಿಗೆ ಮದ್ಯ ಸೇವನೆಯಿಂದ ಮದ್ಯವನ್ನು ಸೂಜಿಯ ಮೂಲಕ ರಕ್ತನಾಳಕ್ಕೆ ಹೊಗಿಸುವಂತಾದ್ದೆ ಪರಿಣಾಮವಾಗಿರುತ್ತದೆ.

- ಅಧ್ಯಯನದ ಉದ್ದೇಶಗಳು
- ಸಮಸ್ಯೆ ಅಥವಾ ಸಮಸ್ಯೀಕರಣ,
- ಅಧ್ಯಯನದ ವಿಧಾನಗಳು,
- ಅಧ್ಯಯನದ ಊಹೆಗಳು,
- ಅಧ್ಯಯನದ ಚೌಕಟ್ಟುಗಳು.

ಅಧ್ಯಯನದ ಉದ್ದೇಶಗಳು:

೧. ಮಹಿಳಾ ಮದ್ಯವ್ಯಸನಿಗಳ ಸಾಮಾಜಿಕ ಬೌಗೋಳಿಕ ಹಿನ್ನೆಲೆಯನ್ನು ತಿಳಿಯುವುದು.

೨. ಮಹಿಳೆಯರು ಮದ್ಯಸೇವನೆಗೆ ಕೊಡುವ ಕಾರಣಗಳನ್ನು ತಿಳಿಯುವುದು

೩. ಮದ್ಯವ್ಯಸನಿ ಮಹಿಳೆ ಬದುಕುತ್ತಿರುವ ಪರಿಸರ ಮತ್ತು ಪರಿಸ್ಥಿತಿಗಳನ್ನು ತಿಳಿಯುವುದು.

೪. ಮದ್ಯವ್ಯಸನಿ ಮಹಿಳೆಯರ ಕೌಟುಂಬಿಕ ಹಿನ್ನೆಲೆಯನ್ನು ತಿಳಿಯುವುದು

೫. ಮದ್ಯವ್ಯಸನದ ಬಗ್ಗೆ ಅಮಲು ವ್ಯಸನಿ ಮಹಿಳೆಯರಿಗೆ ಇರುವ ಜಾಗ್ರತಿಯನ್ನು ತಿಳಿಯುವುದು.

ಸಮಸ್ಯೆ ಅಥವಾ ಸಮಸ್ಸೀಕರಣ

ಮಹಿಳೆಯರಲ್ಲಿ ಮದ್ಯವ್ಯಸನಕ್ಕೆ ಅವರು ಬದುಕುವ ಪರಿಸರ, ಕೌಟುಂಬಿಕ ಹಿನ್ನೆಲೆ, ಸಾಮಾಜಿಕ ಸ್ಥಿತಿಗತಿ ಇತ್ಯಾದಿಗಳು ಕಾರಣವಾಗಿವೆ. ಮದ್ಯ ಸೇವಿಸುವ ಯಾರೂ ಸಹ ಮದ್ಯವ್ಯಸನಿಯಾಗಬೇಕೆಂದು ಇಷ್ಟಪಡುವುದಿಲ್ಲ. ಹಲವಾರು ವೈಯಕ್ತಿಕ, ಸಾಮಾಜಿಕ, ಕೌಟುಂಬಿಕ ಕಾರಣಗಳಿಂದಾಗಿ ಮಹಿಳೆಯು ಮದ್ಯದ ದಾಸಳಾಗಲು ಕಾರಣವಾಗುತ್ತದೆ.

ಮದ್ಯವ್ಯಸನ ಶ್ರೀಮಂತ, ಬಡವ, ಪುರುಷ, ಮಹಿಳೆ, ವಿದ್ಯಾವಂತ, ಅವಿದ್ಯಾವಂತ, ಜಾತಿ, ಪಂಗಡಗಳ ಬೇದವಿಲ್ಲದೆ ಯಾರಿಗೂ ಆಗಬಹುದು. ಅದರಲ್ಲೂ ಮಹಿಳೆಯು ಮದ್ಯವ್ಯಸನಿಯಾದರೆ ಅತೀ ಹೆಚ್ಚಿನ ಪರಿಣಾಮಗಳು ಉಂಟಾಗುತ್ತವೆ. ಇದು ಒಂದು ವ್ಯಕ್ತಿಯ ವೈಯಕ್ತಿಕ ಸಮಸ್ಯೆ ಮಾತ್ರವಲ್ಲದೆ ಕೌಟುಂಬಿಕ, ಸಾಮಾಜಿಕ ಸಮಸ್ಯೆಯೂ ಆಗಿದೆ. ಈ ಅಧ್ಯಯನವು ಮಹಿಳೆಯರಲ್ಲಿ ಮದ್ಯವ್ಯಸನಕ್ಕೆ ಇರುವ ಕಾರಣಗಳು ಹಾಗೂ ಪರಿಸ್ಥಿತಿಯ ಬಗ್ಗೆ ಬೆಳಕು ಚೆಲ್ಲುವುದಾಗಿದೆ.

ಅಧ್ಯಯನದ ವಿಧಾನಗಳು

- ಮಂಗಳೂರಿನ ಉಳ್ಳಾಲದಲ್ಲಿರುವ ತೆಲೋಕಾ ಮಹಿಳೆಯರ ಮದ್ಯವ್ಯಸನ ಚಿಕಿತ್ಸಾ ಕೇಂದ್ರಕ್ಕೆ ದಾಖಲಾದ ಮಹಿಳೆಯರಿಂದ ಮಾಹಿತಿ ಸಂಗ್ರಹಿಸುವುದು.
- ಚಿಕಿತ್ಸೆಗೆ ಬಂದಂತಹ ಐವತ್ತು ಮದ್ಯವ್ಯಸನಿ ಮಹಿಳೆಯರಿಂದ ಮಾಹಿತಿ ಸಂಗ್ರಹಣೆ.
- ಪ್ರಶ್ನಾವಳಿ ಮೂಲಕ ಮಾಹಿತಿ ಸಂಗ್ರಹಣೆ.

ಅಧ್ಯಯನದ ಊಹೆಗಳು

- ಮಹಿಳೆಯು ಕೌಟುಂಬಿಕ ಪರಿಸರ ಹಾಗೂ ವಾಸಿಸುವ ಪರಿಸರದಿಂದಾಗಿ ಮದ್ಯವ್ಯಸನಿಯಾಗಲು ಸಾಧ್ಯ.
- ಮಹಿಳೆಯ ಮದ್ಯವ್ಯಸನಕ್ಕೆ ಖಿನ್ನತೆ, ಮಾನಸಿಕ ಒತ್ತಡ ಇತ್ಯಾದಿಗಳು ಕಾರಣವಾಗಿವೆ.
- ವ್ಯಸನದ ಬಗ್ಗೆ ಸರಿಯಾದ ವೈಜ್ಞಾನಿಕ ತಿಳುವಳಿಕೆ, ಮಾಹಿತಿ ಇಲ್ಲದಿರುವುದು ಮಹಿಳೆಯು ಮದ್ಯವ್ಯಸನಿಯಾಗಲು ಕಾರಣ.
- ಕುಟುಂಬದಲ್ಲಿ ಇರುವ ಇತರ ಸದಸ್ಯರ ಕುಡಿತವೂ ಮಹಿಳೆ ಮದ್ಯವ್ಯಸನಿಯಾಗಲು ಕಾರಣ.
- ಬಾಣಂತಿಗೆ ಮದ್ಯದ ರುಚಿ ಸಿಕ್ಕಿ ಮಹಿಳೆಯು ಮದ್ಯವ್ಯಸನಿಯಾಗಲು ಕಾರಣವಾಗಬಹುದು.

ಅಧ್ಯಯನದ ಚೌಕಟ್ಟುಗಳು

ಮಂಗಳೂರಿನ ಉಳ್ಳಾಲದಲ್ಲಿರುವ ತೆಲೋಕಾ ಮಹಿಳೆಯರ ವ್ಯಸನ ಮುಕ್ತಿ ಕೇಂದ್ರಕ್ಕೆ ಚಿಕಿತ್ಸೆಗಾಗಿ ಬಂದಂತಹ ಮಹಿಳೆಯರಿಂದ ಮಾತ್ರ ಮಾಹಿತಿ ಸಂಗ್ರಹ ಮಾಡಲಾಗಿದೆ. ಈ ಸಂಸ್ಥೆಯು ಪ್ರಾರಂಭವಾಗಿ ನಾಲ್ಕು ವರ್ಷಗಳು ಆಗಿದ್ದು, ಈ ಕೇಂದ್ರಕ್ಕೆ ಚಿಕಿತ್ಸೆಗಾಗಿ ಬಂದಿರುವುದರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಆದ್ದರಿಂದ ಇದು ಎಲ್ಲಾ ಮಹಿಳಾ ಮದ್ಯ ವ್ಯಸನಿಗಳ ಚಿತ್ರಣವಾಗಿ ಪರಿಗಣಿಸಲಾಗದು. ಇದು ಸಂಶೋಧಕಿಯು ಪ್ರಶ್ನಾವಳಿ ಮೂಲಕ ಮಾತ್ರ ಪಡೆದುಕೊಂಡ ಮಾಹಿತಿಯಾಗಿದೆ.

ಅಧ್ಯಾಯಗಳು:

ಅಧ್ಯಾಯ ೧:

ಅಧ್ಯಯನದ ಪ್ರಸ್ತಾವನೆ, ಮದ್ಯವ್ಯಸನ ಇದರ ಅರ್ಥ, ವ್ಯಾಖ್ಯಾನ, ವ್ಯಸನದಿಂದಾಗುವ ಹಾನಿ, ಮಹಿಳೆ ಮತ್ತು ಮದ್ಯವ್ಯಸನ.

ಅಧ್ಯಾಯ ೨: ಗ್ರಂಥ ಪರಾಮರ್ಶೆ.

ಅಧ್ಯಾಯ ೩ ಮಹಿಳೆಯರಲ್ಲಿ ಮದ್ಯವ್ಯಸನ – ವಿಶ್ಲೇಷಣೆ,

ಅಧ್ಯಾಯ ೪: ಸಾರ, ಶೋಧನೆಗಳು ಮತ್ತು ಸಲಹೆಗಳು.

ಮಹಿಳೆಯರಲ್ಲಿ ಮದ್ಯವ್ಯಸನ - ಕಾರಣಗಳು ಮತ್ತು ಪರಿಸ್ಥಿತಿಗಳು ಇದರ ಸಂಶೋಧನೆಗಾಗಿ ಅಧ್ಯಯನಕ್ಕೆ ಬೇಕಾದ ಉದ್ದೇಶಗಳನ್ನು ರೂಪಿಸಿ ಈ ಸಮಸ್ಯೆಯ ನಿವಾರಣೆಗಾಗಿ ಅಧ್ಯಯನದ ವಿಧಾನಗಳನ್ನು ರೂಪಿಸಿಲಾಯಿತು. ಈ ಸಂಶೋಧನೆಗೆ ಅದರದೇ ಆದ ಚೌಕಟ್ಟುಗಳಿವೆ. ಮುಂದಿನ ಅಧ್ಯಾಯದಲ್ಲಿ ಈ ಸಂಶೋಧನೆಗಾಗಿ ಗ್ರಂಥ ಪರಾಮರ್ಶೆಯನ್ನು ಮಾಡಲಾಗಿದೆ.

ಅಧ್ಯಾಯ ೧

ಗ್ರಂಥ ಪರಾಮರ್ಶೆ

ಅಧ್ಯಾಯ ೧

ಗ್ರಂಥ ಪರಾಮರ್ಶೆ

ಅಧ್ಯಾಯ ಒಂದರಲ್ಲಿ ಮಹಿಳೆಯರಲ್ಲಿ ಮದ್ಯವ್ಯಸನ - ಕಾರಣಗಳು ಮತ್ತು ಪರಿಸ್ಥಿತಿಗಳು ಇದರ ಸಂಶೋಧನೆಗಾಗಿ ಮದ್ಯವ್ಯಸನ ಇದರ ಅರ್ಥ, ವ್ಯಾಖ್ಯಾನ, ಸಮಸ್ಯೆಯ ಆಳ, ಸಂಶೋಧನೆಗೆ ಉದ್ದೇಶಗಳನ್ನು, ಊಹೆಗಳನ್ನು ಮಾಡಲಾಯಿತು. ಈ ಅಧ್ಯಾಯದಲ್ಲಿ ಮದ್ಯವ್ಯಸನದ ಬಗ್ಗೆ ಇದರ ಮೊದಲು ಆದ ಸಂಶೋಧನೆಗಳಿಂದ ಗ್ರಂಥ ಪರಾಮರ್ಶೆಯನ್ನು ಮಾಡಲಾಗಿದೆ.

ಜೀನ್ ಕಿರ್ ಪ್ಯಾಟ್ರಿಕ್ಸ್ ವಿಮೆನ್ ಫಾರ್ ಸೊಬ್ರಾಯ್ಟಿ ಪ್ರಕಾರ "ಅಮೇರಿಕ ಸಂಯುಕ್ತ ಸಂಸ್ಥಾನ ಒಂದರಲ್ಲೇ ಅಂದಾಜು ೭,೫೦೦,೦೦೦ ಮಹಿಳಾ ಅಮಲುವ್ಯಸನಿಗಳಿದ್ದಾರೆ. ಈ ಸಂಖ್ಯೆಯು ಮೈನೆ, ಇದಾಹೊ, ನೇವಡ, ಮೊಂಟಾನ, ನ್ಯೂ ಮೆಕ್ಸಿಕೊ, ಮತ್ತು ಉಟಾ ಈ ದೇಶಗಳ ಜನಸಂಖ್ಯೆಗೆ ಸಮನಾಗಿದೆ. ಖಂಡಿತವಾಗಿಯೂ ಇಷ್ಟು ದೊಡ್ಡ ಸಂಖ್ಯೆಯ ಮಹಿಳೆಯರಿಗೆ ಅವರದೇ ಆದ ಚೇತರಿಕೆಯ ಕಾರ್ಯಕ್ರಮದ ಅಗತ್ಯವಿದೆ.

ವಿಮೆನ್ ಫಾರ್ ಸೊಬ್ರಾಯ್ಟಿ ಇದು ಮಹಿಳಾ ಅಮಲುವ್ಯಸನಿಗಳಿಗಾಗಿ ಇರುವ ಒಂದು ಸಂಸ್ಥೆಯೂ, ಸ್ವ ಸಹಾಯ ಕಾರ್ಯಕ್ರಮವೂ ಆಗಿದೆ. ಅಮಲುವ್ಯಸನಿ ಮಹಿಳೆಯರಿಗಾಗಿ ಇರುವ ರಾಷ್ಟ್ರೀಯ ಮಟ್ಟದ ಮೊದಲ ಸ್ವಸಹಾಯ ಕಾರ್ಯಕ್ರಮವಾಗಿದೆ.

೧೯೭೬ ಜುಲೈ ನಿಂದ 'ವಿಮೆನ್ ಫಾರ್ ಸೊಬ್ರಾಯ್ಟಿ' ಸಂಸ್ಥೆಯು ಮಹಿಳಾ ಅಮಲುವ್ಯಸನಿಗಳಿಗಾಗಿ ಸೇವೆಯನ್ನು ಒದಗಿಸುತ್ತಿದೆ. ಮಹಿಳೆಯರ ಚೇತರಿಕೆಯ ಹುಡುಗಾಟದಿಂದ "ನ್ಯೂ ಲೈಫ್" ಎಂಬ ಕಾರ್ಯಕ್ರಮವು ಪ್ರಾರಂಬವಾಯಿತು. ಇಂದು ದೇಶದೆಲ್ಲೆಡೆ ಹಾಗೂ ಇತರ ದೇಶಗಳಲ್ಲಿಯೂ ಈ ಸ್ವ ಸಹಾಯ ಗುಂಪುಗಳು ಕಂಡುಬರುತ್ತವೆ.

"ಮಹಿಳೆಯರ ಮೆದುಳಿಗೆ ಮದ್ಯ ಸೇವನೆಯಿಂದ ಅತೀ ಹೆಚ್ಚು ಹಾನಿಯಾಗುತ್ತದೆ. ಮದ್ಯ ಸೇವನೆಯಿಂದ ಪುರುಷರ ದೇಹದ ಮೇಲಾಗುವ ಪರಿಣಾಮಕ್ಕಿಂತ ಮಹಿಳೆಯರ ದೇಹದ

[illegible]

[illegible]

[illegible]

[illegible]

[illegible]

[illegible]

[illegible]

ಮೇಲೆ ಅತೀ ಹೆಚ್ಚಿನ ಪರಿಣಾಮವಾಗುತ್ತದೆ. ಅತಿಯಾದ ಮದ್ಯ ಸೇವನೆಯಿಂದ ಆಲೋಚನೆ, ಸಮತೋಲನ ಹಾಗೂ ದೇಹದ ಮೇಲಾಗುವ ಪರಿಣಾಮಗಳ ಬಗ್ಗೆ ವಿಜ್ಞಾನಿಗಳು ಸಂಶೋದನೆಗಳನ್ನು ನಡೆಸುತ್ತಿದ್ದಾರೆ.

ಸಾಮಾಜಿಕ ಆರೋಗ್ಯ ಪರಿಣತರ, ಸಾಮಾಜಿಕ ವಿಜ್ಞಾನಿಗಳ ಹಾಗೂ ಸಾಮಾಜಿಕ ಕಾರ್ಯಕರ್ತರ ಪ್ರಕಾರ "ಅಮಲುತನವು ಇಡೀ ವಿಶ್ವಕ್ಕೇ ಒಂದು ಕಂಟಕವಾಗಿದೆ, ಅದರಲ್ಲೂ ಬಡ ಕುಟುಂಬಗಳಿಗೆ ಇದು ಮತ್ತಷ್ಟು ಹಾನಿಕರವಾಗಿದೆ. ಇಂದು ಜಗತ್ತಿನ ಕಾಯಿಲೆಗಳಲ್ಲಿ ಶೇಕಡಾ ಆರಷ್ಟು ಕಾಯಿಲೆಗಳಿಗೆ ಅಮಲುಸೇವನೆಯೇ ಕಾರಣವಾಗಿದೆ. ಇದು ತಂಬಾಕು ಹಾಗೂ ಅಧಿಕ ರಕ್ತದೊತ್ತಡದಿಂದಾಗುವ ಮರಣಗಳು ಹಾಗೂ ದೈಹಿಕ ನ್ಯೂನತೆಗಳಿಗೆ ಸಮನಾಗಿದೆ."

ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪ್ರಕಾರ "ಕೆಲಸಗಾರರಲ್ಲಿ ೩ ರಿಂದ ೫ ಶೇಕಡದಷ್ಟು ಜನರು ಅಮಲುವ್ಯಸನಿಗಳು ಮತ್ತು ಶೇಕಡಾ ೧೫ ರಷ್ಟು ಕೆಲಸಗಾರರು ಅತಿಯಾದ ಅಮಲು ಸೇವನೆ ಮಾಡಿ ವ್ಯಸನಿಗಳಾಗುವ ಅಪಾಯವಿದೆ. ಐತಿಹಾಸಿಕವಾಗಿ ಏಶ್ಯಾದ ದೇಶಗಳಲ್ಲಿ ಅಮಲು ಸೇವನೆಯು ಅಮೇರಿಕಾ, ಯೂರೋಪ್ ಮತ್ತು ಲ್ಯಾಟಿನ್ ಅಮೇರಿಕಾ ದೇಶಗಳಿಗಿಂತ ಬಹಳ ಕಡಿಮೆಯಾಗಿದ್ದರೂ ಭಾರತ, ವಿಯೆಟ್ನಮ್ ಮತ್ತು ಚೈನಾ ದೇಶಗಳಲ್ಲಿ ಗಮನಾರ್ಹವಾಗಿ ಹೆಚ್ಚುತ್ತಿದೆ."

ಸಾಮಾಜಿದ ಸಂಶೋದಕರು ಇನ್ನೂ ವ್ಯಸನಕ್ಕೆ ಕಾರಣವಾಗುವ ಅಂಶಗಳ ಹುಡುಕಾಟದಲ್ಲಿದ್ದಾರೆ. ಹೆಚ್ಚಾಗಿ ವಂಶವಾಹಿನಿಗಳು ಹಾಗೂ ಪರಿಸರವು ಅಮಲು ವ್ಯಸನಕ್ಕೆ ಮುಖ್ಯ ಕಾರಣವಾಗಿ ಕಾಣಲಾಗುತ್ತಿದೆ. ಅತೀ ಕುಡಿತದಿಂದಾಗಿ ಆಗುವ ದೈಹಿಕ ಅಪಾಯಗಳು ಎಲ್ಲರಿಗೂ ತಿಳಿದಿವೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ೧೦ ಶೇಕಡಾದಿಂದ ೩೦ ಶೇಕಡದಷ್ಟು ಲಿವರ್ ಕ್ಯಾನ್ಸರ್, ಸಿರೋಸಿಸ್, ಅಪಸ್ಮಾರ, ಅಪಘಾತಗಳು ಮತ್ತು ಕೊಲೆಗಳು ಅಮಲು ಸೇವನೆಯಿಂದಾಗುತ್ತವೆ.

ಬಡ ಕುಟುಂಬಗಳಿಗೆ ಈ ಅಪಾಯಗಳು ಇನ್ನೂ ಅಧಿಕ. ಉದಾಹರಣೆಗೆ ಅಮಲು ಸೇವನೆ ಮಾಡುವ ಬಡ ಜನರಲ್ಲಿ ಅಪೌಶ್ಟಿಕತೆ ಹಾಗೂ ಯಕೃತ್ತಿನ ಹಾನಿ ಬಹಳ ಸಾಮಾನ್ಯ. ಅತೀ ಬಡವರಲ್ಲಿ ಅಮಲು ಸೇವನೆಯಿಂದ ಬಹಳಷ್ಟು ಮರಣಗಳು ಸಂಬವಿಸುತ್ತಿವೆ.

ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಎಂಡ್ ನ್ಯೂರೋ ಸಾಯನ್ಸಸ್, ಬೆಂಗಳೂರು ಇದರ ಆಸೋಸಿಯೇಟ್ ಪ್ರೊಫೆಸರ್ ಆಫ್ ಸೈಕಿಯಾಟ್ರಿ ವಿವೇಕ್ ಬೆನಗಲ್ ಪ್ರಕಾರ "ಭಾರತ ಮತ್ತು ಇತರ ಮುಂದುವರಿಯುತ್ತಿರುವ ಸಮಾಜಗಳಲ್ಲಿ ಮದ್ಯ ಮತ್ತು ತಂಬಾಕು ಸೇವನೆಯಿಂದಾಗುವ ನಷ್ಟಗಳು ಅತಿಯಾಗಿದೆ ಹಾಗೂ ಅದರಲ್ಲೂ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಪಂಗಡಗಳಲ್ಲಿ ಈ ನಷ್ಟಗಳು ಇನ್ನೂ ಅತಿಯಾಗಿವೆ.

ಮಾನಸಿಕ ಅವಲಂಬನೆ:

ಒಮ್ಮೆ ಮದ್ಯದ ರುಚಿ ನೋಡಿ, ಅದು ಪ್ರಾರಂಬದಲ್ಲಿ ಕೊಡುವ ಖುಷಿಯ ಅನುಭವವಾದ ಮೇಲೆ ಅದರ ಅಮಲಿನಲ್ಲಿ ಶಾರೀರಿಕ ಮತ್ತು ಮಾನಸಿಕ ನೋವುಗಳು ತಾತ್ಕಾಲಿಕವಾಗಿಯಾದರೂ ತನ್ನ ಅನುಭವಕ್ಕೆ ಬರದಂತಹ ಅನುಭವವಾದ ಮೇಲೆ ಜೊತೆಗೆ ಸಹಚರರ ಮತ್ತು ಪರಿಸರದ ಒತ್ತಾಯದಿಂದ ವ್ಯಕ್ತಿ ಆಗಾಗ್ಗೆ ಮದ್ಯಪಾನ ಮಾಡಲು ಪ್ರಾರಂಬಿಸುತ್ತಾನೆ. ಕ್ರಮೇಣ ಮಾನಸಿಕ ಅವಲಂಬನೆ ಬೆಳೆಯತೊಡಗುತ್ತದೆ. ಮನಸ್ಸಿಗೆ ತುಸು ಬೇಸರವಾಯಿತು, ಕುಡಿಯೋಣ ಎನಿಸುತ್ತದೆ. ಕೆಲಸ ಮಾಡಿ ಸ್ವಲ್ಪ ಶ್ರಮವಾಯಿತು, ನಿದ್ರೆ ಬರಲು ತಡವಾಯಿತು, ಮದ್ಯ ಸೇವನೆಗೆ ಮನಸ್ಸು ಹಾತೊರೆಯುತ್ತದೆ.

ತಾಳಿಕೆ:

ಆಲ್ಕೊಹಾಲ್ ನಂತಹ ಮಾದಕ ವಸ್ತುವಿನ ದೊಡ್ಡ ಮತ್ತು ಅಷ್ಟೇ ಅಪಾಯಕಾರಿ ದುರ್ಗುಣವೆಂದರೆ "ತಾಳಿಕೆ". ಮೆದುಳಿನ ನರಕೋಶಗಳು ಆಲ್ಕೊಹಾಲ್ ಗೆ ಹೊಂದಿಕೊಂಡು ವ್ಯಕ್ತಿ ಮದ್ಯಪಾನದಿಂದ ನಿರೀಕ್ಷಿಸುವ 'ಕಿಕ್' ಸಿಗುವುದಿಲ್ಲ, ಖುಷಿ ಸಿಗುವುದಿಲ್ಲ. ಆಗ ಆತ ಮದ್ಯದ ಪ್ರಮಾಣವನ್ನು ಹೆಚ್ಚಿಸುತ್ತಾನೆ, ಹೆಚ್ಚಿಸುತ್ತಲೇ ಹೋಗುತ್ತಾನೆ. ತನ್ನ ಸಂಪಾದನೆಯ ಹಣವನ್ನೆಲ್ಲಾ, ಆಸ್ತಿಪಾಸ್ತಿಯನ್ನೆಲ್ಲಾ ಆಲ್ಕೊಹಾಲ್ ಕೊಂಡುಕೊಳ್ಳಲು ಉಪಯೋಗಿಸುತ್ತಾನೆ. ಈ ತಾಳಿಕೆಯ ಗುಣದಿಂದಾಗಿ ಆಲ್ಕೊಹಾಲ್ ಹಾನಿಕರವಾಗಿದೆ.

ದೈಹಿಕ ಅವಲಂಬನೆ:

ಪ್ರತಿದಿನ ಕುಡಿಯುವ ಮಾಡಿದ ವ್ಯಕ್ತಿ, ಒಂದು ದಿನ ಅಕಸ್ಮಾತ್ ಕುಡಿಯದಿದ್ದರೆ ಮನಸ್ಸಿಗೆ ಏನೋ ಒಂದು ರೀತಿಯ ತಹತಹ, ಚಡಪಡಿಕೆ, ಹಿಂಸೆ, ಏನೋ ಮುಖ್ಯವಾದದ್ದನ್ನು ಕಳೆದುಕೊಂಡಂತೆ ಸಂಕಟಪಡುತ್ತಾನೆ. ಜೊತೆಗೆ ತನ್ನ ಕೈಗಳು ನಡುಗುವುದನ್ನು ಕಂಡು ಗಾಬರಿ ಬೀಳುತ್ತಾನೆ. ನಾಲಗೆ ತೊದಲುತ್ತದೆ, ವಿಪರೀತ ಬೆವರು, ಶರೀರದ ಮಾಂಸಖಂಡಗಳು ನೋವನ್ನುಂಟುಮಾಡುತ್ತವೆ. ವಾಂತಿ ಬರುವಂತಾಗುತ್ತದೆ. ತಲೆ ಭಾರವಾಗಿ ಆಲೋಚಿಸುವುದೇ ಕಷ್ಟವಾಗುತ್ತದೆ. ಕೆಲವು ಸಲ ಫಿಟ್ಸ್ ಬಂದರೂ ಬರಬಹುದು. ಈ ಎಲ್ಲ ಲಕ್ಷಣಗಳು ಆಲ್ಕೊಹಾಲ್ ಸೇವನೆ ಮಾಡಿದ ಐದು ಹತ್ತು ನಿಮಿಷಗಳಲ್ಲಿ ಮಾಯವಾಗುವುದನ್ನು ಕಂಡಾಗ ವ್ಯಕ್ತಿಗೆ ಆಲ್ಕೊಹಾಲ್ 'ದೇವರಿಗೆ ಸಮಾನವಾಗುತ್ತದೆ.

"ಅಮಲೇರುವ ಮದ್ಯ ಸೇವನೆ ಮಾಡುವುದು ಆತ್ಮಹತ್ಯೆ ಮಾಡಿಕೊಂಡಂತೆ. ಅಮಲು ಸೇವಿಸುವ ವ್ಯಕ್ತಿಯು ತನ್ನ ಆತ್ಮವನ್ನು ನಾಶಗೊಳಿಸುತ್ತಾನೆ..... ಆತ್ಮ ನಾಶ ಮಾಡುವುದು, ದೇಹ ನಾಶ ಮಾಡುವುದಕ್ಕಿಂತ ಹೇಯವಾಗಿದೆ. - ಮಹಾತ್ಮಾ ಗಾಂಧಿ.

ಮಾದಕ ವಸ್ತುಗಳು ಇಂದು ದೊಡ್ಡ ಪಿಡುಗಾಗಿದೆ. ಅವುಗಳ ಮಾಯಾಜಾಲದಲ್ಲಿ ನಮ್ಮ ಯುವ ಜನಾಂಗ ಸಿಲುಕಿ ಜರ್ಝರಿತವಾಗಿದೆ. ಮಾದಕ ವಸ್ತುವಿನ ಸೇವನೆಯಿಂದ ಮೈ - ಮನಸ್ಸಿನ ಸಮತೋಲನ ತಪ್ಪಿ, ಅನೇಕ ಬಗೆಯ ಮನೋ-ದೈಹಿಕ ಬೇನೆಗಳು ಕಾಣಿಸಿಕೊಳ್ಳುತ್ತವೆ. ಈ ವಸ್ತುಗಳಿಂದಾಗಿ ದಿನೇ ದಿನೇ ಅಪಘಾತ, ಅಪರಾದಗಳು ಹೆಚ್ಚುತ್ತವೆ.

ಕುಡಿತದಿಂದ ತಮ್ಮ ಹಣ, ಆಸ್ತಿ, ಉದ್ಯೋಗ, ಗೌರವದ ಜೊತೆಗೆ ದೈಹಿದ ಹಾಗೂ ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡು, ತಮ್ಮ ಕುಟುಂಬದವರಿಗೂ ಕಷ್ಟ, ನಶ್ಟ, ಮಾನಸಿಕ ಹಿಂಸೆ ಹಾಗೂ ಅಪಮಾನಕ್ಕೆ ಗುರಿ ಮಾಡುವ, ಕುಟುಂಬದವರಿಗೂ, ಸಮಾಜಕ್ಕೂ ಭಾರವಾಗಿ ಹೇಗೊ ಬದುಕುವವರನ್ನು ನೋಡಿರಬಹುದು.

ಮದ್ಯಪಾನ ಮಿತಿಮೀರಿ ರೋಗವಾಗಿ ಪರಿಣಮಿಸುವುದನ್ನು ಸೂಚಿಸುವ 'ಆಲ್ಕೊಹಾಲಿಸಮ್' (ಮದ್ಯವ್ಯಸನ) ಎಂಬುದನ್ನು ಮೊದಲು ಬಳಸಿದಾತ ಸ್ವೀಡಿಸ್ ವೈದ್ಯ ಮ್ಯಾಗ್ನೆಸ್ ಹಸ್ - ೧೮೪೯ರಲ್ಲಿ.

ವ್ಯಸನಕ್ಕೆ ತುತ್ತಾದ ವ್ಯಕ್ತಿಯ ಕುಟುಂಬದವರ ಮೇಲಾಗುವ ಪರಿಣಾಮಗಳು:

ಮನಶಾಸ್ತ್ರಜ್ಞ್ಯರು ಮಾಡಿದ ಅಧ್ಯಯನ ತೋರಿಸುವ ಪ್ರಕಾರ ವ್ಯಸನಕ್ಕೆ ಬಲಿಯಾದ ವ್ಯಕ್ತಿ ಮಾತ್ರವಲ್ಲದೆ ಆತನೊಡನೆ ಜೀವಿಸುವ ಕುಟುಂಬದ ಸದಸ್ಯರು - ತಾಯಿ, ತಂದೆ, ಪತಿ/ಪತ್ನಿ, ಮಕ್ಕಳು, ಅಕ್ಕ ತಂಗಿಯರು, ಅಣ್ಣ ತಮ್ಮಂದಿರು, ಗೆಳೆಯರು ಮತ್ತಿತರ ಆತ್ಮೀಯರು ಸಹ ಮಾನಸಿಕ ಕ್ಷೋಬೆಗೆ ಒಳಗಾಗುತ್ತಾರೆ.

ಬಹಳ ಸಮೀಪ ಮತ್ತು ಆತ್ಮೀಯರಾದ ತಾಯಿ, ಪತ್ನಿ, ಮತ್ತು ಮಕ್ಕಳ ಚಿತ್ತ ಸ್ವಾಸ್ಥ್ಯ ಅತಿಯಾಗಿ ಕೆಡುವ ಅಪಾಯಗಳಿರುತ್ತವೆ.ಇವರು ಕುಡಿಯುವ ವ್ಯಕ್ತಿಯ ಅಕ್ರತ್ಯಗಳಿಂದಾಗಿ ಸತತ ಅವಮಾನಿತರಾಗಿ ರೋಸಿ, ಹೆದರಿ, ನೊಂದು ಮಾನಸಿಕವಾಗಿ ಜರ್ಜರಿತವಾಗುತ್ತಾರೆ. ಇದು ಮುಂದುವರಿದ ಪರಿಣಾಮವಾಗಿ ಇವರುಗಳು ಚಿತ್ತ ಸ್ವಾಸ್ಥ್ಯ ಕಳೆದುಕೊಂಡು ಅತಿಯಾದ ಕೋಪ, ಉದ್ವೇಗ, ಕೀಳರಿಮೆ, ಹೆದರಿಕೆ ಮುಂತಾದ ಮಾನಸಿಕ ಸಮಸ್ಯೆಗಳೂ ಇವರಲ್ಲಿ ಕಾಣಿಸಿಕೊಳ್ಳುತ್ತವೆ. ಚಿಕ್ಕ ಪುಟ್ಟ ಸಂಗತಿಗಳಿಗೆ ಅತಿಯಾಗಿ ರೇಗುತ್ತಾರೆ. ಕುಡಿಯುವ ವ್ಯಕ್ತಿಯಿಂದಾಗಿ ಇವರ ಭಾವನೆಗಳಿಗೆ ಪದೇ ಪದೇ ನೋವು ಉಂಟಾಗುವುದರಿಂದ ಇವರ ವರ್ತನೆಯಲ್ಲಿ ವಿಪರೀತ ಏರುಪೇರುಗಳಾಗುವ ಸಂಭವವಿದೆ. ಮದ್ಯ ವ್ಯಸನಿಯ ಮಕ್ಕಳಿಗೆ ಸರಿಯಾದ ಸಹಾಯ, ಪ್ರೀತಿ ಮತ್ತು ಮಾರ್ಗದರ್ಶನ ಸಿಗದೆ ಅವರ ಬುದ್ಧಿ, ಗುಣನಡತೆ ಕೆಟ್ಟದಾಗಿ ರೂಪುಗೊಳ್ಳುವ ಸಂಭವವಿದೆ.

ಆಲ್ಕೋಹಾಲಿಕ್ಸ್ ಅನಾನಿಮಸ್

ಡಾ. ಬಾಬ್ ಹಾಗೂ ಬಿಲ್. ಡಬ್ಲ್ಯು. ಇವರಿಂದ ಅಮೇರಿಕದ ನ್ಯೂಯಾರ್ಕ್ ನಗರದಲ್ಲಿ ೧೯೩೫ರಲ್ಲಿ ಆಲ್ಕೋಹಾಲಿಕ್ಸ್ ಅನಾನಿಮಸ್ ಪ್ರಾರಂಭವಾಯಿತು. ಅಮಲು ಸೇವನೆಯಿಂದ ಬಳಲುತ್ತಿರುವ ಜನರಿಗಾಗಿ ಅಮಲು ವ್ಯಸನದಿಂದ ಚೇತರಿಸುತ್ತಿರುವ ವ್ಯಕ್ತಿಗಳೀಂದ ಈ ಸಹಯೋಗವು ಕಾರ್ಯಾಚರಿಸುತ್ತಿದೆ.

ಈ ಸಹಯೋಗದಲ್ಲಿ ಸದಸ್ಯರು ತಮ್ಮ ಅನುಭವ, ಛಲ ಮತ್ತು ಭರವಸೆಯನ್ನು ಅವರೊಳಗೆ ಹಂಚಿಕೊಂಡು ತಮ್ಮ ಮದ್ಯ ವ್ಯಸನದ ಸಮಸ್ಯೆಯನ್ನು ಬಗೆಹರಿಸಲು ಹಾಗೂ ಇತರರು ಅದರಿಂದ ಚೇತರಿಸಲು ಸಹಾಯಕವಾಗುವ ಪುರುಷರ ಮತ್ತು ಸ್ತ್ರೀಯರ ಒಡನಾಡಿತನವಾಗಿದೆ.

ಇದರ ಸದಸ್ಯನಾಗಬೇಕಾಗರೆ ಬೇಕಾದ ಕೇವಲ ಅವಶ್ಯಕತೆಯೆಂದರೆ ಮದ್ಯ ಸೇವನೆಯನ್ನು ತೊರೆಯಬೇಕೆಂಬ ಹಂಬಲ. ಆಲ್ಕೋಹಾಲಿಕ್ಸ್ ಅನಾನಿಮಸ್ ಸದಸ್ಯತನಕ್ಕೆ ಚಂದಾ ಅಥವಾ ಶುಲ್ಕವನ್ನು ತೆರಬೇಕಾಗಿಲ್ಲ. ಅವರು ಇಷ್ಟಾನುಸಾರ ನೀಡುವ ವಂತಿಗೆಯಿಂದಲೇ ಸ್ವಾವಲಂಭಿಗಳಾಗಿದ್ದಾರೆ. ಆಲ್ಕೋಹಾಲಿಕ್ಸ್ ಅನಾನಿಮಸ್ ಯಾವುದೇ ಮತ, ಪಂಥ, ಜಾತಿ ವರ್ಗ, ರಾಜಕೀಯ ಪಕ್ಷ, ಸಂಘಟನೆ ಯಾ ಸಂಸ್ಥೆಯೊಡನೆ ಸಂಬಂದವನ್ನು ಇರಿಸಿಕೊಂಡಿಲ್ಲ. ಯಾವುದೇ ವಿವಾದಾತ್ಮಕ ವಿಚಾರಗಳಲ್ಲಿ ಸೇರಲು ಅಪೇಕ್ಷಿಸುವುದಿಲ್ಲ. ಯಾವುದೇ ಉದ್ದೇಶಗಳನ್ನು ಸಮರ್ಥಿಸುವುದಿಲ್ಲ, ವಿರೋಧಿಸುವುದೂ ಇಲ್ಲ. ಸ್ವಯಂ ಮದ್ಯಪಾನದಿಂದ ದೂರ ಇರುವುದು ಮತ್ತು ಇತರ ಮದ್ಯ ವ್ಯಸನಿಗಳಿಗೆ ಮದ್ಯಪಾನದಿಂದ ದೂರವಿರಲು ಸಹಾಯ ಮಾಡುವುದು ಆಲ್ಕೋಹಾಲಿಕ್ಸ್ ಅನಾನಿಮಸ್ ಸಹಯೋಗದ ಪ್ರಾಥಮಿಕ ಉದ್ದೇಶವಾಗಿದೆ.

ಅನಾಮಿಕ ಅಮಲುವ್ಯಸನಿಗಳ ಸಹಯೋಗವು ಹನ್ನೆರಡು ಹೆಜ್ಜೆಗಳ ಕಾರ್ಯಕ್ರಮವನ್ನು ನೀಡಿದೆ. ಈ ಹನ್ನೆರಡು ಹೆಜ್ಜೆಗಳು ಇಂತಿವೆ.

೧. ಮದ್ಯದ ಎದುರು ನಾವು ಬಲಹೀನರಾಗಿದ್ದೇವೆಂದೂ, ನಮ್ಮ ಜೀವನವನ್ನು ನಿರ್ವಹಿಸಲು ಅಶಕ್ತರಾಗಿದ್ದೇವೆಂದೂ ಒಪ್ಪಿಕೊಂಡೆವು.

೨. ನಮಗಿಂತಲೂ ಮಿಗಿಲಾಗಿರುವ ಒಂದು ಶಕ್ತಿಯು ನಮ್ಮ ಮಾನಸಿಕ ಸಮತೋಲನವನ್ನು ಪುನಃ ಯಥಾಸ್ಥಿತಿಯಲ್ಲಿ ನೆಲೆಗೊಳಿಸಬಲ್ಲದೆಂದು ನಂಬಿದೆವು.

೩. ನಾವು ಭಗವಂತನನ್ನು ಅರಿತುಕೊಂಡಂತೆ ನಮ್ಮ ಸಂಕಲ್ಪವನ್ನೂ, ಜೀವನವನ್ನೂ ಆತನ ಆರೈಕೆಗೆ ಒಪ್ಪಿಸಲು ನಿರ್ಧರಿಸಿದೆವು.

೪. ಶೋಧನಾತ್ಮಕವಾಗಿ ಹಾಗೂ ನಿರ್ಭೀತವಾಗಿ ನಮ್ಮ ನೈತಿಕ ಪಟ್ಟಿಯನ್ನು ಮಾಡಿದೆವು.

೫. ಭಗವಂತನೊಡನೆ, ನಮ್ಮೊಡನೆ ಹಾಗೂ ಇನ್ನೊಬ್ಬ ಮಾನವನೊಡನೆ ನಾವು ಮಾಡಿದ್ದ ತಪ್ಪುಗಳ ನಿಜ ಸ್ವರೂಪವನ್ನು ಒಪ್ಪಿಕೊಂಡೆವು.

೬. ನಮ್ಮ ನಡತೆಯಲ್ಲಿರುವ ಇವೆಲ್ಲಾ ಕುಂದುಕೊರತೆಗಳನ್ನು ಭಗವಂತನು ನಿವಾರಿಸುವಂತೆ ಸಂಪೂರ್ಣ ಸಿದ್ಧರಾದೆವು.

೭. ನಮ್ಮಲ್ಲಿರುವ ಕೊರತೆಗಳನ್ನು ನಿವಾರಿಸಲು ಆತನನ್ನು ದೈನ್ಯದಿಂದ ಬೇಡಿಕೊಂಡೆವು.

೮. ನಾವು ಹಾನಿ ಮಾಡಿದ್ದ ಎಲ್ಲಾ ವ್ಯಕ್ತಿಗಳ ಪಟ್ಟಿಯನ್ನು ಮಾಡಿದೆವು ಮತ್ತು ಅವರಿಗೆಲ್ಲ ಪರಿಹಾರವನ್ನು ಒದಗಿಸಲು ಇಷ್ಟಪಟ್ಟೆವು.

೯. ಅಂಥ ವ್ಯಕ್ತಿಗಳಿಗೆ ನೇರವಾಗಿ ಪರಿಹಾರ ಒದಗಿಸಿದಲ್ಲಿ ಅವರಿಗೆ ಅಥವ ಇತರರಿಗೆ ನೋವಾಗುವ ಅವಕಾಶವನ್ನು ಹೊರತುಪಡಿಸಿ ಸಾಧ್ಯವಿದ್ದಲ್ಲೆಲ್ಲಾ ಅವರಿಗೆ ನೇರ ಪರಿಹಾರವನ್ನು ಒದಗಿಸಿದೆವು.

೧೦. ವೈಯಕ್ತಿಕ ಪಟ್ಟಿಯನ್ನು ಮಾಡುವುದನ್ನು ಮುಂದುವರಿಸಿದೆವು ಮತ್ತು ತಪ್ಪಿ ನಡೆದುಕೊಂಡಿದ್ದಲ್ಲಿ ತಕ್ಷಣವೇ ಒಪ್ಪಿಕೊಂಡೆವು.

೧೧. ನಾವು ಅರಿತುಕೊಂಡಂತಾ ಭಗವಂತನ ನಮಗಾಗಿ ಇರುವ ಸಂಕಲ್ಪದ ಕೇವಲ ತಿಳುವಳಿಕೆಯನ್ನು ಹಾಗೂ ಅದನ್ನು ನಿರ್ವಹಿಸಲು ಶಕ್ತಿಯನ್ನು ದಯಪಾಲಿಸಲು ಬೇಡುತ್ತಾ, ಪ್ರಾರ್ಥನೆ ಹಾಗೂ ಧ್ಯಾನದ ಮೂಲಕ ಆತನೊಡನೆ ಚೈತನ್ಯದ ಸಂಪರ್ಕವನ್ನು ವೃದ್ಧಿಪಡಿಸಲು ಕೋರಿದೆವು.

೧೨. ಈ ಮೆಟ್ಟಿಲುಗಳ ಪರಿಣಾಮವಾಗಿ ಆಧ್ಯಾತ್ಮಿಕ ಜಾಗತಿಯನ್ನುಹೊಂದಿದ ನಾವು, ಈ ಸಂದೇಶವನ್ನು ಮದ್ಯರೋಗಿಗಳಿಗೆ ತಲುಪಿಸಲು ಮತ್ತು ಈ ತತ್ವಗಳನ್ನು ನಮ್ಮ ಎಲ್ಲಾ ವ್ಯವಹಾರಗಳಲ್ಲಿ ಆಚರಿಸಲು ಪ್ರಯತ್ನಿಸಿದೆವು.

ಗ್ರಂಥ ಪರಾಮರ್ಶೆಯಿಂದ ಮದ್ಯ ವ್ಯಸನದ ಬಗ್ಗೆ ಈ ಮೊದಲು ಆದ ಸಂಶೋಧನೆಗಳ ಬಗ್ಗೆ ತಿಳಿಯುವುದು ಸಾಧ್ಯವಾಯಿತು. ಮುಂದಿನ ಅಧ್ಯಾಯದಲ್ಲಿ ಮಹಿಳೆಯರಲ್ಲಿ ಮದ್ಯವ್ಯಸನ - ಕಾರಣಗಳು ಮತ್ತು ಪರಿಸ್ಥಿತಿಗಳು ಇದರ ಸಂಶೋಧನೆಗಾಗಿ ಮಾಡಿದ ಪ್ರಶ್ನಾವಳಿಗೆ ಮದ್ಯವ್ಯಸನಕ್ಕೆ ಒಳಗಾಗಿ ಚಿಕಿತ್ಸೆಗಾಗಿ ಬಂದಂತಹ ಮಹಿಳೆಯರಿಂದ ಉತ್ತರಗಳನ್ನು ಪಡೆದು ಅದರ ವಿಶ್ಲೇಷಣೆಯನ್ನು ಮಾಡಲಾಗಿದೆ.

ಅಧ್ಯಾಯ ೩

ಮಹಿಳೆಯರಲ್ಲಿ ಮದ್ಯವ್ಯಸನ – ವಿಶ್ಲೇಷಣೆ

ಅಧ್ಯಾಯ ೩:

ಹಿಂದಿನ ಅಧ್ಯಾಯಗಳಲ್ಲಿ ಮದ್ಯವ್ಯಸನದ ಅರ್ಥ, ವ್ಯಾಖ್ಯಾನ, ವ್ಯಸನದಿಂದಾಗುವ ಹಾನಿ ಇವುಗಳ ಬಗ್ಗೆ ತಿಳಿದುಕೊಂಡು ಮಹಿಳೆಯರಲ್ಲಿ ಮದ್ಯವ್ಯಸನಕ್ಕೆ ಕಾರಣವಾಗುವ ಅಂಶಗಳ ಬಗ್ಗೆ ತಿಳಿಯಲು ಪ್ರಶ್ನಾವಳಿಯನ್ನು ರೂಪಿಸಿ ಮದ್ಯವ್ಯಸನಿ ಮಹಿಳೆಯರಿಂದ ಉತ್ತರಗಳನ್ನು ಸಂಗ್ರಹಿಸಲಾಯಿತು. ಹೀಗೆ ಪಡೆದ ಉತ್ತರಗಳನ್ನು ಈ ಅಧ್ಯಾಯದಲ್ಲಿ ಕ್ರಮವಾಗಿ ವಿಶ್ಲೇಷಿಸಲಾಗಿದೆ

I. ಮಹಿಳಾ ಮದ್ಯವ್ಯಸನಿಗಳ ಸಾಮಾಜಿಕ, ಬೌಗೋಳಿಕ ಹಿನ್ನೆಲೆಯ ವಿವರ:

೧. ಪ್ರಾಯ:

ಮದ್ಯವ್ಯಸನಕ್ಕೆ ಒಳಪಟ್ಟ ಶೇ.೧೨ ಮಹಿಳೆಯರು ೨೫ ವಯಸ್ಸಿಗಿಂತ ಕಡಿಮೆಯವರಾಗಿದ್ದಾರೆ. ಶೇ.೨೪ ಮಹಿಳೆಯರು ೨೬ ರಿಂದ ೩೫ ವಯಸ್ಸಿನವರು, ಶೇ. ೪೦ ಮಹಿಳೆಯರು ೩೬ ರಿಂದ ೪೫ ವಯಸ್ಸಿನವರು, ಶೇ. ೧೬ ಮಹಿಳೆಯರು ೪೬ ರಿಂದ ೫೫ ವಯಸ್ಸಿನವರು ಹಾಗೂ ಶೇ.೮ ರಷ್ಟು ಮಹಿಳೆಯರು ೫೬ ವಯಸ್ಸಿಗಿಂತ ಮೇಲ್ಪಟ್ಟವರಾಗಿದ್ದಾರೆ.

ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ವ್ಯಸನಕ್ಕೆ ೩೫ ರಿಂದ ೪೫ನೇ ವಯಸ್ಸಿನ ಮಹಿಳೆಯರಲ್ಲಿ ಮದ್ಯವ್ಯಸನವು ಹೆಚ್ಚಾಗಿ ಕಂಡು ಬರುತ್ತದೆ. ಮಹಿಳೆಯರು ಮದ್ಯಪಾನ ಮಾಡುವುದನ್ನು ಸಮಾಜವು ಅಂಗೀಕರಿಸುವುದಿಲ್ಲ ಆದರೂ ಬಾಣಂತನದಲ್ಲಿ ಮದ್ಯವನ್ನು ಔಷಧಿ ರೂಪದಲ್ಲಿ ನೀಡುವ ಕ್ರಮ ನಮ್ಮ ಸಮಾಜದಲ್ಲಿ ಇರುವುದು ಕಂಡುಬರುತ್ತದೆ. ಹಾಗೂ ಕೆಲವೊಮ್ಮೆ ಸಮಾರಂಭಗಳಲ್ಲಿ ಮಹಿಳೆಯರಿಗೆ ಮದ್ಯದ ರುಚಿ ಸಿಕ್ಕಿ ವ್ಯಸನಿಗಳಾಗುವ ಸಂಭವವಿರುವುದು. ಮದುವೆಯಾಗಿ ಹೋದ ಮನೆಯಲ್ಲಿ ಮದ್ಯ ಸೇವನೆಯ ವಾತಾವರಣವಿರುವುದೂ ಸಹ ಮಹಿಳೆಯರು ೨೬ ರಿಂದ ೪೫ನೇ ವಯಸ್ಸಿಗೆ ಹೆಚ್ಚಾಗಿ ವ್ಯಸನಕ್ಕೆ ಒಳಪಡುವುದು ಕಾಣಸಿಗುತ್ತದೆ. ಕುಟುಂಬದಲ್ಲಿ ಮದ್ಯಸೇವನೆಯ ವಾತಾವರಣವಿದ್ದರೆ ಮಹಿಳೆಯರು ಮದ್ಯಸೇವನೆಯನ್ನು ತಪ್ಪು ಎಂಬ ಅರಿವಿಲ್ಲದೆ ಸಮಾನತೆಯ, ಪ್ರತಿಷ್ಟೆಯ ಕುರುಹಾಗಿ ಸೇವಿಸುವುದೂ ಕಾಣಸಿಗುತ್ತದೆ.

೨. ವಿದ್ಯಾಭ್ಯಾಸ:

ಮದ್ಯವ್ಯಸನಕ್ಕೆ ಒಳಪಟ್ಟ ಶೇ.೩೨ ಮಹಿಳೆಯರು ಅನಕ್ಷರಸ್ಥರು, ಶೇ.೨೦ ರಷ್ಟು ಮಹಿಳೆಯರು ಪ್ರಾಥಮಿಕ ವಿದ್ಯಾಭ್ಯಾಸ ಪಡೆದವರು, ಶೇ. ೫೦ ರಷ್ಟು ಮಹಿಳೆಯರು ಪ್ರೌಢ ಶಿಕ್ಷಣ ಪಡೆದಿರುತ್ತಾರೆ. ಶೇ.೬ ರಷ್ಟು ಮಹಿಳೆಯರು ಪದವಿಪೂರ್ವ ಶಿಕ್ಷಣ, ಶೇ.೧೦ ರಷ್ಟು ಮಹಿಳೆಯರು ಪದವಿ ಹಾಗೂ ಶೇ.೨ ವೃತ್ತಿಪರ ಶಿಕ್ಷಣ ಪಡೆದವರಾಗಿದ್ದಾರೆ.

ಮದ್ಯವ್ಯಸನದ ಬಗ್ಗೆ ಸಮಾಜದಲ್ಲಿ ಇರುವ ಹಲವಾರು ಮೂಢ ನಂಬಿಕೆಗಳು ಮಹಿಳೆ ಮದ್ಯದ ದಾಸಳಾಗಲು ಕಾರಣವಾಗುತ್ತಿದೆ.

ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ವ್ಯಸನವು ವಿದ್ಯಾವಂತರು, ಅವಿದ್ಯಾವಂತರು ಎಂಬ ಬೇದವಿಲ್ಲದೆ ಮದ್ಯ ಸೇವನೆ ಮಾಡುವ ಯಾರಿಗೂ ಆಗಬಹುದು. ಚಿಕಿತ್ಸೆಗೆ ದಾಖಲಾದ ಮಹಿಳೆಯರಿಂದ ಮಾತ್ರ ಈ ಮಾಹಿತಿ ಸಂಗ್ರಹ ಮಾಡಿರುವುದು ಇಲ್ಲಿ ಗಮನಿಸಬೇಕಾಗಿದೆ. ಅವಿದ್ಯಾವಂತ ಹಾಗೂ ಪ್ರೌಢ ಶಿಕ್ಷಣ ಪಡೆದ ಮಹಿಳೆಯರು ಹೆಚ್ಚಾಗಿ ಚಿಕಿತ್ಸೆಗೆ ದಾಖಲಾಗಿರುವುದು ಕಂಡುಬರುತ್ತದೆ. ಈ ಮಹಿಳೆಯರು ಹೆಚ್ಚಾಗಿ ಗೃಹಿಣಿಯರು, ಹೊರಗಡೆ ಕೆಲಸ ಮಾಡುವವರು ಅಲ್ಲದ ಕಾರಣ ಅಂತವರನ್ನು ಚಿಕಿತ್ಸೆಗೆ ಕರೆದುಕೊಂಡು ಬಂದಿರುವುದರಿಂದ ಅವರ ಸಂಖ್ಯೆಯು ಹೆಚ್ಚಾಗಿದೆ. ಹೀಗಾಗಿ ವಿದ್ಯಾವಂತ ಹಾಗೂ ವೃತ್ತಿಪರರಲ್ಲಿ ವ್ಯಸನವು ಕಡಿಮೆ ಎಂದು ಹೇಳಲಾಗದು.

ವ್ಯಸನದ ಬಗ್ಗೆ ಅರಿವು ಇಲ್ಲದಿರುವುದು, ಇತರ ಚಟುವಟಿಕೆಗಳ ಕೊರತೆಯೂ ವ್ಯಸನವು ಹೆಚ್ಚಾಗಲು ಕಾರಣವಾಗಿದೆ.

೩. ವೈವಾಹಿಕ ಸ್ಥಿತಿ

ಮದ್ಯವ್ಯಸನಕ್ಕೆ ಒಳಪಟ್ಟ ಶೇ.೭೨ ಮಹಿಳೆಯರು ವಿವಾಹಿತರು, ಶೇ.೧೦ ರಷ್ಟು ಮಹಿಳೆಯರು ಅವಿವಾಹಿತರು, ಶೇ. ೨ ರಷ್ಟು ಮಹಿಳೆಯರು ವಿಚ್ಛೇದಿತರು, ಶೇ.೧೬ ರಷ್ಟು ಮಹಿಳೆಯರು ವಿಧವೆಯರಾಗಿದ್ದಾರೆ.

ಮೇಲಿನ ಕೋಷ್ಟಕದಿಂದ ಅವಿವಾಹಿತ ಮಹಿಳೆಯರಿಗಿಂತ, ವಿವಾಹಿತ ಮಹಿಳೆಯರಲ್ಲಿ ಮದ್ಯ ವ್ಯಸನವು ಹೆಚ್ಚಾಗಿರುವುದು ಕಂಡುಬರುತ್ತದೆ. ಇದರ ಕೆಲವು ಮುಖ್ಯ ಕಾರಣಗಳು ಮದುವೆಯಾಗುವವರೆಗೆ ಹೆಣ್ಣು ಮಕ್ಕಳು ಹೆಚ್ಚಾಗಿ ಮದ್ಯಪಾನ ಮಾಡುವುದಿಲ್ಲ. ಮದುವೆಯ ನಂತರ ಹೆಚ್ಚಿನ ಬಾರಿ ಪತಿಯೇ ಪತ್ನಿಗೆ ಮದ್ಯದ ರುಚಿ ತೋರಿಸುವುದು ಮತ್ತು ಇದರಿಂದಾಗಿ ಮಹಿಳೆಯರು ವ್ಯಸನಕ್ಕೆ ಒಳಗಾಗುವ ಸಾದ್ಯತೆ. ಇನ್ನೊಂದು ಬಹು ಮುಖ್ಯ ಕಾರಣ ಬಾಣಂತನದಲ್ಲಿ ಮದ್ಯವನ್ನು ನೀಡುವುದು. ಇದರಿಂದಾಗಿ ವಿವಾಹಿತ ಮಹಿಳೆಯರಲ್ಲಿ ಮದ್ಯವ್ಯಸನವು ಹೆಚ್ಚಾಗಿ ಕಂಡುಬರುತ್ತದೆ. ಹಾಗೂ ವಿಧವೆಯರಲ್ಲಿ ಸಹ ವ್ಯಸನವು ಹೆಚ್ಚಾಗಿರುವುದು ಕಂಡುಬರುತ್ತದೆ. ವಿವಾಹಿತ ಮಹಿಳೆಯರನ್ನು ಹೆಚ್ಚಾಗಿ ಅವರ ಕುಟುಂಬದವರು ಚಿಕಿತ್ಸೆಗೆ ಕರೆದುಕೊಂಡು ಬಂದಿರುವುದು ಕಾಣಸಿಗುತ್ತದೆ.

೪. ಉದ್ಯೋಗ

ಮದ್ಯವ್ಯಸನಕ್ಕೆ ಒಳಪಟ್ಟ ಶೇ.೭೨ ರಷ್ಟು ಮಹಿಳೆಯರು ಗ್ರಹಿಣಿಯರು, ಶೇ ೧೨ ಕಛೇರಿ ಕೆಲಸ, ಶೇ.೧೪ ಕೂಲಿ ಕೆಲಸ, ಶೇ.೪ ವಿದ್ಯಾರ್ಥಿಗಳು, ಶೇ.೧೨ ಕ್ರಶಿಕರು, ಶೇ.೧೮ ಸ್ವಉದ್ಯಮಿಗಳು, ಶೇ.೧೦ ರಷ್ಟು ಮಹಿಳೆಯರು ಬೀಡಿ ಕಟ್ಟುವುದು ಹಾಗೂ ಮನೆಕೆಲಸ ಮಾಡುವವರಾಗಿದ್ದಾರೆ.

ಉದ್ಯೋಗದ ಪರಿವೆಯಿಲ್ಲದೆ ವ್ಯಸನವು ಇದೆಯಾದರೂ ಗ್ರಹಿಣಿಯರಲ್ಲಿ, ಕೂಲಿ ಕೆಲಸ ಮಾಡುವವರಲ್ಲಿ ಹಾಗೂ ಸ್ವ ಉದ್ಯಮಿಗಳಲ್ಲಿ ಮದ್ಯ ವ್ಯಸನವು ಹೆಚ್ಚಾಗಿ ಕಂಡು ಬರುತ್ತದೆ. ಚಿಕಿತ್ಸೆಗೆ ಬಂದಂತಹ ಹೆಚ್ಚಿನ ಮಹಿಳೆಯರು ಗ್ರಹಿಣಿಯರಾಗಿದ್ದಾರೆ. ಇತರರಲ್ಲಿ ಮದ್ಯವ್ಯಸನವು ಇರುವ ಸಾದ್ಯತೆ ಇದ್ದರೂ ಅವರು ಕೆಲಸ, ಉದ್ಯಮದ ಕಾರಣ ಚಿಕಿತ್ಸೆಗೆ ಬಾರದೆ ಇರುವುದು ಸಾದ್ಯವಿದೆ. ಗ್ರಹಿಣಿಯರು ಮನೆಯಲ್ಲೇ ಇರುವ ಕಾರಣ ಅವರಿಗೆ ಬಿಡುವು ಹಾಗೂ ಸ್ವೇಛೆಯ ವಾತಾವರಣವಿರುವುದೂ ಅವರಲ್ಲಿ ವ್ಯಸನ ಹೆಚ್ಚಾಗಿರಲು ಕಾರಣವಾಗಬಹುದು.

೫. ತಿಂಗಳ ಆದಾಯ

ಮದ್ಯವ್ಯಸನಿ ಮಹಿಳೆಯರಲ್ಲಿ ೨೪ ಶೇ ಮಹಿಳೆಯರು ೨೦೦೦ ದಿಂದ ೪೦೦೦, ಶೇ.೩೦, ೪೦೦೦ ದಿಂದ ೬೦೦೦, ಶೇ.೧೬, ೬೦೦೦ ಕ್ಕಿಂತ ಹೆಚ್ಚಿನ ಆದಾಯ ಹೊಂದಿದವರಾಗಿದ್ದಾರೆ. ಹಾಗೂ ಶೇ. ೩೦ ರಷ್ಟು ಮಹಿಳೆಯರಿಗೆ ಯಾವುದೇ ಆದಾಯವಿಲ್ಲ.

ಇದರಿಂದ ತಿಳಿಯುವುದು ಏನೆಂದರೆ ವ್ಯಸನಕ್ಕೆ ಹಾಗೂ ಆದಾಯಕ್ಕೆ ಯಾವುದೇ ಸಂಬಂದವಿಲ್ಲ. ಯಾವುದೇ ಆದಾಯವಿಲ್ಲದ ಮಹಿಳೆಯರೂ ಸಹ ತಮ್ಮ ಕುಡಿತಕ್ಕೆ ಹಣವನ್ನು ಹೊಂದಿಸುತ್ತಾರೆ. ಆದಾಯವಿರುವ ಮಹಿಳೆಯರಲ್ಲೂ ವ್ಯಸನವು ಕಂಡುಬರುತ್ತದೆ. ತಾವು ದುಡಿದ ಎಲ್ಲಾ ಹಣವನ್ನೂ ಅವರು ಮದ್ಯಕ್ಕಾಗಿ ಖರ್ಚು ಮಾಡುತ್ತಾರೆ. ಆದಾಯವಿಲ್ಲದ ಎಷ್ಟೋ ಮಹಿಳೆಯರು ಮದ್ಯಕ್ಕೆ ಹಣ ಹೊಂದಿಸಲು ತಮ್ಮ ಒಡವೆವಳನ್ನು ಮಾರುವುದು, ಕದಿಯುವುದು, ಇತ್ಯಾದಿ ವಿಧಾನಗಳನ್ನು ಬಳಸಿರುವುದು ಕಾಣಸಿಗುತ್ತದೆ.

೬. ಧರ್ಮ

ಸಂಶೋಧನೆಗೆ ಒಳಪಟ್ಟ ೫೦ ಮಹಿಳೆಯರಲ್ಲಿ ಶೇ.೬೦ ರಷ್ಟು ಹಿಂದುಗಳು ಹಾಗೂ ಶೇ.೪೦ ಕ್ರಿಸ್ಚಿಯನ್ ಧರ್ಮಕ್ಕೆ ಸೇರಿದವರಾಗಿದ್ದಾರೆ. ಚಿಕಿತ್ಸೆಗೆ ಬಂದಂತಹ ಎಲ್ಲಾ ಮಹಿಳೆಯರು ಹಿಂದು ಹಾಗೂ ಕ್ರಿಸ್ಚಿಯನ್ ಧರ್ಮಕ್ಕೆ ಸೇರಿದವರು. ಇದರಿಂದ ಇತರ ಧರ್ಮಗಳಲ್ಲಿ ವ್ಯಸನವು ಇಲ್ಲವೆಂದು ಹೇಳಲಾಗದು. ಹಿಂದೂ ಹಾಗೂ ಕ್ರಿಸ್ಚಿಯನ್ ಧರ್ಮಗಳಲ್ಲಿ ಮದ್ಯವು ಸಮಾರಂಭಗಳಲ್ಲಿ, ಧಾರ್ಮಿಕ ಆಚರಣೆಗಳಲ್ಲಿ ಉಪಯೋಗಿಸಲ್ಪಟ್ಟ ಕಾರಣ ಕುಡಿತವು ಹೆಚ್ಚಾದಾಗ ಅವರನ್ನು ಚಿಕಿತ್ಸೆಗೆ ಕರೆದುಕೊಂಡು ಬಂದಿರುವುದು ಕಾಣಬಹುದು. ಚಿಕಿತ್ಸಾ ಕೇಂದ್ರದ ಬಗ್ಗೆ ತಿಳುವಳಿದೆ ಇಲ್ಲದಿರುವುದೂ ಸಹ ಇದಕ್ಕೆ ಕಾರಣಗಾಗಿರಬಹುದು. ಇದರಿಂದಾಗಿ ಈ ಸಂಶೋಧನೆಯಲ್ಲಿ ಒಳಪಟ್ಟ ಸ್ತ್ರೀಯರಲ್ಲಿ ಮದ್ಯ ವ್ಯಸನವು ಹಿಂದು ಹಾಗೂ ಕ್ರಿಸ್ಚಿಯನ್ ಧರ್ಮದವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

೭. ಜಾತಿ

ಸಂಶೋಧನೆಗೆ ಒಳಪಟ್ಟ ಮಹಿಳೆಯರಲ್ಲಿ ಶೇ.೩೬ ಸಾಮಾನ್ಯ ವರ್ಗದವರು, ಶೇ.೪೦ ಒಬಿಸಿ, ಶೇ.೮ ಪರಿಶಿಷ್ಟ ಜಾತಿ ಹಾಗೂ ಶೇ.೧೬ ಪರಿಶಿಷ್ಟ ಪಂಗಡದವರಾಗಿದ್ದಾರೆ.

ಒಬಿಸಿ ಅಂದರೆ ಕ್ರಿಸ್ಚಿಯನ್ ಪಂಗಡಕ್ಕೆ ಒಳಪಟ್ಟ ಮಹಿಳೆಯರಲ್ಲಿ ವ್ಯಸನ ಹೆಚ್ಚಾಗಿರುವುದು, ಹಾಗೂ ಸಮಸ್ಯೆಯಾದಾಗ ಚಿಕಿತ್ಸೆಗೆ ಕರೆದುಕೊಂಡು ಬರುವುದು ಇತರ ವರ್ಗಗಳಿಗಿಂತ ಹೆಚ್ಚಾಗಿ ಕಂಡುಬರುತ್ತದೆ. ಪರಿಶಿಷ್ಟ ಜಾತಿ ಹಾಗೂ ಪಂಗಡಗಳಲ್ಲಿ ಮದ್ಯ ವ್ಯಸನವು ಕಡಿಮೆಯೆಂದು ಹೇಳಲಾಗದು. ಮಹಿಳಾ ಅಮಲು ವ್ಯಸನಿಗಳಿಗೆ ಚಿಕಿತ್ಸೆಯ ವ್ಯವಸ್ಥೆ ಬಹಳ ಇತ್ತೀಚಿನ ವ್ಯವಸ್ಥೆಯಾಗಿರುವ ಕಾರಣ ಈ ವ್ಯವಸ್ಥೆಯ ಅರಿವಿರುವವರು ಮಾತ್ರ ಅದರಲ್ಲೂ ವ್ಯಸನಕ್ಕೆ ಒಳಗಾದ ಒಬಿಸಿ ಹಾಗೂ ಸಾಮಾನ್ಯ ವರ್ಗದವರು ಹೆಚ್ಚಾಗಿ ಚಿಕಿತ್ಸೆಗೆ ಕಳುಹಿಸುತ್ತಿರುವುದು ಈ ಮಾಹಿತಿಯಿಂದ ತಿಳಿದುಬರುತ್ತದೆ.

೮. ವಾಸವಿರುವ ಪ್ರದೇಶ

ಸಂಶೋಧನೆಗೆ ಒಳಪಟ್ಟ ಮಹಿಳೆಯರಲ್ಲಿ ಶೇ.೪೬ ಗ್ರಾಮೀಣ ಪ್ರದೇಶದವರು, ಶೇ.೩೨ ಪಟ್ಟಣದವರು ಹಾಗೂ ಶೇ.೨೨ ನಗರ ಪ್ರದೇಶದವರಾಗಿದ್ದಾರೆ.

ಮದ್ಯ ವ್ಯಸನದ ಚಿಕಿತ್ಸೆಗೆ ಬಂದಂತಹ ಮಹಿಳೆಯರು ಹೆಚ್ಚಾಗಿ ಗ್ರಾಮೀಣ ಪ್ರದೇಶದವರಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮನರಂಜನೆಯ ಕೊರತೆ, ಅಮಲಿನ ಬಗೆಗಿನ ಮೂಢ ನಂಬಿಕೆಗಳು, ಕೆಲಸವಿಲ್ಲದಿರುವುದು, ಬಿಡುವು ಹೆಚ್ಚಾಗಿರುವುದು ಗ್ರಾಮೀಣ ಪ್ರದೇಶಗಳಲ್ಲಿ ಮದ್ಯ ವ್ಯಸನ ಹೆಚ್ಚಾಗಿರಲು ಕಾರಣವಾಗಿದೆ. ನಗರ ಹಾಗೂ ಪಟ್ಟಣ ಪ್ರದೇಶದ ಮಹಿಳೆಯರಲ್ಲೂ ವ್ಯಸನದ ಸಮಸ್ಯೆಯಿದ್ದರೂ ನಾಚಿಕೆ, ಇತರರಿಗೆ ತಿಳಿಯುವುದು ಎಂಬ ಅಂಜಿಕೆ ಅಥವಾ ಇತರ ಸಾಮಾಜಿಕ ಕಾರಣಗಳಿಂದಾಗಿ ಸಂಶೋಧನೆಗೆ ಮಹಿಳೆಯರಲ್ಲಿ ೪೬ ಶೇಕಡಾ ಮಹಿಳೆಯರು ಗ್ರಾಮೀಣ ಪ್ರದೇಶದವರಾಗಿದ್ದಾರೆ.

II. ಮದ್ಯ ವ್ಯಸನಿ ಮಹಿಳೆಯರು ಕುಡಿತಕ್ಕೆ ಕೊಡುವ ಕಾರಣಗಳು

೯. ಖಿನ್ನತೆ, ಬೇಜಾರು ಕಳೆಯಲು

ನೂರರಲ್ಲಿ ಶೇ.೯೭ರಷ್ಟು ಮಹಿಳೆಯರು ತಾವು ಖಿನ್ನತೆಯಿಂದ ಹೊರಬರಲು ಕುಡಿಯುತ್ತಿರುವುದಾಗಿ ಹೇಳುತ್ತಾರೆ. ಆಲ್ಕೊಹಾಲ್ ಸೇವನೆ ಖಿನ್ನತೆ ಹಾಗೂ ಬೇಜಾರು ದೂರ ಮಾಡಲು ಉಪಯೋಗಿಸಿದರೂ ಅವರ ಖಿನ್ನತೆಯು ಜಾಸ್ತಿಯಾಗಿರುವುದು ಕಾಣಿಸುತ್ತಿದೆ. ಆಲೋಚನೆಗಳನ್ನು, ಚಿಂತನೆಗಳನ್ನು ಮಾಡುವುದು ಮಿದುಳಿನ ಕಾರ್ಟೆಕ್ಸ್. ಆಲ್ಕೋಹಾಲ್ ಮೆದುಳಿನ ನರಕೋಶಗಳ ಕೆಲಸ ಚಟುವಟಿಕೆಗಳನ್ನು ಕುಗ್ಗಿಸುತ್ತದೆ. ನರಕೋಶಗಳು ನಿಷ್ಕ್ರಿಯಗೊಳ್ಳುತ್ತವೆ.

ಖಿನ್ನತೆ, ಬೇಜಾರು ಕಳೆಯಲು ಅಮಲು ಸೇವನೆ ಮಾಡುತ್ತಿರುವುದು ಸಮಾಜದಲ್ಲಿ ಕಂಡುಬರುತ್ತದೆ. ಇದೊಂದು ಮೂಢ ನಂಬಿಕೆ ಹಾಗೂ ಅಮಲು ಸೇವನೆಗೆ ಕೊಡುವ ಕಾರಣವೇ ಹೊರತು ಯಾವುದೇ ವ್ಯಕ್ತಿ ಖಿನ್ನತೆ, ಬೇಜಾರು ಕಳೆಯಲು ಅಮಲು ಸೇವನೆ ಆರಂಭಿಸಿದರೆ ಖಿನ್ನತೆ ಕಡಿಮೆಯಾಗುವುದು ಅಸಾಧ್ಯ. ಖಿನ್ನತೆ, ಬೇಜಾರು ಕಳೆಯಲು ಅಮಲು ಸೇವನೆ ಮಾಡುತ್ತಿರುವುದಾಗಿ ಹೇಳಿಕೊಂಡಿರುವುದು ಅವರಿಗೆ ಮದ್ಯದ ದುಷ್ಪರಿಣಾಮಗಳ ಬಗ್ಗೆ ಅರಿವಿಲ್ಲದಿರುವುದು ಹಾಗೂ ವ್ಯಸನದ ಬಗ್ಗೆ ಅರಿವಿಲ್ಲದಿರುವುದರಿಂದ ಹೇಳುವುದಾಗಿದೆ.

ಆ ವ್ಯಕ್ತಿ ವ್ಯಸನಿಯಾಗಿರುವ ಕಾರಣ ಕುಡಿತಕ್ಕೆ ನೀಡುವ ಒಂದು ನೆಪವಾಗಿ ಕಂಡು ಬರುತ್ತದೆ ಹಾಗೂ ವ್ಯಸನದ ಬಗ್ಗೆ ಯಾವುದೇ ರೀತಿಯ ತಿಳುವಳಿಕೆ ಇಲ್ಲದಿರುವುದು ಕಂಡುಬರುತ್ತದೆ. ಆಲ್ಕೋಹಾಲ್ ನರಕೋಶಗಳ ಚಟುವಟಿಕೆ, ಕಾರ್ಯಶೀಲತೆಯನ್ನು ಕುಗ್ಗಿಸುವುದಲ್ಲದೆ ಅವುಗಳನ್ನು ದೀರ್ಘಾವಧಿಯಲ್ಲಿ ನಾಶಗೊಳಿಸುತ್ತದೆ. ಇದರಿಂದ ಮದ್ಯವ್ಯಸನಿಯು ಖಿನ್ನತೆಗೆ ಒಳಪಡುತ್ತಾನೆ.

೧೦ ವಿಶ್ರಾಂತಿಗೆ

ಶೇ. ಲಳ ರಷ್ಟು ಮಹಿಳೆಯರು ತಾವು ಕೆಲಸ ಮಾಡಿ ಸುಸ್ತಾದಾಗ ವಿಶ್ರಾಂತಿ ಪಡೆಯಲು ಅಮಲು ಸೇವನೆ ಅಮಲು ಸೇವನೆಯ ಕಾರಣವನ್ನು ನೀಡುತ್ತಿದ್ದಾರೆ. ಇದು ಅವರು ತಮ್ಮ ವ್ಯಸನದ ಸಮಸ್ಯೆಯ ನಿರಾಕರಣೆ ಮಾಡುತ್ತಿರುವುದು ಕಂಡುಬರುತ್ತದೆ. ಜೊತೆಗೆ ವ್ಯಸನಕ್ಕೆ ಒಳಪಟ್ಟ ಮಹಿಳೆಯರು ಸರಿಯಾದ ವಿಶ್ರಾಂತಿಯಿಲ್ಲದೆ ಇರುವುರು ಕಂಡುಬರುತ್ತದೆ.

ನಮ್ಮ ಪರಿಸರದಲ್ಲಿ, ನಾವು ನೋಡುತ್ತಿರುವ, ಜನರನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆ ಮದ್ಯ ವ್ಯಸನ. ಮೋಜಿಗಾಗಿ, ವಿಶ್ರಾಂತಿಯ ನೆಪ ನೀಡಿ ಪ್ರಾರಂಭಿಸದ ಕುಡಿತ ಮುಂದೆ ಹೆಮ್ಮತವಾಗಿ ಬೆಳೆದು ವ್ಯಕ್ತಿಯು ಎಲ್ಲವನ್ನೂ ಕಳೆದುಕೊಳ್ಳುವಂತೆ ಮಾಡುತ್ತದೆ. ಮದ್ಯ ಸೇವನೆಯಿಂದ ವಿಶ್ರಾಂತಿ ಸಿಕ್ಕದ ಭ್ರಮೆಯು ಆವರಿಸಿ, ಮತ್ತೆ ಮತ್ತೆ ಮದ್ಯದ ಮೊರೆ ಹೋಗಲು ಕಾರಣವಾಗುತ್ತದೆ. ತಪ್ಪು ಮಾಹಿತಿ, ಸರಿಯಾದ ತಿಳುವಳಿಕೆಯ ಕೊರತೆ, ವಿಶ್ರಾಂತಿಹ ಬಗೆಗಿನ ತಪ್ಪು ಕಲ್ಪನೆಗಳು ಮದ್ಯವನ್ನು ವಿಶ್ರಾಂತಿಗಾಗಿ ಬಳಸಲು ಕಾರಣಗಾಗಿವೆ. ಮದ್ಯವು ಖಿನ್ನತೆಗೊಳಪಡಿಸುವ ಗುಣವನ್ನು ಹೊಂದಿದೆ.

ಅದೂ ಅಲ್ಲದೆ ಮದ್ಯವು ಅನೇಕ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳಿಗೂ ಮೂಲ ಕಾರಣವಾಗಿದೆ. ಮದ್ಯವು ವ್ಯಕ್ತಿಯ ಮಾನಸಿಕ ಶಕ್ತಿಯನ್ನು ಕುಂದಿಸುತ್ತದೆ ಮತ್ತು ಸರಿಯಾದ ನಿರ್ಧಾರಗಳನ್ನು ಮಾಡಲು ಒಂದು ತಡೆಯಾಗಿದೆ. ಇದರ ಬಗ್ಗೆ ಸರಿಯಾದ ಮಾಹಿತಿ ಇಲ್ಲದೆ ಮಹಿಳೆಯು ಅಮಲಿನ ದಾಸಳಾಗಿರುವುದು ಕಂಡು ಬರುತ್ತದೆ.

ಆರೋಗ್ಯದ ಬಗೆಗಿನ ಕಾಳಜಿ, ಧ್ಯಾನ, ಒಳ್ಳೆಯ ಮನರಂಜನೆ ಇತ್ಯಾದಿಗಳು ದೇಹ ಮನಸ್ಸುಗಳಿಗೆ ವಿರಾಮ, ವಿಶ್ರಾಂತಿಯನ್ನು ನೀಡುವವೇ ಹೊರತು ಮದ್ಯ ಸೇವನೆಯಲ್ಲ.

೧೧. ಮೈ ಕೈ ನೋವು ನಿವಾರಣೆಗೆ

ವ್ಯಸನಕ್ಕೆ ಒಳಗಾದ ಶೇ.೮೨ ಮಹಿಳೆಯರು ಮೈ ಕೈ ನೋವು ನಿವಾರಣೆಗೆ ತಾವು ಅಮಲು ಸೇವನೆ ಮಾಡುತ್ತಿರುವುದಾಗಿ ಹೇಳುತ್ತಾರೆ. ನಿಜವಾಗಿ ಆಲ್ಕೋಹಾಲ್ ಗೆ ನೋವನ್ನು ಪರಿಹರಿಸುವ ಶಕ್ತಿ ಇಲ್ಲ. ನೋವಿನ ಅನುಭವಾಗದಂತೆ ಮಾಡಿ 'ನಾನು ಚೆನ್ನಾಗಿದ್ದೇನೆ' ಎಂಬ ಭ್ರಮೆಯನ್ನು ಉಂಟುಮಾಡುತ್ತದೆ. ನೋವಿನ ಸಂವೇದನೆಯನ್ನು ಸ್ವೀಕರಿಸಿ, ಪ್ರತಿಕ್ರಿಯಿಸುವ ನರಕೋಶಗಳು ಆಲ್ಕೋಹಾಲ್ ನಿಂದ ತಾತ್ಕಾಲಿಕವಾಗಿ ನಿಷ್ಕ್ರಿಯಗೊಳ್ಳುತ್ತವೆ. ಆದ್ದರಿಂದ ಆಲ್ಕೋಹಾಲನ್ನು ನೋವು ನಿವಾರಕವಾಗಿ ಉಪಯೋಗಿಸಲು ಪ್ರಾರಂಭಿಸುವುದು ಅಪೇಕ್ಷಣೀಯವಲ್ಲ.

ಅದರಲ್ಲೂ ಮಹಿಳೆ ಅಮಲು ಸೇವನೆ ಮಾಡುವುದರಿಂದ ಹಾರ್ಮೋನ್ ಗಳ ವ್ಯತ್ಯಯ, ಮಗುವಿನ ಬೆಳವಣಿಗೆಯ ಮೇಲೆ ಪರಿಣಾಮ ಉಂಟು ಮಾಡುತ್ತದೆ. ಅಮಲು ಸೇವನೆಯಿಂದ ದೇಹಕ್ಕೆ ಸರಿಯಾದ ವಿಶ್ರಾಂತಿ ದೊರಕದೆ ಮದ್ಯವು ತಾತ್ಕಾಲಿಕವಾಗಿ ನೋವು ಮರೆಸಿದರೂ ಅದರಿಂದ ದೇಹಕ್ಕೆ ಹಾಗೂ ಮನಸ್ಸಿಗೆ ಹೆಚ್ಚಿನ ಹಾನಿ ಉಂಟಾಗುತ್ತದೆ.

ಮದ್ಯ ವ್ಯಸನದ ಬಗ್ಗೆ ವ್ಯಸನಕ್ಕೆ ಒಳಗಾದ ಮಹಿಳೆಯರಿಗೆ ಸರಿಯಾದ ಮಾಹಿತಿ, ತಿಳುವಳಿಕೆಯ ಕೊರತೆಯಿರುವುದನ್ನು ತೋರಿಸಿ ಕೊಡುತ್ತದೆ. ನಿಜ ಸ್ಥಿತಿ ಏನೆಂದರೆ ಆಲ್ಕೋಹಾಲ್ ಸೇವನೆಯಿಂದ ನೋವಿನ ಸಂವೇದನೆಗೆ ಮಿದುಳು ಸ್ಪಂದಿಸುವುದಿಲ್ಲ. ಇದರಿಂದಾಗಿ ನೋವು ಅರಿವಿಗೆ ಬರುವುದಿಲ್ಲ.

೧೨. ಕೈ ನಡುಕ ನಿಲ್ಲಿಸಲು

ವ್ಯಸನಕ್ಕೆ ಒಳಗಾದ ಶೇ.೮೨ ಮಹಿಳೆಯರು ಕೈ ನಡುಕ ನಿಲ್ಲಿಸಲು ತಾವು ಅಮಲು ಸೇವನೆ ಮಾಡುತ್ತಿರುವುದಾಗಿ ಹೇಳುತ್ತಾರೆ. ಅಮಲು ಸೇವನೆಯಿಂದ, ನರಗಳು ದುರ್ಬಲವಾಗಿ, ಸರಿಯಾದ ಆಹಾರ ಸೇವನೆ ಮಾಡದೆ ಕೈ ನಡುಕ ಪ್ರಾರಂಭವಾಗಿದ್ದರೂ ಅಮಲು ಸೇವನೆಯನ್ನು ವ್ಯಸನದ ಕಾರಣದಿಂದಾಗಿ ಬಿಡಲಾಗದೆ ಕೈ ನಡುಕ ನಿಲ್ಲಿಸಲು ಮದ್ಯ ಸೇವನೆಯನ್ನು ಮಾಡುತ್ತಿರುವುದು ಒಂದು ವಿಪರ್ಯಾಸವೇ ಆಗಿದೆ. ವ್ಯಸನದ ಕಾರಣದಿಂದಾಗಿ ಸಮಸ್ಯೆಯನ್ನು ನಿರಾಕರಿಸುವುದು ಕಂಡುಬರುತ್ತದೆ.ಆಲ್ಕೋಹಾಲ್ ನಲ್ಲಿ ಆರೋಗ್ಯವರ್ಧಕ ಗುಣ ಯಾವುದೂ ಇಲ್ಲ. ದೈಹಿಕ ಚಟುವಟಿಕೆಗೆ ಅದು ಇಂದನವನ್ನು ಒದಗಿಸುತ್ತದೆಯೇ ಹೊರತು, ದೇಹದ ಬೆಳವಣಿಗೆಗೆ ಅಥವಾ ಜೀವಕೋಶಗಳ ರಿಪೇರಿ ಅಥವಾ ಸಂಖ್ಯಾಭಿವೃದ್ಧಿಗೆ ಬೇಕಾದ ಯಾವ ಅಗತ್ಯ ವಸ್ತುವೂ ಆಲ್ಕೋಹಾಲ್ ನಲ್ಲಿಲ್ಲ. ಆದ್ದರಿಂದ ಆಲ್ಕೋಹಾಲನ್ನು ಟಾನಿಕ್ ನಂತೆ ಉಪಯೋಗಿಸುವುದು ವ್ಯಸನಕ್ಕೆ ದಾರಿಯಾಗಿದೆ.

ನಿಜಸ್ಥಿತಿ ಏನೆಂದರೆ ಪ್ರತಿದಿನ ಕುಡಿಯುವ ಹಂತವನ್ನು ತಲುಪಿದ ವ್ಯಕ್ತಿ ಒಂದು ದಿನ ಅಕಸ್ಮಾತ್ ಕುಡಿಯದಿದ್ದರೆ ಮನಸ್ಸಿಗೆ ಏನೋ ಒಂದು ರೀತಿಯ ತಹತಹ, ಚಡಪಡಿಕೆ, ಹಿಂಸೆ, ಏನೋ ಮುಖ್ಯವಾದದ್ದನ್ನು ಕಳೆದುಕೊಂಡಂತೆ ಸಂಕಟಪಡುತ್ತಾನೆ. ತನ್ನ ಕೈಗಳು ನಡುಗುವುದನ್ನು ಕಂಡು ಗಾಬರಿ ಬೀಳುತ್ತಾನೆ. ಆಲ್ಕೋಹಾಲ್ ಸೇವನೆ ಮಾಡಿದ ಕೆಲವೇ ನಿಮಿಷಗಳಲ್ಲಿ ಕೈ ನಡುಕ ಮಾಯವಾವಾಗುವುದನ್ನು ನೋಡಿ ಕೈ ನಡುಕ ನಿಲ್ಲಿಸಲು ಇದೇ ಔಷಧ ಎಂಬ ಭ್ರಮೆಯುಂಟಾಗುತ್ತದೆ.

೧೩. ನಿದ್ರೆಗೆ

ವ್ಯಸನಕ್ಕೆ ಒಳಗಾದ ಶೇ.೯೦ ಮಹಿಳೆಯರು ನಿದ್ರೆಗಾಗಿ ತಾವು ಅಮಲು ಸೇವನೆ ಮಾಡುತ್ತಿರುವುದಾಗಿ ಹೇಳುತ್ತಾರೆ. ಅಮಲು ಸೇವನೆಯಿಂದ, ಇರುವ ಸಮಸ್ಯೆಗಳಿಂದ ಸರಿಯಾದ ನಿದ್ರೆ ಇಲ್ಲದೆ ಮದ್ಯ ಸೇವನೆಯಿಂದ ನಿದ್ರೆಗೆ ಹೆಚ್ಚಿನ ಹಾನಿ ಆಗಿರುವುದು ಕಂಡುಬರುತ್ತದೆ. ಮದ್ಯ ಸೇವನೆಯಿಂದ ನಿದ್ರೆ ಬರುವುದು ಎಂಬ ತಪ್ಪು ಕಲ್ಪನೆಯು ಈ ಕಾರಣ ಕೊಡಲು ನೆಪವಾಗಿರುವುದು ಕಂಡುಬರುತ್ತದೆ.

ಆಲ್ಕೋಹಾಲ್ ಕೇಂದ್ರ ನರಮಂಡಲವನ್ನು ಮಂಕಾಗಿಸುವುದರಿಂದ ನಿದ್ರೆ ಏನೋ ಬರುತ್ತದೆ. ಆದರೆ ಈ ನಿದ್ರೆಯಿಂದ ಮೈ ಮನಸ್ಸು ವಿರಮಿಸುವುದಿಲ್ಲ. ನಿದ್ರೆ ಮಾಡಿದರೂ ಬೆಳಿಗ್ಗೆ ಲವಲವಿಕೆ ಇರುವುದಿಲ್ಲ. ಹ್ಯಾಂಗ್ ಓವರ್ ಇರುತ್ತದೆ. ಕಾಲಕ್ರಮೇಣ ನಿದ್ರೆ ಮಾಡಲು ಹೆಚ್ಚೆಚ್ಚು ಪ್ರಮಾಣದ ಆಲ್ಕೋಹಾಲನ್ನು ಉಪಯೋಗಿಸಬೇಕಾಗುತ್ತದೆ. ಆದ್ದರಿಂದ ನಿದ್ರೆ ಬರಿಸಲು ಆಲ್ಕೋಹಾಲ್ ಬಳಕೆ ಅಪಾಯಕಾರಿಯಾಗಬಲ್ಲದು.

೧೪. ಮತ್ತೇರಲು

ಮದ್ಯ ವ್ಯಸನಕ್ಕೆ ಒಳಪಟ್ಟ ಎಲ್ಲಾ ಮಹಿಳೆಯರು ಮತ್ತೇರಲು ತಾವು ಮದ್ಯ ಸೇವನೆ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಾರೆ. ಆಲ್ಕೋಹಾಲ್ ನರಮಂಡಲವನ್ನು ಉತ್ತೇಜಿಸುತ್ತದೆ ಎಂಬ ತಪ್ಪು ಕಲ್ಪನೆ ಜನರಲ್ಲಿದೆ. ಆದರೆ ವಾಸ್ತವದಲ್ಲಿ ಅದು ನರಮಂಡಲವನ್ನು ಮಂಕಾಗಿಸುವ ಗುಣವನ್ನು ಹೊಂದಿದೆ. (ಡಿಪ್ರೆಸೆಂಟ್). ಆಲ್ಕೋಹಾಲ್ ನ ಪ್ರಮಾಣ ರಕ್ತದಲ್ಲಿ ಹೆಚ್ಚಾಗುತ್ತಿದ್ದಂತೆ, ಮಿದುಳಿನ ನರಕೋಶಗಳು ನಿಷ್ಕ್ರಿಯವಾಗುತ್ತವೆ. ಆಲ್ಕೋಹಾಲ್ ಪ್ರಭಾವದಿಂದ ಮಿದುಳಿಗೆ ವಾಸ್ತವಿಕತೆಯನ್ನು ಗುರುತಿಸುವ ಸಾಮರ್ಥ್ಯ ಹಾಳಾಗುತ್ತದೆ.ಆತಂಕ, ಭಯವನ್ನುಂಟುಮಾಡುವ ಸನ್ನಿವೇಶಗಳನ್ನು ಗುರುತಿಸಲು ವ್ಯಕ್ತಿಗೆ ಸಾದ್ಯವಾಗುವುದಿಲ್ಲ.

ಇದರಿಂದ ತಿಳಿದು ಬರುವುದು ಏನೆಂದರೆ ವ್ಯಸನಕ್ಕೆ ಒಳಪಟ್ಟ ಮಹಿಳೆಯರು ವಾಸ್ತವಿಕತೆಯಿಂದ ಓಡಿ ಹೋಗಲು ಮದ್ಯ ಸೇವನೆಯನ್ನು ಮಾಡುತ್ತಾರೆ. ಕುಡಿತದಿಂದ ಮನೆಯಲ್ಲಿ ನೆಮ್ಮದಿ, ಸಂತೋಷ ಇರುವುದು ಅಸಾಧ್ಯವೇ ಸರಿ, ಅದರಲ್ಲೂ ಮಹಿಳೆಯ ಮದ್ಯವ್ಯಸನವು ಇಡೀ ಕುಟುಂಬವನ್ನೇ ನಾಶದ ಅಂಚಿಗೆ ತಳ್ಳುತ್ತದೆ.

೧೫. ಸಂತೋಷಕ್ಕಾಗಿ

ಶೇ.೬೦ ರಷ್ಟು ಮಹಿಳೆಯರು ತಾವು ಸಂತೋಷ ಪಡಲು ಮದ್ಯ ಸೇವನೆ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಇದು ಕುಡಿತಕ್ಕೆ ಅವರು ನೀಡುವ ಒಂದು ಕಾರಣವಷ್ಟೇ. ಆದರೆ ಅವರು ಸಂತೋಷದಿಂದ ಇರುವುದು ಕಂಡುಬರುವುದಿಲ್ಲ. ಮದ್ಯ ಸೇವನೆಯನ್ನು ಮುಂದುವರಿಸಲು ಕೊಡುವ ಕಾರಣವಾಗಿ ಕಂಡುಬರುತ್ತದೆ.

ಕುಡಿತದಿಂದ ಸಂತೋಷ ಸಿಗುವುದು ಎಂಬ ತಪ್ಪು ತಿಳುವಳಿಕೆ ಜನರಲ್ಲಿದೆ. ಆಲ್ಕೋಹಾಲ್ ಒಂದು ಖಿನ್ನತೆಗೆ ಒಳಪಡಿಸುವಂತಹ ಪೇಯವಾಗಿದ್ದರೂ, ತಾತ್ಕಾಲಿಕವಾಗಿ ಸಂತೋಷದ ಅನುಭವ ಮದ್ಯ ನೀಡುವ ಕಾರಣ, ಜನರು ಸಂತೋಷಕ್ಕಾಗಿ ಮದ್ಯದ ಮೊರೆ ಹೋಗುತ್ತಾರೆ. ಮೊದಮೊದಲು ಸಣ್ಣ ಪ್ರಮಾಣದ ಮದ್ಯವು ಈ ಸಂತೋಷದ ಅನುಭವಕ್ಕೆ ಸಾಕಾದರೂ ದಿನ ಕಳೆದಂತೆ ಮದ್ಯ ವ್ಯಸನಿಗೆ ಈ ಅನುಭವ ಸಿಗಲು ಹೆಚ್ಚೆಚ್ಚು ಮದ್ಯದ ಅವಶ್ಯಕತೆ ಕಂಡುಬರುತ್ತದೆ. ಹೆಚ್ಚೆಚ್ಚು ಮದ್ಯ ಸೇವನೆಯಿಂದ ಇದೊಂದು ವ್ಯಸನಕ್ಕೆ ಕಾರಣವಾಗುತ್ತದೆ. ಸಂತೋಷಕ್ಕಾಗಿ ಮದ್ಯಸೇವನೆ ಮಾಡುವುದು ಸಮಾಜದಲ್ಲಿ ಕಂಡುಬರುತ್ತದೆ. ಹೀಗೆ ಸಂತೋಷಕ್ಕಾಗಿ ಮದ್ಯಸೇವನೆಯನ್ನು ಪ್ರಾರಂಭಿಸಿದ ಎಷ್ಟೋ ವ್ಯಕ್ತಿಗಳು ವ್ಯಸನಕ್ಕೆ ಒಳಪಡುತ್ತಾರೆ.

೧೬. ಸಂತೋಷ ಕೂಟಗಳಲ್ಲಿ

ಶೇಕಡಾ. ೭೪ ರಷ್ಟು ಮಹಿಳೆಯರು ಸಂತೋಷ ಕೂಟಗಳು ತಾವು ಮದ್ಯ ಸೇವನೆ ಪ್ರಾರಂಭಿಸಲು ಹಾಗೂ ಮುಂದುವರಿಸಲು ಕಾರಣವೆಂದು ಹೇಳುತ್ತಾರೆ. ಸಂತೋಷ ಕೂಟಗಳಲ್ಲಿ ಮದ್ಯ ಸೇವನೆ ಒಂದು ಪ್ರತಿಷ್ಠೆಯ ಕುರುಹಾಗಿಯೂ ಕಾಣಲಾಗುತ್ತಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರು ಸಮಾರಂಭಗಳಲ್ಲಿ ಅಮಲು ಸೇವನೆ ಮಾಡುವುದು, ಇಂದು ಆ ಸಂಸ್ಕೃತಿಯ ಮೊರೆ ಹೋಗಿರುವ ಇತರ ಮಹಿಳೆಯರು ಸಂತೋಷ ಕೂಟಗಳಲ್ಲಿ ಅಮಲು ಸೇವನೆ ಮಾಡುತ್ತಾರೆ. ಹೀಗೆ ಅಮಲು ಸೇವನೆ ಪ್ರಾರಂಭಿಸಿದ ಮಹಿಳೆಯರು ವ್ಯಸನಕ್ಕೆ ಒಳಗಾಗುವ ಸಾಧ್ಯತೆಗಳಿವೆ.

೧೭. ಸ್ನೇಹಿತರ ಒತ್ತಾಯ

ಮಹಿಳೆಯರಲ್ಲಿ ಮದ್ಯ ಸೇವನೆಗೆ ೬೪ ಶೇಕಡಾದಷ್ಟು ಮಹಿಳೆಯರು ತಮಗೆ ಮದ್ಯ ಸೇವನೆ ಮಾಡಲು ಸ್ನೇಹಿತರ ಒತ್ತಾಯ ಇರಲಿಲ್ಲವೆಂದು ಹೇಳುತ್ತಾರೆ. ಮಹಿಳೆಯರಿಗೆ ಮದ್ಯ ಸೇವನೆಗೆ ಸ್ನೇಹಿತರ ಒತ್ತಾಯ ಕಡಿಮೆ ಇರುವುದು ಕಂಡು ಬರುತ್ತದೆ. ಮಹಿಳೆಯರು ಸ್ನೇಹಿತರೊಡನೆ ಸೇರಿ ಮದ್ಯ ಸೇವನೆ ಮಾಡುವುದು ಬಹಳ ಕಡಿಮೆಯೆಂದೇ ಹೇಳಬಹುದು. ಅವರು ಹೆಚ್ಚಾಗಿ ಕುಟುಂಬದಲ್ಲಿ, ಕುಟುಂಬದ ಸದಸ್ಯರ ಜೊತೆ ಅಮಲು ಸೇವನೆ ಮಾಡುವುದು ಕಂಡುಬರುತ್ತದೆ. ಪುರುಷರು ಸ್ನೇಹಿತರ ಜೊತೆ ಸೇರಿ ಅಮಲು ಸೇವನೆ ಮಾಡುವುದನ್ನು ಸಮಾಜವು ಒಪ್ಪಿಕೊಂಡಷ್ಟು ಸುಲಭವಾಗಿ ಮಹಿಳೆಯು ಅಮಲು ಸೇವನೆ ಮಾಡುವುದನ್ನು ಪುರುಷ ಪ್ರದಾನವಗಿರುವ ಸಮಾಜ ಒಪ್ಪಿಕೊಳ್ಳುವುದಿಲ್ಲ ಎಂಬುವುದನ್ನು ಮೇಲಿನ ಮಾಹಿತಿಯು ತೋರಿಸಿಕೊಡುತ್ತದೆ.

೧೮. ಆತ್ಮ ವಿಶ್ವಾಸ ವೃದ್ಧಿಸಲು

೯೬ ಶೇಕಡಾದಷ್ಟು ಮಹಿಳೆಯರು ಆತ್ಮ ವಿಶ್ವಾಸ ವೃದ್ಧಿಸಲು ತಾವು ಮದ್ಯ ಸೇವನೆ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ವ್ಯಸನದ ಬಗ್ಗೆ ಅರಿವು ಇಲ್ಲದೆ ಇರುವುದು ಹಾಗೂ ಮದ್ಯವು ಭಯವನ್ನು ನಿವಾರಿಸುತ್ತದೆ, ಧೈರ್ಯವನ್ನು ಕೊಡುತ್ತದೆ ಎಂಬ ತಪ್ಪು ನಂಬಿಕೆ ಇರುವುದು ಈ ಕಾರಣ ಕೊಡಲು ಮೂಲವಾಗಿದೆ.

ಮಹಿಳೆಯರಲ್ಲಿ ಮದ್ಯ ವ್ಯಸನಕ್ಕೆ ಅವರಲ್ಲಿರುವ ಕೀಳರಿಮೆ ಹಾಗೂ ಅವರಲ್ಲಿರುವ ತಪ್ಪಿತಸ್ಥ ಮನೋಭಾವನೆ ಒಂದು ಮುಖ್ಯ ಕಾರಣವೆಂಬುದನ್ನು ತೋರಿಸಿಕೊಡುತ್ತದೆ. ಮಹಿಳೆಯರು ಅಮಲು ಸೇವನೆ ಮಾಡುವುದನ್ನು ಸಮಾಜವು ಅಂಗೀಕರಿಸುವುದಿಲ್ಲ. ಆದರೂ ವ್ಯಸನದ ಕಾರಣದಿಂದಾಗಿ ಮದ್ಯ ಸೇವನೆಯನ್ನು ಮುಂದುವರಿಸುತ್ತಾರೆ. ಮತ್ತು ಆತ್ಮ ವಿಶ್ವಾಸ ವೃದ್ಧಿಸಲು ಅಮಲು ಸೇವನೆ ಮಾಡುತ್ತಿರುವುದಾಗಿ ಹೇಳುತ್ತಿರುವುದು ಮಹಿಳೆಯರಿಗೆ ಮದ್ಯ ವ್ಯಸನದ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದನ್ನು ತೋರಿಸಿಕೊಡುತ್ತದೆ.

೧೯. ಸಮಯ ಕಳೆಯಲು

ಶೇ. ೮೮ ರಷ್ಟು ಮದ್ಯ ವ್ಯಸನಿ ಮಹಿಳೆಯರು ಸಮಯ ಕಳೆಯಲು ಮದ್ಯ ಸೇವನೆ ಮಾಡುತ್ತಿರುವುದಾಗಿ ಕಾರಣವನ್ನು ಕೊಡುತ್ತಾರೆ. ಗೃಹಿಣಿಯರು, ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಮಹಿಳೆಯರಿಗೆ ಇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶವಿರುವುದು ಬಹಳ ಕಡಿಮೆ. ಹೀಗೆ ಸಮಯ ಕಳೆಯಲು ಎಂದು ಪ್ರಾರಂಭಿಸಿದ ಮದ್ಯ ಸೇವನೆ ವ್ಯಸನಕ್ಕೆ ಕಾರಣವಾಗಿರುವುದು ಕಂಡುಬರುತ್ತದೆ.

ಸಮಾಜದಲ್ಲಿ ಮದ್ಯವ್ಯಸನಿ ಮಹಿಳೆಯರು ಇತರ ಮಹಿಳೆಯರೊಂದಿಗೆ ಬೆರೆಯುವುದು ಬಹಳ ಕಡಿಮೆಯಾಗಿದೆ. ಮದ್ಯ ವ್ಯಸನಿ ಮಹಿಳೆಯರನ್ನು ಸಮಾಜವು ಬಹಳ ನಿಕೃಷ್ಟವಾಗಿ ಕಾಣುವುದರಿಂದ ಸಮಯ ಕಳೆಯಲು ಮದ್ಯದ ಮೊರೆ ಹೋಗುವುದು ಹಾಗೂ ವಾಸ್ತವಿಕತೆಯಿಂದ ಪಲಾಯನ ಮಾಡುವುದನ್ನು ಕಾಣಬಹುದು.

೨೦.ಸಿಟ್ಟು ನಿಭಾಯಿಸಲು

ಶೇ.೮೬ ರಷ್ಟು ಮದ್ಯ ವ್ಯಸನಿ ಮಹಿಳೆಯರು ಅಮಲು ಸೇವನೆ ಸಿಟ್ಟು ನಿಭಾಯಿಸಲು ಮದ್ಯದ ಮೊರೆ ಹೋಗಿರುವುದು ಕಂಡು ಬರುತ್ತದೆ. ವ್ಯಸನದಿಂದಾಗಿ ವಾಸ್ತವಿಕತೆಯನ್ನು ಎದುರಿಸಲು ಈ ಮಹಿಳೆಯರಿಗೆ ಅಸಾಧ್ಯವಾಗಿದೆ ಹಾಗೂ ಜವಾಬ್ದಾರಿಗಳಿಂದ ತಪ್ಪಿಸಲು ಮದ್ಯ ಸೇವನೆ ಮಾಡುವುದು ಕಂಡುಬರುತ್ತದೆ. ಕುಡಿತದಿಂದಾಗಿ ತಮ್ಮ ಭಾವನೆಗಳನ್ನು ವ್ಯಕ್ತ ಪಡಿಸಲು ಅವರಿಗೆ ಸಾದ್ಯವಾಗುತ್ತಿಲ್ಲ. ಯಾರೂ ಅವರನ್ನು ಅರ್ಥ ಮಾಡುವುದಿಲ್ಲ ಎಂಬ ಕಾರಣವನ್ನು ಅವರು ನೀಡುತ್ತಾರೆ.

ಇದರಿಂದ ತಿಳಿಯುವುದು ಏನೆಂದರೆ ವ್ಯಸನದಿಂದಾಗಿ ಅವರಿಗೆ ಭಾವನೆಗಳನ್ನು, ಸಂಧರ್ಭಗಳನ್ನು ನಿಭಾಯಿಸುವ ಚೈತನ್ಯವನ್ನು ಕಳೆದುಕೊಂಡಿದ್ದಾರೆ ಮತ್ತು ಅಮಲಿನ ಮೊರೆ ಹೋಗಿದ್ದಾರೆ.

೨೧. ಉತ್ತಮವಾಗಿ ಕೆಲಸ ಮಾಡಲು

ಶೇ. ೮೮ ರಷ್ಟು ಮದ್ಯ ವ್ಯಸನಿ ಮಹಿಳೆಯರು ಉತ್ತಮವಾಗಿ ಕೆಲಸ ಮಾಡಲು ಮದ್ಯವನ್ನು ಬಳಸುತ್ತಿರುವುದಾಗಿ ಹೇಳುತ್ತಾರೆ.

ವ್ಯಕ್ತಿ ಕುಡಿದಾಗ ಬೇರೆ ಸಮಯದಲ್ಲಿ ಮಾಡಲಾಗದ ಕೆಲಸವನ್ನು ಮಾಡಬಹುದು. ಇದಕ್ಕೆ ಮದ್ಯಸಾರ ಕಾರಣವಲ್ಲ. ಮದ್ಯವು ತಪ್ಪು, ಸರಿಯನ್ನು ಸಿರ್ಧರಿಸುವ ಶಕ್ತಿಯನ್ನು, ಸ್ವಯಂವಿಮರ್ಶಾ ಗುಣವನ್ನು, ಸ್ವ ನಿಯಂತ್ರಣ. ಸಂಕೋಚ ಮುಂತಾದ ಕ್ರಿಯೆಗಳನ್ನು ನಿಯಂತ್ರಿಸುವ ಮೆದುಳಿನ ಭಾಗವನ್ನು ಮಬ್ಬು ಮಾಡಿಬಿಡುತ್ತದೆ. ಮದ್ಯವು ದೈಹಿಕ ಸಾಮರ್ಥ್ಯವನ್ನು ಯಾವುದೇ ರೀತಿಯಿಂದ ಹೆಚ್ಚಿಸುವುದಿಲ್ಲ. ವ್ಯಸನದ ಕಾರಣದಿಂದಾಗಿ ಕೈ ನಡುಕ ಇರುವ ಕಾರಣ ಮದ್ಯ ವ್ಯಸನಿ ಮಹಿಳೆಯರು ಉತ್ತಮವಾಗಿ ಕೆಲಸ ಮಾಡಲು ಮದ್ಯಸೇವನೆ ಮಾಡುತ್ತಿರುವುದಾಗಿ ನೆಪ ನೀಡುವುದು ಕಾಣಬಹುದು.

೧೧. ಕೌಟುಂಬಿಕ ಸಮಸ್ಯೆಗಳಿಗಾಗಿ

ಶೇ. ೯೮ ರಷ್ಟು ಮದ್ಯ ವ್ಯಸನಿ ಮಹಿಳೆಯರು ಕೌಟುಂಬಿಕ ಸಮಸ್ಯೆಗಳಿಗಾಗಿ ಮದ್ಯ ಸೇವನೆ ಮಾಡುತ್ತಿರುವುದಾಗಿ ಹೇಳುತ್ತಾರೆ. ಮದ್ಯ ಸೇವನೆಯಿಂದಾಗಿ ಕೌಟುಂಬಿದ ಜೀವನವು ಅಮಲು ವ್ಯಸನಿ ಮಹಿಳೆಯರಿಗೆ ಸವಾಲಾಗಿದೆ. ಅಮಲು ಸೇವನೆಯಿಂದಾಗಿ ಕುಟುಂಬದಲ್ಲಿ ಸರಿಯಾದ ಪಾತ್ರವಹಿಸಲು ವ್ಯಸನಕ್ಕೆ ಒಳಗಾದ ಮಹಿಳೆಗೆ ಸಾದ್ಯವಾಗುವುದಿಲ್ಲ. ಕುಟುಂಬದ ನಿರೀಕ್ಷೆಗಳು, ಮನೆಯ, ಮಕ್ಕಳ ಜವಾಬ್ದಾರಿ ಇವುಗಳು ಅಮಲು ವ್ಯಸನಕ್ಕೆ ಒಳಪಟ್ಟ ಮಹಿಳೆಗೆ ಬಹಳ ಕಷ್ಟದಾಯಕವಾಗುತ್ತದೆ. ಕೌಟುಂಬಿಕ ಸಮಸ್ಯೆಗಳಿಗಾಗಿ ಕುಡಿಯುತ್ತೇನೆ ಎಂಬುವುದು ಕೌಟುಂಬಿಕ ಜವಾಬ್ದಾರಿಗಳಿಂದ ಪಲಾಯನ ಮಾಡಲು ಮದ್ಯವನ್ನು ಉಪಯೋಗಿಸಿರುವುದು ಕಂಡು ಬರುತ್ತದೆ. ಇದು ಕುಟುಂಬದ ವ್ಯಕ್ತಿಗಳಿಗೆ ವ್ಯಸನದ ಬಗ್ಗೆ ಮಾಹಿತಿ ಇಲ್ಲದಿರುವುದನ್ನೂ ತೋರಿಸಿಕೊಡುತ್ತದೆ.

೧೨. ಸಾಲ, ಹಣದ ಸಮಸ್ಯೆ

ಶೇ. ೭೪ ರಷ್ಟು ಮದ್ಯ ವ್ಯಸನಿ ಮಹಿಳೆಯರಿಗೆ ಸಾಲ, ಹಣದ ಸಮಸ್ಯೆ ಇರುವುದು ಕಂಡುಬರುತ್ತದೆ. ಕುಡಿತದ ಸಮಸ್ಯೆಯಿಂದಾಗಿ ದುಡಿಯಲೂ ಆಗುವುದಿಲ್ಲ, ಕುಡಿತಕ್ಕೆ ಹಣ ತುಂಬಾ ಬೇಕಾಗುತ್ತದೆ. ಕುಡಿತದಿಂದಲೇ ಸಾಲ, ಹಣದ ಸಮಸ್ಯೆಯಾಗಿದ್ದರೂ ತಮ್ಮ ಕುಡಿತಕ್ಕೆ ತಮಗಿರುವ ಸಾಲ ಹಾಗೂ ಹಣದ ಸಮಸ್ಯೆ ಕಾರಣವೆಂದು ಮದ್ಯ ವ್ಯಸನಿ ಮಹಿಳೆಯರು ಹೇಳುತ್ತಿದ್ದಾರೆ. ತಾನು ಮದ್ಯ ವ್ಯಸನಿಯಾಗಿದ್ದೇನೆ ಎಂಬ ಅರಿವು ಮಹಿಳೆಗೆ ಇರದ ಕಾರಣ ತಮ್ಮ ವ್ಯಸನಕ್ಕೆ ಈ ಕಾರಣವನ್ನು ನೀಡುತ್ತಿದ್ದಾರೆ. ಇದು ವ್ಯಸನದ ಬಗ್ಗೆ ಮಹಿಳೆಗೆ ಯಾವುದೇ ರೀತಿಯ ತಿಳುವಳಿಕೆ ಇಲ್ಲದಿರುವುದನ್ನು ತೋರಿಸಿಕೊಡುತ್ತದೆ.

೧೪. ಹೆದರಿಕೆ ಕಡಿಮೆ ಮಾಡಲು

ಮದ್ಯವ್ಯಸನಿ ಮಹಿಳೆಯರು ಹೆದರಿಕೆ ಕಡಿಮೆ ಮಾಡಲು ತಾವು ಮದ್ಯ ಸೇವನೆ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ವಿಪರೀತ ಮದ್ಯ ಸೇವನೆಯಿಂದ ನರಗಳು ದುರ್ಬಲವಾಗುತ್ತವೆ. ಮೆದುಳು ಹಾಗೂ ನರಮಂಡಲದ ಮೇಲೆ ಉಂಟಾಗುವ ನಿರಂತರ ಹಾಗೂ ಹಾನಿಕಾರಕ ರಾಸಾಯನಿಕ ಕ್ರಿಯೆಗಳಿಂದ ಎಷ್ಟೋ ಮದ್ಯವ್ಯಸನಿಗಳು ಚಿತ್ತ ಭ್ರಮಣೆಗೆ ಒಳಗಾಗಿ ಹುಚ್ಚರಂತೆ ವರ್ತಿಸುವರು.

ವ್ಯಸನದಿಂದಾಗಿ ವಾಸ್ತವವನ್ನು ಎದುರಿಸಲು ಇರುವ ಅಸಹಾಯಕತೆ, ವ್ಯಸನದ ಬಗ್ಗೆ ಮಾಹಿತಿಯ ಕೊರತೆ ಇರುವುದು ಹೆದರಿಕೆ ಕಡಿಮೆ ಮಾಡಲು ಮಹಿಳೆಯರು ಮದ್ಯಪಾನದ ಮೊರೆ ಹೋಗಿರುವುದು ಇದರಿಂದ ತಿಳಿದುಬರುತ್ತದೆ.

೧೫. ದುಃಖ ಕಡಿಮೆ ಮಾಡಲು

ಮದ್ಯವ್ಯಸನಿ ಮಹಿಳೆಯರು ದುಃಖ ಕಡಿಮೆ ಮಾಡಲು ತಾವು ಮದ್ಯ ಸೇವನೆ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಮದ್ಯ ಸೇವನೆಗೆ ಸಮಾಜದಲ್ಲಿರುವ ತಪ್ಪು ಕಲ್ಪನೆಯನ್ನು ಇದು ತೋರಿಸಿಕೊಡುತ್ತದೆ. ಮದ್ಯ ಸೇವನೆಯು ದುಃಖ ಕಡಿಮೆ ಮಾಡುವುದು ಎಂಬ ತಪ್ಪು ತಿಳುವಳಿಕೆ ಮದ್ಯ ವ್ಯಸನಕ್ಕೆ ಒಂದು ಕಾರಣವಾಗಿದೆ. ಆಲ್ಕೋಹಾಲ್ ನ ಅಮಲಿನಲ್ಲಿ ಮನಸ್ಸು ನೋವು, ನಿರಾಶೆ ದುಃಖದ ಭಾವನೆಗಳನ್ನು ತಾತ್ಕಾಲಿಕವಾಗಿ ಗ್ರಹಿಸುವುದಿಲ್ಲ. ಹಾಗಾಗಿ ಈ ಭಾವನೆಗಳು ಮರೆತಂತಾಗುತ್ತವೆ. ಅಮಲು ಇಳಿದಾಗ, ನೋವಿನ ನೆನಪು, ದುಃಖದ ತೀವ್ರತೆ ಹೆಚ್ಚಾಗುತ್ತದೆ. ವ್ಯಕ್ತಿ ಮತ್ತೆ ಕುಡಿಯುತ್ತಾನೆ. ಸದಾ ಅಮಲಿನಲ್ಲೇ ಇರಲು ಇಚ್ಚಿಸುತ್ತಾನೆ. ಆಲ್ಕೋಹಾಲ್ ಒಂದು ವಿಷಕಾರಿ ವಸ್ತುವಾಗಿದೆ, ನೋವು ದುಃಖವನ್ನು ಮರೆಯಲು ಅಮಲು ಸೇವನೆ ಅಪಾಯಕಾರಿ. ಮದ್ಯಸೇವನೆ ಸಮಸ್ಯೆ, ದುಃಖವನ್ನು ಹೆಚ್ಚಿಸುತ್ತದೆಯೇ ಹೊರತು ಕಡಿಮೆ ಮಾಡುವುದಿಲ್ಲ. ಈ ತಪ್ಪು ನಂಬಿಕೆಗೆ ಅಮಲಿನ, ಮದ್ಯದ ಬಗೆಗಿನ ತಪ್ಪು ಮಾಹಿತಿ ಕಾರಣವಾಗಿದೆ.

೧೮. ಕೀಳರಿಮೆ ಹೋಗಲಾಡಿಸಲು

ಮದ್ಯವ್ಯಸನಿ ಮಹಿಳೆಯರು ಕೀಳರಿಮೆ ಹೋಗಲಾಡಿಸಲು ಮದ್ಯ ಸೇವನೆಯನ್ನು ಆಶ್ರಯಿಸಿರುವುದು ಕಂಡು ಬರುತ್ತದೆ. ಮದ್ಯದ ಸಮಸ್ಯೆಯಿರುವ ಮಹಿಳೆಯನ್ನು ಕುಟುಂಬ, ಸಮಾಜ ಕೀಳಾಗಿ ಕಾಣುತ್ತದೆ. ಸಮಸ್ಯೆಯಿಂದ ಹೊರಬರಲು ಪ್ರಯತ್ನಿಸುವ ಬದಲಾಗಿ ಮದ್ಯವನ್ನೇ ಆಶ್ರಯಿಸಿ ಹೆಚ್ಚಿನ ಸಮಸ್ಯೆಗೆ ಒಳಗಾಗಿರುವುದು ಕಾಣಬರುತ್ತದೆ.

ಆಲ್ಕೋಹಾಲ್ ಸೃಜನಶೀಲತೆಯನ್ನು ನಾಶ ಮಾಡುತ್ತದೆ. ಆಲ್ಕೋಹಾಲ್ ನ ಅಮಲಿನಲ್ಲಿ ಸುಸಂಬದ್ಧ ಚಿಂತನೆ ಸಾದ್ಯವಾಗುವುದಿಲ್ಲ. ಇಲ್ಲಿ ವಾಸ್ತವಿಕತೆಯಿಂದ ಪಲಾಯನ ಮಾಡಲು, ಧೈರ್ಯದಿಂದ ನಿಜಸ್ಥಿತಿಯನ್ನು ಅರ್ಥಮಾಡಲು ಮದ್ಯವು ಒಂದು ತೊಡಕಾಗಿದೆ. ಮದ್ಯದ ಅಮಲಿನಲ್ಲಿರುವಾಗ ಇತರ ಸಮಸ್ಯೆಗಳು ಗೌಣವಾಗಿ ಕಾಣುತ್ತವೆ. ಮದ್ಯವ್ಯಸನದಿಂದ ಹಲವಾರು ತೊಂದರೆಗಳುಂಟಾಗಿ, ಇದರಿಂದ ಕೀಳರಿಮೆ ಆಗುವುದು ಸಹಜ. ಆದರೆ ಆ ಕೀಳರಿಮೆಯನ್ನು ಹೋಗಲಾಡಿಸಲು ಮತ್ತೆ ಮದ್ಯದ ಮೊರೆ ಹೋಗಿರುವುದು ಅವರು ಕುಡಿತವನ್ನು ಬಿಡಲು ಸಾದ್ಯವಾಗದಿರುವುದನ್ನು ತೋರಿಸುಕೊಡುತ್ತದೆ.

೧೭. ಹತಾಶೆಯಿಂದ

ಶೇ. ೯೮ ರಷ್ಟು ಮದ್ಯವ್ಯಸನಿ ಮಹಿಳೆಯರು ಹತಾಶೆಯಿಂದ ಮದ್ಯ ಸೇವನೆ ಮಾಡುತ್ತಿರುವುದಾಗಿ ಮೇಲಿನ ಮಾಹಿತಿಯಿಂದ ತಿಳಿದುಬರುತ್ತದೆ.ಸಂತೋಷ, ವಿಶ್ರಾಂತಿಗೆಂದು ಪ್ರಾರಂಭಿಸಿದ ಮದ್ಯ ಸೇವನೆ ವ್ಯಸನಕ್ಕೆ ತಿರುಗಿದಾಗ, ವ್ಯಕ್ತಿಯು ಹತಾಶನಾಗುತ್ತಾನೆ. ಕುಡಿತವಿಲ್ಲದೆ ಬದುಕಲು ಸಾದ್ಯವಿಲ್ಲ ಎಂಬ ಪರಿಸ್ಥಿತಿ ಉಂಟಾದಾಗ ಹತಾಶೆಯು ಆವರಿಸುತ್ತದೆ. ವ್ಯಸನದಿಂದಾಗಿ ಆಗುವ ಹಲವಾರು ಸಮಸ್ಯೆಗಳಿಂದ ಪಾರಗುವ ದಾರಿ ಕಾಣದೆ, ತಾವು ಈ ರೀತಿಯಲ್ಲಿ ಮದ್ಯದ ಮೊರೆ ಹೋಗುತ್ತಿರುವುದು ಹತಾಶೆಯಿಂದ ಮದ್ಯದ ದಾಸರಾಗುತ್ತಿರುವುದು ಕಂಡುಬರುತ್ತದೆ.

III. ಮದ್ಯವ್ಯಸನಿ ಮಹಿಳೆ ಬದುಕುತ್ತಿರುವ ಪರಿಸರ ಮತ್ತು ಪರಿಸ್ಥಿತಿ

೧೮. ಜಾತಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕುಡಿತ

೨೬ ಶೇಕಡಾದಷ್ಟು ಮಹಿಳೆಯರು ತಾವು ಜಾತಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕುಡಿತವನ್ನು ಮಾಡುತ್ತಿರುವುದಾಗಿ ಹೇಳಿದ್ದಾರೆ. ೭೪ ಶೇಕಡಾದಷ್ಟು ಮಹಿಳೆಯರು ತಮ್ಮ ಕುಡಿತಕ್ಕೆ ಜಾತಿ, ಸಾಂಸ್ಕೃತಿಕ ಹಿನ್ನೆಲೆ ಇಲ್ಲ ಎಂಬುದಾಗಿ ಹೇಳುತ್ತಾರೆ.

ಹಲವು ಜಾತಿ, ಪಂಗಡಗಳಲ್ಲಿ ಜಾತಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕುಡಿತವು ಬಳಕೆಯಲ್ಲಿರುವುದು ಕಂಡುಬರುತ್ತದೆ. ಕೆಲವು ಪಂಗಡಗಳಲ್ಲಿ ಅಮಲು ಸೇವನೆ ಹೆಚ್ಚಾಗಿದ್ದು, ವ್ಯಸನವೂ ಈ ಸಮೂದಾಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ವ್ಯಸನದ ಬಗ್ಗೆ ತಿಳುವಳಿಕೆಯ ಕೊರತೆ ಹಾಗೂ ಮಹಿಳಾ ಅಮಲು ವ್ಯಸನಿಗಳಿಗೆ ಚಿಕಿತ್ಸೆಗೆ ಅವಕಾಶ ಇಲ್ಲದಿರುವುದು ವ್ಯಸನಕ್ಕೆ ಒಂದು ಕಾರಣವಾಗಿದೆ.

ಕುಡಿತವು ಇಂದು ಪ್ರತಿಷ್ಠೆಯ ಕುರುಹಾಗಿದೆ. ಜಾತಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮದ್ಯ ಸೇವನೆಗೆ ಅನುಮತಿ ಇದ್ದಾಗ ಮದ್ಯ ಸೇವನೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ

೧೯. ಕುಡಿತಕ್ಕೆ ಪ್ರೋತ್ಸಾಹಿಸುವ ಸಂದರ್ಭಗಳು – ಹಬ್ಬ, ಜಾತ್ರೆ ಇತ್ಯಾದಿ

ಶೇಕಡಾ ೫೪ರಷ್ಟು ಮಹಿಳೆಯರು ಹಬ್ಬ, ಜಾತ್ರೆ ಇತ್ಯಾದಿ ತಮ್ಮ ಕುಡಿತವು ಹೆಚ್ಚಾಗಲು ಕಾರಣವೆಂದು ಒಪ್ಪಿಕೊಳ್ಳುತ್ತಾರೆ. ಶೇಕಡಾ೪೬ರಷ್ಟು ಮಹಿಳೆಯರು ತಮ್ಮ ಕುಡಿತ ಹೆಚ್ಚಾಗಲು ಹಬ್ಬ, ಜಾತ್ರೆ ಇತ್ಯಾದಿಗಳು ಕಾರಣವೆಂದು ನಂಬುವುದಿಲ್ಲ.

ಕುಡಿತಕ್ಕೆ ಪ್ರೋತ್ಸಾಹಿಸುವ ಸಂದರ್ಭಗಳು – ಹಬ್ಬ, ಜಾತ್ರೆ ಇತ್ಯಾದಿ ಇತ್ಯಾದಿಗಳು ಮಹಿಳೆ ಕುಡಿತದ ರುಚಿ ನೋಡಲು ಕಾರಣವಾಗಿದೆ ಹಾಗೂ ಕುಡಿತ ಮುಂದುವರಿಸಲು ಒಂದು ನೆಪವಾಗಿ ಕಂಡು ಬರುತ್ತದೆ. ಹಬ್ಬ, ಜಾತ್ರೆ ಇತ್ಯಾದಿ ಕುಡಿತದ ಆಕರ್ಶಣೆಯಾಗಲು ಇರುವ ಸಂದರ್ಭಗಳು. ಹೀಗೆ ಅಮಲಿನ ರುಚಿ ನೋಡಿದ ಮಹಿಳೆಯರು ಇಂದು ಅಮಲಿನ ದಾಸರಾಗಿರುವುದು ಕಂಡುಬರುತ್ತದೆ.

೩೦. ಪರಿಸರದಲ್ಲಿ ಕುಡಿತ

ಮದ್ಯ ವ್ಯಸನಿ ಮಹಿಳೆಯರ ಪರಿಸರದಲ್ಲಿ ಕುಡಿತವಿರುವುದು ಮದ್ಯ ಸೇವನೆ ಹೆಚ್ಚಾಗಲು ಒಂದು ಕಾರಣವಾಗಿ ಕಂಡುಬರುತ್ತದೆ. ಶೇ.೫೮ ರಷ್ಟು ಮಹಿಳೆಯರು ಕುಡಿತದ ಪರಿಸರದಲ್ಲಿ ಬದುಕುತ್ತಿದ್ದಾರೆ.

ಸುಲಭವಾಗಿ ಮದ್ಯದ ಲಭ್ಯತೆ, ಪರಿಸರದಲ್ಲಿ ಇತರರು ಕುಡಿಯುವುದು, ಈ ವಾತಾವರಣವು ಕುಡಿತ ಒಂದು ದೈನಂದಿನ ಜೀವನದ ಭಾಗವಾಗಿ ಇದರಿಂದ ಆಗುವ ಹಾನಿಯ ಬಗ್ಗೆ ಸರಿಯಾದ ಅರಿವು ಇಲ್ಲದೆ ತಮ್ಮ ಕೆಲಸ, ಜವಾಬ್ದಾರಿಗಳನ್ನು ಲೆಕ್ಕಿಸದೆ ಮಹಿಳೆಯರು ಕುಡಿತಕ್ಕೆ ಬಲಿಯಾಗಿ ಮದ್ಯದ ದಾಸರಾಗಿರುವುದು ಕಂಡುಬರುತ್ತದೆ.

ಪ್ರತಿಯೊಂದು ವ್ಯಕ್ತಿಯ ಜೀವನದಲ್ಲಿ ಪರಿಸರದ ಪ್ರಭಾವವು ಬಹಳ ಪ್ರಮುಖ ಪಾತ್ರವಹಿಸುತ್ತದೆ. ಒಳ್ಳೆಯ ಪರಿಸರವು ವ್ಯಕ್ತಿಯ ಮೇಲೆ ಧನಾತ್ಮಕ ಪರಿಣಾಮವನ್ನು ಉಂಟು ಮಾಡಿದರೆ, ಕೆಟ್ಟ ಪರಿಸರವು ವ್ಯಕ್ತಿಯ ಅವನತಿಗೆ ಕಾರಣವಾಗನಲ್ಲದು. ಈ ಪರಿಸರದಲ್ಲಿ ಬೆಳೆಯುವ ಮಕ್ಕಳು ಸಹ ಇದೇ ವಾತಾವರಣದಲ್ಲಿ ಬೆಳೆದು ಚಿಕ್ಕ ವಯಸ್ಸಿನಲ್ಲೇ ಅಮಲಿಗೆ ಬಲಿಯಾಗುತ್ತಾರೆ. ಇದರಿಂದಾಗಿ ಪರಿಸರದಲ್ಲಿ ಕುಡಿತ ಮಹಿಳೆಯು ಮದ್ಯವ್ಯಸನಿಯಾಗಲು ಒಂದು ಬಲವಾದ ಕಾರಣವಾಗಿದೆ.

೩೧. ಸುಲಭದಲ್ಲಿ ಮದ್ಯದ ಪೂರೈಕೆ, ಲಭ್ಯತೆ

ಶೇ.೫೮ ಮಹಿಳೆಯರ ಪರಿಸರದಲ್ಲಿ ಸುಲಭದಲ್ಲಿ ಮದ್ಯದ ಪೂರೈಕೆ ಇರುವುದು ಈ ಸಂಶೋಧನೆಯಲ್ಲಿ ಕಂಡುಬರುತ್ತದೆ.

ಮದ್ಯ ವ್ಯಸನಿ ಮಹಿಳೆಯರ ಪರಿಸರದಲ್ಲಿ ಸುಲಭದಲ್ಲಿ ಮದ್ಯದ ಪೂರೈಕೆ, ಲಭ್ಯತೆ ಮದ್ಯ ಸೇವನೆ ಹೆಚ್ಚಾಗಲು ಒಂದು ಕಾರಣವಾಗಿದೆ. ಮಹಿಳೆಯರು ಮದ್ಯ ಮಾರುವಲ್ಲಿಗೆ ಹೋಗಿ ಮದ್ಯ ಖರೀದಿಸುವುದು ಕಡಿಮೆ. ಅವರು ಮದ್ಯವನ್ನು ಪಡೆಯಲು ಇತರರ ಸಹಾಯ ಕೇಳುವುದು ಸಾಮಾನ್ಯ. ಪರಿಸರದಲ್ಲಿ ಸುಲಭದಲ್ಲಿ ಮದ್ಯದ ಪೂರೈಕೆ ಇರುವುದು ವ್ಯಸನಕ್ಕೆ ಒಳಪಟ್ಟ ಮಹಿಳೆಯರಿಗೆ ಹೆಚ್ಚೆಚ್ಚು ಮದ್ಯ ಸೇವನೆ ಮಾಡಲು ಒಂದು ಸುಲಭವಾದ ದಾರಿಯಾಗಿದೆ. ಈ ಮದ್ಯಕ್ಕಾಗಿ ತಮ್ಮ ಹಣ, ಒಡವೆ, ಆರೋಗ್ಯವನ್ನು ಅವರು ಕಳೆದುಕೊಂಡಿದ್ದಾರೆ.

೩೧. ಧಾರ್ಮಿಕ ಕಾರಣಗಳಿಗಾಗಿ ಕುಡಿತ

ಧಾರ್ಮಿಕ ಕಾರಣಗಳಿಗಾಗಿ ಕುಡಿತ ಮಹಿಳೆಯರಲ್ಲಿ ಕಡಿಮೆ. ಶೇ.೧೨ ಮಹಿಳೆಯರು ಮಾತ್ರ ಧಾರ್ಮಿಕ ಕಾರಣಗಳಿಗಾಗಿ ಅಮಲು ಸೇವನೆ ಮಾಡುತ್ತಿರುವುದಾಗಿ ಹಾಗೂ ಶೇ.೮೮ ಮಹಿಳೆಯರು ತಮ್ಮ ಕುಡಿತಕ್ಕೆ ಯಾವುದೇ ಧಾರ್ಮಿಕ ಕಾರಣವನ್ನು ನೀಡುತ್ತಿಲ್ಲ.

ಕೆಲವು ಧರ್ಮಗಳಲ್ಲಿ ಮದ್ಯ ಸೇವನೆಯು ಹೆಚ್ಚು ಸ್ವೀಕ್ರತವಾದರೆ, ಕೆಲವು ಧರ್ಮಗಳಲ್ಲಿ ಮದ್ಯ ಸೇವನೆಯನ್ನು ಬಹಳವಾಗಿ ಖಂಡಿಸಲಾಗುತ್ತದೆ. ಧಾರ್ಮಿಕವಾಗಿ ಕುಡಿತಕ್ಕೆ ಯಾವುದೇ ಕಟ್ಟುನಿಟ್ಟು ಇಲ್ಲದ ಜನರಲ್ಲಿ ಮದ್ಯ ಸೇವನೆ ಹಾಗೂ ಮದ್ಯವ್ಯಸನವೂ ಹೆಚ್ಚಾಗಿರುವುದು ಕಂಡುಬರುತ್ತದೆ.

೩೨. ವ್ಯಸನದ ಬಗ್ಗೆ ತಿಳುವಳಿಕೆ ಇಲ್ಲ

ಶೇಕಡಾ.೯೨ ರಷ್ಟು ಮಹಿಳೆಯರಿಗೆ ವ್ಯಸನದ ಬಗ್ಗೆ ತಿಳುವಳಿಕೆ ಇಲ್ಲ. ಇದರಿಂದಾಗಿ ತಮ್ಮ ಕುಡಿತಕ್ಕೆ ಬೇರೆ ಬೇರೆ ಕಾರಣಗಳನ್ನು ನೀಡುತ್ತಿದ್ದಾರೆ.

ಸಾಮಾಜಿಕವಾಗಿ ಮದ್ಯ ಸೇವನೆ ಮಾಡುವವರನ್ನು ಸಮಾಜವು ಒಪ್ಪಿಕೊಳ್ಳುತ್ತದೆ. ಆದರೆ ಮದ್ಯಕ್ಕೆ ದಾಸರಾದವರನ್ನು ಸಮಾಜವು ಕೀಳಾಗಿ ಕಾಣುವುದು ಬಹಳ ಸಾಮಾನ್ಯವಾಗಿದೆ. ಆದ್ದರಿಂದ ಯಾವ ವ್ಯಕ್ತಿಯೂ ತಾನು ವ್ಯಸನಿಯಾಗಬೇಕೆಂದು ಮದ್ಯ ಸೇವನೆ ಮಾಡುವುದಿಲ್ಲ. ಹೆಚ್ಚೆಚ್ಚು ಮದ್ಯ ಸೇವನೆ ಮಾಡುತ್ತಿದ್ದಂತೆ ವ್ಯಕ್ತಿಯು ವ್ಯಸನದ ಅರಿವಿಲ್ಲದೆ ತನಗೆ ಯಾರೋ ಮಾಟ ಮಾಡಿದ್ದಾರೆ, ತನ್ನನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ, ತನ್ನ ಕಷ್ಟಗಳಿಂದಾಗಿ ತಾನು ಕುಡಿಯುತ್ತೇನೆ ಇತ್ಯಾದಿ ಸಮರ್ಥನೆಗಳನ್ನು ಕೊಡುವುದು ಕಾಣಸಿಗುತ್ತದೆ. ಇದರಿಂದ ವ್ಯಸನದ ಬಗ್ಗೆ ತಿಳುವಳಿದೆ ಇಲ್ಲದಿರುವುದು ವ್ಯಸನವು ಹೆಚ್ಚಾಗಲು ಹಾಗೂ ಚಿಕಿತ್ಸೆ ಪಡೆಯಲು ಮುಂದೆ ಬರದೇ ಇರಲು ಸಹ ಕಾರಣವಾಗಿದೆ.

ಸಂಶೋಧನೆಗೆ ಒಳಪಟ್ಟ ಶೇ.೮ ಮಹಿಳೆಯರಿಗೆ ಮಾತ್ರ ವ್ಯಸನದ ಬಗ್ಗೆ ತಿಳುವಳಿಕೆ ಇದೆ. ಆದರೂ ಕೇವಲ ತಿಳುವಳಿಕೆಯಿಂದ ವ್ಯಸನದಿಂದ ಹೊರಬರುವುದು ಅವರಿಗೆ

ಅಸಾಧ್ಯವಾಗಿದೆ. ವ್ಯಸನದ ಬಗ್ಗೆ ಅವರಿಗೆ ಅಲ್ಪ ಸ್ವಲ್ಪ ತಿಳುವಳಿಕೆ ಇದ್ದರೂ ವ್ಯಸನಕ್ಕೆ ಚಿಕಿತ್ಸೆ ಇದೆ ಎಂಬ ಅರಿವು ಅವರಿಗಿಲ್ಲ. ವ್ಯಸನದಿಂದಾಗಿ ಅವರು ಮದ್ಯದ ಮೇಲೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹೊಂದಿಕೊಂಡಿರುವುದರಿಂದ ಅವರಿಗೆ ಇದರಿಂದ ಹೊರಬರುವುದು ಅಸಾಧ್ಯವಾಗಿದೆ.

೨೪. ಕುಡಿತದ ಬಗ್ಗೆ ಇರುವ ಮೂಢನಂಬಿಕೆಗಳು.

ವ್ಯಸನಕ್ಕೆ ಒಳಪಟ್ಟ ಶೇ.೭೮ ರಷ್ಟು ಮಹಿಳೆಯರಿಗೆ ಕುಡಿತದ ಬಗ್ಗೆ ಮೂಢನಂಬಿಕೆಗಳಿವೆ. ತಮ್ಮ ಕುಡಿತ ಹೆಚ್ಚಾಗಲು ತಮಗೆ ಯಾರೋ ಮಾಟ ಮಾಡಿರಬಹುದು ಎಂದು ಹಲವು ಮಹಿಳೆಯರು ತಿಳಿದಿದ್ದಾರೆ. ಅದೇ ರೀತಿ ಆರೋಗ್ಯ, ಮಾನಸಿಕ ನೆಮ್ಮದಿಗೆ ಕುಡಿತ ಸಹಾಯವಾಗುತ್ತದೆ ಎಂದು ಮಹಿಳೆಯರು ನಂಬಿದ್ದಾರೆ.

ಸಮಾಜದಲ್ಲಿ ಮದ್ಯ ಸೇವನೆಯ ಬಗ್ಗೆ ಹಲವಾರು ಮೂಢ ನಂಬಿಕೆಗಳಿವೆ. ಅದರಲ್ಲಿ ಆಲ್ಕೋಹಾಲ್ ಟೆನ್ಶನ್ ದೂರಮಾಡುತ್ತದೆ, ಆಲ್ಕೋಹಾಲ್ ಸೇವನೆಯಿಂದ ಒಳ್ಳೆಯ ನಿದ್ರೆ ಬರುತ್ತದೆ, ಆಲ್ಕೋಹಾಲ್ ಸೇವನೆ ಭಯವನ್ನು ನಿವಾರಿಸುತ್ತದೆ, ಧೈರ್ಯವನ್ನು ತಂದುಕೊಡುತ್ತದೆ, ಆಲ್ಕೋಹಾಲ್ ಮಾನಸಿಕ ನೋವನ್ನು ನಿರಾಸೆಯನ್ನು ಮರೆಸುತ್ತದೆ, ಆಲ್ಕೋಹಾಲ್ ಸೇವನೆಯಿಂದ ಒಳ್ಳೆಯ ಮೈಕಟ್ಟು ಬರುತ್ತದೆ, ಆಲ್ಕೋಹಾಲ್ ಮೈ ಕೈ ನೋವನ್ನು ಮರೆಸುತ್ತದೆ, ಆಲ್ಕೋಹಾಲ್ ನಿಂದ ಚಳಿ ಕಡಿಮೆಯಾಗುತ್ತದೆ, ಮೈ ಬೆಚ್ಚಗಾಗಲು ಅದು ಸಹಾಯ ಮಾಡುತ್ತದೆ, ಆಲ್ಕೋಹಾಲ್ ಸೃಜನಶೀಲತೆಯನ್ನು ವೃದ್ಧಿಸುತ್ತದೆ, ಮದ್ಯ ಪಾನವು ಕಾರ್ಯಸಾಮರ್ಥ್ಯವನ್ನು ಹೆಚ್ಚಿಸುತ್ತದೆ, ಉತ್ತಮ ಗುಣಮಟ್ಟದ ಮದ್ಯವು ಸುರಕ್ಷಿತ, ಆಲ್ಕೋಹಾಲ್ ಲೈಂಗಿಕ ಪ್ರಚೋದಕ, ಶಕ್ತಿವರ್ಧಕ, ಆಲ್ಕೋಹಾಲ್ ಒಂದು ಔಷಧಿ ಇತ್ಯಾದಿ ಮದ್ಯದ, ಕುಡಿತದ ವಿಚಾರದಲ್ಲಿ ಇರುವ ಕೆಲವು ಮೂಢ ನಂಭಿಕೆಗಳು.

ಇಂತಹ ಮೂಢ ನಂಬಿಕೆಗಳನ್ನು ಸಮಾಜದಲ್ಲಿ ಭಿತ್ತಿ ಇದರ ದುರ್ಲಾಭವನ್ನು ಮದ್ಯದ ವ್ಯಾಪಾರಿಗಳು ಪಡೆದುಕೊಳ್ಳುತ್ತಾರೆ ಮತ್ತು ಮುಗ್ಧ ಜನರು ಇಂತಹ ಮೂಢ ನಂಭಿಕೆಗಳೊಂದಾಗಿ ತಮ್ಮ ಆರೋಗ್ಯ, ಸಂಪತ್ತು, ಕುಟುಂಬದ ನೆಮ್ಮದಿ, ಸಮಾಜದಲ್ಲಿ ತಮ್ಮ ಘನತೆ ಗೌರವವನ್ನು ಕಳೆದುಕೊಳ್ಳುತ್ತಾರೆ.

೩೫. ದೈಹಿಕ ಹಿಂಸೆ

ವ್ಯಸನಕ್ಕೆ ಒಳಪಟ್ಟ ಬಹುತೇಕ ಶೇ.೬೨ ಮಹಿಳೆಯರು ದೈಹಿಕ ಹಿಂಸೆಗೆ ಒಳಗಾಗಿದ್ದಾರೆ.

ಮದ್ಯವ್ಯಸನಕ್ಕೆ ಒಳಗಾದ ಮಹಿಳೆಯರು ತಮ್ಮ ಕೆಲಸ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಅಶಕ್ತರಾಗುತ್ತಾರೆ. ಕುಟುಂಬದಲ್ಲಿ ಒಬ್ಬರು ತಮ್ಮ ಪಾತ್ರವನ್ನು ಸರಿಯಾಗಿ ಮಾಡದಿದ್ದರೆ ಅಲ್ಲಿ ಇರುವ ಇತತ ಸದಸ್ಯರಿಗೆ ಒತ್ತಡ ಹೆಚ್ಚಾಗುತ್ತದೆ. ಇದರಿಂದಾಗಿ ಅವರ ಮಾನಸಿಕ, ದೈಹಿಕ ಆರೋಗ್ಯ ಹಾಳಾಗುವ ಅವಕಾಶಗಳು ಬಹಳ.

ಸಮಾಜವು ಮದ್ಯ ವ್ಯಸನಿಯನ್ನು ಕೀಳಾಗಿ ಕಾಣುವುದು, ಹಾಗೂ ಅದರಲ್ಲೂ ಮದ್ಯ ವ್ಯಸನಕ್ಕೆ ಒಳಗಾದ ಮಹಿಳೆಯನ್ನು ಕಾಣುವ ರೀತಿಯಿಂದಾಗಿ ಕುಟುಂಬದ ಸದಸ್ಯರು ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ.

ಕುಡಿತದಿಂದಾಗಿ ತಮ್ಮ ಕರ್ತವ್ಯಗಳನ್ನು ಮಾಡಲು ಸಾಧ್ಯವಾಗದಿರುವುದು, ಮನೆಯವರಿಗೆ ವ್ಯಸನದ ಬಗ್ಗೆ ತಿಳುವಳಿಕೆ ಇಲ್ಲದಿರುವುದರಿಂದ ದೈಹಿಕ ಹಿಂಸೆ ನೀಡಿ ಕುಡಿತವನ್ನು ನಿಲ್ಲಿಸಲು ಮನೆಯವರು ಪ್ರಯತ್ನಿಸುತ್ತಾರೆ.

ಮನೆಯಲ್ಲಿ ಇತರ ಸದಸ್ಯರ ಕುಡಿತ, ಕುಟುಂಬದ ಇತರ ಸದಸ್ಯರು ಅಮಲಿನ ನಶೆಯಲ್ಲಿ ಇರುವಾಗ ಅಲ್ಲಿ ಸರಿಯಾದ ಮಾತುಕತೆ, ಸಾದ್ಯವಾಗುವುದಿಲ್ಲ. ಎಷ್ಟೋ ಸಲ ಇಂತಹ ವಾತಾವರಣದಲ್ಲಿ ದಿನಂಪ್ರತಿ ಹಿಂಸೆಯ ವಾತಾವರಣವಿರಿತ್ತದೆ. ವ್ಯಸನಕ್ಕೆ ಒಳಗಾದ ಮಹಿಳೆಯ ಬಗ್ಗೆ ಕುಟುಂಬದವರಿಗೆ ಇರುವ ಕೀಳು ಭಾಗನೆ, ಹೀಗೆ ಹಲವಾರು ವಿಷಯಗಳು ಮಹಿಳೆ ದೈಹಿಕ ಹಿಂಸೆಗೆ ಒಳಗಾಗಲು ಕಾರಣವಾಗಬಹುದು.ವ್ಯಸನಕ್ಕೆ ಒಳಗಾದ ಮಹಿಳೆಯರು ಅತೀ ಹೆಚ್ಚಿನ ದೈಹಿಕ ಹಿಂಸೆಗೆ ಒಳಗಾಗಿರುವುದು ಕಾಣಸಿಗುತ್ತದೆ.

೩೯. ಮಾನಸಿಕ ಕಿರುಕುಳ

ವ್ಯಸನಕ್ಕೆ ಒಳಪಟ್ಟ ಶೇ.೫೯ ಮಹಿಳೆಯರು ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಕುಡಿತದಿಂದಾಗಿ ತಮ್ಮ ಕರ್ತವ್ಯಗಳನ್ನು ಮಾಡಲು ಸಾಧ್ಯವಾಗದೆ ಕೀಳರಿಮೆಯಿಂದ ಬಳಲುವ ಮಹಿಳೆಯರಿಗೆ ಕುಟುಂಬದಲ್ಲಿ ಮಕ್ಕಳು, ಮನೆಯ ಇತರ ಸದಸ್ಯರಿಂದ ಸಿಗುವ ಅಗೌರವದ ನಡತೆ, ದೈಹಿಕ ಹಿಂಸೆ, ಕುಟುಂಬದಲ್ಲಿರುವ ಹೊಂದಾಣಿಕೆಯ ಕೊರತೆಯಿಂದಾಗಿ ವ್ಯಸನಕ್ಕೆ ಒಳಗಾದ ಮಹಿಳೆಯರು ಮಾನಸಿಕವಾಗಿ ಕಿರುಕುಳ ಅನುಭವಿಸಲು ಕಾರಣವಾಗಿದೆ.

ಮನೆಯವರಿಗೆ ವ್ಯಸನದ ಬಗ್ಗೆ ತಿಳುವಳಿಕೆ ಇಲ್ಲದಿರುವುದು, ಮನೆಯಲ್ಲಿ ಇತರ ಸದಸ್ಯರ ಕುಡಿತ ಇವುಗಳಿಂದಾಗಿ ಅಮಲು ವ್ಯಸನಿ ಮಹಿಳೆ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದಾಳೆ.

೩೭. ಆರೋಗ್ಯದ ಬಗ್ಗೆ ನಿರ್ಲಕ್ಷ

ಶೇಕಡಾ.೭೮ರಷ್ಟು ಮಹಿಳೆಯರು ತಾವು ಆರೋಗ್ಯದ ಬಗ್ಗೆ ನಿರ್ಲಕ್ಷ ತಾಳಿರುವುದನ್ನು ಒಪ್ಪಿಕೊಳ್ಳುತ್ತಾರೆ. ಶೇ.೧೧ ರಷ್ಟು ಮಹಿಳೆಯರು ತಾವು ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಿದ್ದೇವೆ ಎಂದು ಒಪ್ಪಿಕೊಂಡರೂ ಅವರು ಆರೋಗ್ಯದ ಸಮಸ್ಯೆಯಿರುವುದನ್ನು ನಿರಾಕರಿಸುವುದು ಕಾಣಿಸುತ್ತಿದೆ.

ಸಂಶೋಧನೆಗೆ ಒಳಪಟ್ಟ ಮದ್ಯವ್ಯಸನಿ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಅತೀವ ನಿರ್ಲಕ್ಷ್ಯ ತೋರುತ್ತಿದ್ದಾರೆ. ಮದ್ಯವ್ಯಸನಕ್ಕೆ ಒಳಪಟ್ಟ ಮಹಿಳೆಯರು ಸರಿಯಾದ ಆಹಾರ ಸೇವನೆ ಮಾಡದಿರುವುದು ಕಾಣಸಿಗುತ್ತಿದೆ. ವ್ಯಸನದಿಂದಾಗಿ ಅವರಿಗೆ ತಮ್ಮ ಆರೋಗ್ಯದ ಕಾಳಜಿ ವಹಿಸುವುದು ಸಾಧ್ಯವಾಗುತ್ತಿಲ್ಲ. ಇವರು ತಮ್ಮ ದೈಹಿಕ, ಮಾನಸಿಕ ಆರೋಗ್ಯದ ಬಗ್ಗೆ ಯಾವುದೇ ಕಾಳಜಿ ವಹಿಸುತ್ತಿಲ್ಲ. ಸರಿಯಾಗಿ ಸ್ನಾನ, ಬಟ್ಟೆಗಳ ನೈರ್ಮಲ್ಯವನ್ನು ಅವರು ಕಡೆಗಣಿಸಿದ್ದಾರೆ. ವ್ಯಸನದಿಂದಾಗಿ ಅವರಿಗೆ ಆರೋಗ್ಯದ ಬಗ್ಗೆ ಗಮನ ನೀಡಲು ಅಸಾಧ್ಯವಾಗಿದೆ.

[illegible]

IV. ಮಹಿಳಾ ಮದ್ಯವ್ಯಸನಿಗಳ ಕೌಟುಂಬಿಕ ಹಿನ್ನಲೆ

೩೮. ಕುಟುಂಬ

ವ್ಯಸನಕ್ಕೆ ಒಳಪಟ್ಟ ಶೇ.೬೨ ಮಹಿಳೆಯರು ನ್ಯೂಕ್ಲಿಯರ್ ಕುಟುಂಬದಲ್ಲಿ ಜೀವಿಸುತ್ತಿದ್ದಾರೆ. ಶೇಕಡ ೩೪ ಮಹಿಳೆಯರು ಕೂಡು ಕುಟುಂಬದಲ್ಲಿ ವಾಸಿಸುತ್ತಿದ್ದಾರೆ. ಶೇಕಡ ೨ ಒಬ್ಬಂಟಿಯಾಗಿ ಹಾಗೂ ಶೇಕಡ ೨ ಮಹಿಳೆಯರು ಸಂಸ್ಥೆಯಲ್ಲಿ ವಾಸಿಸುತ್ತಿದ್ದಾರೆ.

ಮೇಲಿನ ಕೋಷ್ಟಕದಿಂದ ತಿಳಿಯುವುದು ಏನೆಂದರೆ ನ್ಯೂಕ್ಲಿಯರ್ ಕುಟುಂಬದಲ್ಲಿ ವಾಸಿಸುವ ಮಹಿಳೆಯರಲ್ಲಿ ಮದ್ಯವ್ಯಸನವು ಹೆಚ್ಚಾಗಿರುವುದು ಕಂಡುಬರುತ್ತದೆ. ಅದರೊಂದಿಗೆ ವ್ಯಸನದ ಕಾರಣದಿಂದಾಗಿ ಕೂಡು ಕುಟುಂಬಗಳಲ್ಲಿ ವ್ಯಸನಕ್ಕೆ ಒಳಪಟ್ಟ ಮಹಿಳೆಯರಿಗೆ ಸ್ವೀಕೃತಿ ಇಲ್ಲದಿರುವುದೂ ಒಂದು ಕಾರಣವಾಗಿದೆ. ನ್ಯೂಕ್ಲಿಯರ್ ಕುಟುಂಬದಲ್ಲಿ ಇರುವ ಸ್ವಾತಂತ್ರ್ಯವು ವ್ಯಸನದಿಂದಾಗಿ ಸ್ವೇಚ್ಛೆಗೆ ಕಾರಣಗಾಗಿರುವುದು ಕಂಡುಬರುತ್ತದೆ.

೩೯. ಕುಟುಂಬದಲ್ಲಿ ಒಟ್ಟು ಸದಸ್ಯರು

ಶೇಕಡ ೪೪ ಮಹಿಳೆಯರ ಕುಟುಂಬದಲ್ಲಿ ೫ಕ್ಕಿಂತ ಹೆಚ್ಚಿನ ಸದಸ್ಯರು ಇದ್ದಾರೆ. ಶೇಕಡ ೩೨ ಕುಟುಂಬಗಳಲ್ಲಿ ೪ ಸದಸ್ಯರು, ಶೇಕಡ ೧೪ ಕುಟುಂಬಗಳಲ್ಲಿ ೩ ಸದಸ್ಯರು, ಶೇಕಡ ೬ ಕುಟುಂಬಗಳಲ್ಲಿ ೩ ಸದಸ್ಯರು ಹಾಗೂ ಶೇಕಡ ೪ ಮಹಿಳೆಯರು ಒಬ್ಬಂಟಿಯಾಗಿ ಹಾಗೂ ಸಂಸ್ಥೆಯಲ್ಲಿ ವಾಸಿಸುತ್ತಿದ್ದಾರೆ.

ವ್ಯಸನಕ್ಕೆ ಒಳಗಾಗಲು ಒಬ್ಬಂಟಿಯಾಗಿರುವುದು, ಇತರರೊಂದಿಗೆ ಬೆರೆಯಲು ಸಾಧ್ಯವಾಗದಿರುವುದು ಇವುಗಳು ಕಾರಣವಲ್ಲವೆಂಬುವುದು ಮೇಲಿನ ಮಾಹಿತಿಯಿಂದ ತಿಳಿಯುತ್ತದೆ. ವ್ಯಸನಕ್ಕೆ ಒಳಗಾದ ಹೆಚ್ಚಿನ ಮಹಿಳೆಯರ ಕುಟುಂಬದಲ್ಲಿ ಐದಕ್ಕಿಂತ ಹೆಚ್ಚಿನ ಸದಸ್ಯರಿದ್ದಾರೆ. ಶೇಕಡಾ ೩೨ ಕುಟುಂಬಗಳಲ್ಲಿ ನಾಲ್ಕು ಸದಸ್ಯರಿದ್ದಾರೆ.

೪೦. ಕುಟುಂಬದಲ್ಲಿ ಕುಡಿತದ ಅಭ್ಯಾಸವಿರುವ ಇತರ ಸದಸ್ಯರು

ಮದ್ಯವ್ಯಸನಿ ಮಹಿಳೆಯರ ಮನೆಯಲ್ಲಿ ೪೦ ಮಂದಿ ಮಹಿಳೆಯರ ತಂದೆಗೆ ಕುಡಿತದ ಅಭ್ಯಾಸವಿದೆ, ಅಥವಾ ಅಭ್ಯಾಸವಿತ್ತು. ೧೧ ಮಂದಿ ಮಹಿಳೆಯರ ತಾಯಿಗೆ ಕುಡಿತದ ಅಭ್ಯಾಸವಿದೆ. ೩೮ ಮಂದಿ ಮಹಿಳೆಯರ ಗಂಡಂದಿರಿಗೆ ಕುಡಿತದ ಅಭ್ಯಾಸವಿದೆ. ೨೮ ಮಹಿಳೆಯರ ಅಣ್ಣ, ತಮ್ಮಂದಿರು ಅಮಲು ಸೇವನೆ ಮಾಡುತ್ತಿದ್ದಾರೆ. ೧೧ ಮಹಿಳೆಯರ ಅತ್ತೆಯಂದಿರು, ೨೯ ಮಹಿಳೆಯರ ಮಾವಂದಿರು, ೧೨ ಮಹಿಳೆಯರ ಮಕ್ಕಳು, ೮ ಜನರ ಮೈದುನ ಹಾಗೂ ಕುಟುಂಬದ ಇತರ ಸದಸ್ಯರು ಅಮಲು ಸೇವನೆ ಮಾಡುತ್ತಿದ್ದಾರೆ. ೨ ಮಹಿಳೆಯರ ಕುಟುಂಬದಲ್ಲಿ ಇತರ ಸದಸ್ಯರಲ್ಲಿ ಅಮಲು ಸೇವನೆ ಇಲ್ಲ.

ಮೇಲಿನ ಮಾಹಿತಿಯಿಂದ ಕುಟುಂಬದಲ್ಲಿ ಮದ್ಯ ಸೇವನೆ ಮಾಡುವುದು ಮಹಿಳೆಯರು ಮದ್ಯ ವ್ಯಸನಕ್ಕೆ ಒಳಗಾಗಲು ಒಂದು ಪ್ರಭಲವಾದ ಕಾರಣವಾಗಿದೆ. ಮನೆಯಲ್ಲೇ ಮದ್ಯದ ಲಭ್ಯತೆ ಅಮಲು ಸೇವನೆ ಹೆಚ್ಚು ಮಾಡಲು ಕಾರಣವಾಗಿದೆ.

೪೧. ಕುಟುಂಬದಲ್ಲಿ ಮದ್ಯವ್ಯಸನವಿರುವ ಇತರ ಸದಸ್ಯರು

೩೨ ಮಂದಿ ಮದ್ಯವ್ಯಸನಿ ಮಹಿಳೆಯರ ಮನೆಯಲ್ಲಿ ತಂದೆಯವರಿಗೆ ಮದ್ಯವ್ಯಸನವಿದೆ. ೧೧ ಮಂದಿ ಮಹಿಳೆಯರ ತಾಯಂದಿರಿಗೆ ಮದ್ಯವ್ಯಸನವಿದೆ. ೨೩ ಮಂದಿ ಮಹಿಳೆಯರ ಗಂಡಂದಿರಿಗೆ ಮದ್ಯವ್ಯಸನವಿದೆ. ೨೨ ಮಹಿಳೆಯರ ಅಣ್ಣ, ತಮ್ಮಂದರಿಗೆ ಮದ್ಯವ್ಯಸನವಿದೆ. ೮ ಮಹಿಳೆಯರ ಅತ್ತೆಯಂದಿರು, ೧೨ ಮಹಿಳೆಯರ ಮಾವಂದಿರು, ೧೨ ಮಹಿಳೆಯರ ಮಕ್ಕಳು, ೮ ಜನರ ಮೈದುನ ಹಾಗೂ ಕುಟುಂಬದ ಇತರ ಸದಸ್ಯರು ಅಮಲು ಸೇವನೆ ಮಾಡುತ್ತಿದ್ದಾರೆ. ೨ ಮಹಿಳೆಯರ ಕುಟುಂಬದಲ್ಲಿ ಇತರ ಸದಸ್ಯರಲ್ಲಿ ಅಮಲು ಸೇವನೆ ಇಲ್ಲ.

ಮದ್ಯವ್ಯಸನಕ್ಕೆ ಕುಟುಂಬದಲ್ಲಿರುವ ವ್ಯಸನದ ಹಿನ್ನೆಲೆಯು ಅತೀ ಪ್ರಮುಖವಾದ ಅಂಶವಾಗಿ ಕಾಣಿಸುತ್ತಿದೆ. ತಂದೆ ಅಥವಾ ತಾಯಿ ಅಮಲು ವ್ಯಸನಿಯಾಗಿದ್ದರೆ, ಇಂತಹ ಕುಟುಂಬದ ಮಕ್ಕಳು ಮದ್ಯ ಸೇವನೆಯನ್ನು ಕಲಿತರೆ ಅವರಿಗೆ ಅಮಲು ವ್ಯಸನವಾಗುವ ಸಾಧ್ಯತೆಗಳು ಹೆಚ್ಚಾಗಿರುವುದು ಮೇಲಿನ ಮಾಹಿತಿಯಿಂದ ತಿಳಿದು ಬರುತ್ತದೆ.

೪೨. ಕುಟುಂಬದಲ್ಲಿ ಮಹಿಳೆಯರು ಕುಡಿಯುವುದು ಸಮ್ಮತವೇ?

ಶೇಕಡಾ ೬೦ ಮಹಿಳೆಯರ ಕುಟುಂಬಗಳಲ್ಲಿ ಮಹಿಳೆಯರ ಕುಡಿತಕ್ಕೆ ಸಮ್ಮತಿ ಇರುವುದಿಲ್ಲ. ಶೇಕಡಾ ೪೦ ಕುಟುಂಬಗಳಲ್ಲಿ ಮಹಿಳೆಯರು ಕುಡಿಯುವುದಕ್ಕೆ ಸಮ್ಮತಿ ಇರುವುದು ತಿಳಿಯುತ್ತದೆ.

ಕುಟುಂಬದಲ್ಲಿ ಮಹಿಳೆಯು ಮದ್ಯ ಸೇವನೆ ಮಾಡಲು ಪುರುಷ ಪ್ರದಾನ ಸಮಾಜದಲ್ಲಿ ಅಸಮ್ಮತಿಯಿದ್ದರೂ, ಮನೆಯಲ್ಲಿಯೇ ಮದ್ಯದ ಲಭ್ಯತೆ, ಬಾಣಂತನದಲ್ಲಿ ಔಷಧದ ರೂಪದಲ್ಲಿ ಕುಟುಂಬದವರೇ ಮದ್ಯದ ರುಚಿ ಕೊಟ್ಟಿರುವುದು, ಪಾಶ್ಚ್ಯಾತ್ಯ ಸಂಸ್ಕೃತಿಯ ಅನುಕರಣೆ, ಹಾಗೂ ಮಹಿಳೆಯ ದೈಹಿಕ ರಚನೆ ಸಹ ಮಹಿಳೆ ಬೇಗನೇ ಮದ್ಯದ ದಾಸಳಾಗಲು ಕಾರಣವಾಗುತ್ತದೆ.

೪೩. ಪ್ರಥಮ ಕುಡಿತದ ರುಚಿ ಕೊಟ್ಟವರು.

ಮದ್ಯ ವ್ಯಸನಕ್ಕೆ ಒಳಗಾದ ಮಹಿಳೆಯರಿಗೆ ಪ್ರಥಮ ಕುಡಿತದ ರುಚಿ ಕೊಟ್ಟವರು ಶೇಕಡಾ ೮ ಮಹಿಳೆಯರಿಗೆ ತಂದೆ, ಶೇಕಡಾ ೧೪ ಮಹಿಳೆಯರಿಗೆ ತಾಯಿ, ಶೇಕಡಾ ೪ ಸ್ವಂತ, ಶೇಕಡಾ ೫೪ ಮಹಿಳೆಯರಿಗೆ ಪ್ರಥಮ ಕುಡಿತದ ರುಚಿ ಗಂಡನಿಂದ, ಶೇಕಡಾ ೧೪ ಮಹಿಳೆಯರಿಗೆ ಸ್ನೇಹಿತರು ಹಾಗೂ ೬ ಜನರಿಗೆ ಅಜ್ಜಿ, ನೆರೆಹೊರೆ, ಅಣ್ಣನಿಂದ ಪ್ರಥಮ ಕುಡಿತದ ರುಚಿ ಕೊಟ್ಟವರು.

ಮೇಲಿನ ಮಾಹಿತಿಯಿಂದ ತಿಳಿಯುವುದು ಏನೆಂದರೆ ಹೆಚ್ಚಿನ ಮಹಿಳೆಯರು ವಿವಾಹದ ನಂತರವೇ ಮದ್ಯದ ರುಚಿ ನೋಡಿದ್ದಾರೆ ಮತ್ತು ಹೆಚ್ಚಿನ ಮಹಿಳೆಯರಿಗೆ ಪ್ರಥಮ ಕುಡಿತದ ರುಚಿ ಕೊಟ್ಟವರು ಆ ಮಹಿಳೆಯ ಗಂಡ. ತನಗೆ ಕಂಪೆನಿ ಕೊಡಲು ಮತ್ತು ಲೈಂಗಿಕ ಕಾರಣಗಳಿಗಾಗಿ ಮೂಢ ನಂಭಿಕೆಯಿಂದಾಗಿ ಮದ್ಯದ ರುಚಿ ಕೊಟ್ಟಿರುವುದು ಕಾಣಬಹುದು. ಆದರೆ ಹೀಗೆ ಮದ್ಯದ ರುಚಿ ನೋಡಿದ ಮಹಿಳೆ ವ್ಯಸನಕ್ಕೆ ಒಳಗಾದಾಗ ಅದೇ ಪುರುಷ ದೈಹಿಕ ಹಾಗೂ ಮಾನಸಿಕ ಕಿರುಕುಳವನ್ನೂ ನೀಡುತ್ತಿದ್ದಾನೆ. ವ್ಯಸನದ ಬಗ್ಗೆ ಅರಿವಿಲ್ಲದಿರುವುದು ಇಂತಹ ಅಧ್ವಾನಗಳಿಗೆ ಕಾರಣವಾಗಿದೆ.

೪೪. ಪ್ರಥಮ ಕುಡಿದಾಗಿನ ಪ್ರಾಯ:

ಮೇಲಿನ ಕೋಷ್ಟಕದಿಂದ ತಿಳಿಯುವುದೇನೆಂದರೆ ವ್ಯಸನಕ್ಕೆ ಒಳಗಾದ ಮಹಿಳೆಯರಲ್ಲಿ ಶೇ. ೭೪ ರಷ್ಟು ಮಹಿಳೆಯರು ತಮ್ಮ ೧೫ನೇ ವಯಸ್ಸಿಗಿಂತಲೂ ಮೊದಲೇ ಮದ್ಯದ ರುಚಿ ನೋಡಿದ್ದಾರೆ. ಶೇ.೧೦ ರಷ್ಟು ಮಹಿಳೆಯರು ತಮ್ಮ ೧೬ ನೇ ವಯಸ್ಸಿನಿಂದ ೩೫ನೇ ವಯಸ್ಸಿನಲ್ಲಿ ಮದ್ಯದ ರುಚಿ ನೋಡಿದ್ದಾರೆ. ಶೇ. ೪ ರಷ್ಟು ಮಹಿಳೆಯರು ತಮ್ಮ ೩೬ ನೇ ವಯಸ್ಸಿನಿಂದ ೪೫ ವಯಸ್ಸಿನಲ್ಲಿ ಮದ್ಯದ ರುಚಿ ನೋಡಿದ್ದಾರೆ. ಹಾಗೂ ಶೇ.೧ ಮಹಿಳೆಯರು ೪೬ ವಯಸ್ಸಿನ ನಂತರ ಮದ್ಯದ ರುಚಿ ನೋಡಿದ್ದಾರೆ.

ಮೇಲಿನ ಮಾಹಿತಿಯಿಂದ ತಿಳಿದು ಬರುವುದು ಏನೆಂದರೆ ಚಿಕ್ಕ ಪ್ರಾಯದಲ್ಲಿ ಮದ್ಯದ ರುಚಿ ನೋಡಿದವರು ಹೆಚ್ಚಿನ ಸಂಖ್ಯೆಯಲ್ಲಿ ವ್ಯಸನಿಗಳಾಗುವ ಸಂಭವವಿದೆ.

೪೫. ಪ್ರಥಮ ಕುಡಿತದ ಸಂದರ್ಭ

ಶೇಕಡಾ ೪೧ ರಷ್ಟು ಮಹಿಳೆಯರು ಮೊದಲನೇ ಕುಡಿತದ ರುಚಿ ನೋಡಿದ್ದು ಬಾಣಂತನದಲ್ಲಿ. ಶೇಕಡಾ ೪೦ ಮಹಿಳೆಯರು ಕುಟುಂಬದಲ್ಲಿ, ಶೇಕಡಾ ೧೦ ಸ್ನೇಹಿತೆಯರೊಂದಿಗೆ ಹಾಗೂ ಶೇಕಡಾ ೮ ಸಂತೋಷ ಕೂಟಗಳಲ್ಲಿ ಮದ್ಯದ ರುಚಿ ನೋಡಿದ್ದಾರೆ.

ಮೇಲಿನ ಕೋಷ್ಟಕದಿಂದ ಅತೀ ಹೆಚ್ಚಿನ ಮಹಿಳೆಯರಿಗೆ ಬಾಣಂತನದಲ್ಲಿ ಮದ್ಯದ ರುಚಿ ದೊರಕಿರುವುದು ತಿಳಿಯುತ್ತದೆ. ಬಾಣಂತಿಗೆ ಮದ್ಯವನ್ನು ಔಷಧಿ ರೂಪದಲ್ಲಿ ನೀಡುವುದು ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಹೀಗೆ ಮದ್ಯದ ರುಚಿ ಸಿಕ್ಕಿದ ಮಹಿಳೆಯರು ಅತೀ ಚಿಕ್ಕ ವಯಸ್ಸಿಗೇ ಮದ್ಯ ಸೇವನೆ ಪ್ರಾರಂಭಿಸಿ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲಾಗದೆ ಇರುವುದು ಕಂಡುಬರುತ್ತದೆ.

ಕುಟುಂಬದಲ್ಲಿ ಅಮಲು ಸೇವನೆಗೆ ಆಸ್ಪದವಿರುವುದರಿಂದ ಶೇಕಡಾ ೪೦ರಷ್ಟು ಮಹಿಳೆಯರಿಗೆ ಪ್ರಥಮ ಕುಡಿತ ಕುಟುಂಬದ ಸದಸ್ಯರೊಡನೆ ಆಗಿದೆ. ಸ್ನೇಹಿತೆಯರೊಂದಿಗೆ ಹಾಗೂ ಸಂತೋಷ ಕೂಟಗಳಲ್ಲಿ ಮಹಿಳೆಯರಿಗೆ ಮೊದಲ ಕುಡಿತದ ಅನುಭವವಾಗಿದ್ದು ಕಡಿಮೆ.

V. ಮದ್ಯವ್ಯಸನದ ಬಗ್ಗೆ ಅಮಲು ವ್ಯಸನಿ ಮಹಿಳೆಯರಿಗೆ ಇರುವ ಜಾಗ್ರತಿಯನ್ನು ತಿಳಿಯುವುದು.

ರ೬. ನಿಯಂತ್ರಣ ತಪ್ಪಿದ ಮದ್ಯಸೇವನೆ ಒಂದು ವ್ಯಸನ

ಶೇ.೯೬ ಮದ್ಯ ವ್ಯಸನಿ ಮಹಿಳೆಯರಿಗೆ ನಿಯಂತ್ರಣ ತಪ್ಪಿದ ಮದ್ಯಸೇವನೆ ಒಂದು ವ್ಯಸನ ಎಂಬ ಅರಿವು ಇಲ್ಲ. ತಾವು ಕೊಡುತ್ತಿರುವ ಕಾರಣಗಳೇ ತಾವು ಈ ಹಂತಕ್ಕೆ ತಲುಪಲು ಕಾರಣವೆಂದು ಅವರು ತಿಳಿದಿರುವುದು ಇದರಿಂದ ಅರಿವಿಗೆ ಬರುತ್ತದೆ. ಕೇವಲ ಶೇ.೪ ಮಹಿಳೆಯರು ನಿಯಂತ್ರಣ ತಪ್ಪಿದ ಮದ್ಯಸೇವನೆ ಒಂದು ವ್ಯಸನ ಎಂಬುವುದನ್ನು ತಿಳಿದುಕೊಂಡಿದ್ದಾರೆ.

ಸಮಾಜದಲ್ಲಿ ನಿಯಂತ್ರಣದಲ್ಲಿ ಕುಡಿಯುವವರನ್ನು ನಾವು ಕಾಣಬಹುದು, ಇವರು ಕಾರ್ಯಕ್ರಮಗಳಲ್ಲಿ ಮದ್ಯವು ಲಭ್ಯವಿದ್ದರೆ ತೆಗೆದುಕೊಳ್ಳುತ್ತಾರೆ, ಅವರಿಗೆ ಮದ್ಯ ಸೇವನೆ ಬೇಕೇ ಎಂಬ ಒತ್ತಡವಿಲ್ಲ. ಅವರ ಮನೆಯವರು ಸಹ ಕುಡಿತವನ್ನು ತೆಗೆದುಕೊಳ್ಳುವ ವ್ಯಕ್ತಿಯ ಬಗ್ಗೆ ಭಯದಿಂದ ಇರುವುದಿಲ್ಲ.

ನಿಯಂತ್ರಣದಲ್ಲಿ ಕುಡಿಯಲು ಸಾಧ್ಯವಿಲ್ಲದವರನ್ನು ಕಾಣಬಹುದು. ಅವರು ಕುಡಿತದಿಂದಾಗಿ ಕೆಲಸವನ್ನು ಕಳೆದುಕೊಳ್ಳಬಹುದು, ಅವರು ಹಣಕಾಸಿನ ಸಂಕಷ್ಟಕ್ಕೆ ಒಳಗಾಗುತ್ತಾರೆ, ಕೆಲವರು ಮುಂಜಾನೆಯೇ ಕುಡಿಯಲು ಪ್ರಾರಂಭಿಸುತ್ತಾರೆ, ದೈಹಿಕ, ಮಾನಸಿಕ ಸಮಸ್ಯೆಗಳಿಗೆ ಒಳಗಾಗುತ್ತಾರೆ ಆದರೂ ಅವರಿಗೆ ಕುಡಿತದಿಂದ ದೂರವಿರಲು ಸಾಧ್ಯವಾಗುವುದಿಲ್ಲ.

ನಿಯಂತ್ರಣದಲ್ಲಿ ಕುಡಿಯುವವರನ್ನು ಸಮಾಜವು ನೋಡುವ ರೀತಿಯೇ ಬೇರೆ. ವ್ಯಸನಕ್ಕೆ ಒಳಗಾದವರನ್ನು ನೋಡುವ ರೀತಿಯೇ ಬೇರೆಯಾಗಿದೆ. ಇದಕ್ಕೆ ಮುಖ್ಯ ಕಾರಣ ನಿಯಂತ್ರಣ ತಪ್ಪಿದ ಮದ್ಯಸೇವನೆ ಒಂದು ವ್ಯಸನ ಎಂಬ ಅರಿವು ಇಲ್ಲದಿರುವುದೇ ಆಗಿದೆ.

೪೭. ಮದ್ಯ ಸೇವಿಸುವ ಯಾರೂ ಸಹ ಮದ್ಯವ್ಯಸನಿಯಾಗಲು ಸಾಧ್ಯ.

ಶೇ. ಏ೪ ಮದ್ಯ ವ್ಯಸನಿ ಮಹಿಳೆಯರಿಗೆ ಮದ್ಯ ಸೇವಿಸುವ ಯಾರೂ ಸಹ ಮದ್ಯವ್ಯಸನಿಯಾಗಲು ಸಾಧ್ಯ ಎಂಬ ಅರಿವು ಇಲ್ಲ. ಶೇ.೧೨ ಮಹಿಳೆಯರಿಗೆ ಮದ್ಯ ಸೇವಿಸುವ ಯಾರೂ ಸಹ ಮದ್ಯವ್ಯಸನಿಯಾಗಲು ಸಾಧ್ಯ ಎಂಬ ಅರಿವಿದೆ ಹಾಗೂ ಶೇ.೪ ಮಹಿಳೆಯರು ಮದ್ಯ ಸೇವಿಸುವ ಯಾರೂ ಸಹ ಮದ್ಯವ್ಯಸನಿಯಾಗಲು ಸಾಧ್ಯವಿಲ್ಲವೆಂದು ಹೇಳುತ್ತಾರೆ.

ಮದ್ಯವ್ಯಸನವು ಜಾತಿ, ಧರ್ಮ, ಸಾಮಾಜಿಕ ಸ್ಥಾನಮಾನ, ವಿದ್ಯಾವಂತ, ಅವಿದ್ಯಾವಂತ, ಬಡವ, ಶ್ರೀಮಂತನೆಂಬ ಬೇಧವಿಲ್ಲದೆ ಯಾರಿಗೂ ಆಗುವ ಸಾಧ್ಯತೆಯಿದೆ. ಆದರೆ ಸಮಾಜದಲ್ಲಿ ಇದರ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲ.

೪೮. ಮದ್ಯ ವ್ಯಸನಕ್ಕೆ ಚಿಕಿತ್ಸೆ ಇದೆ.

ಮದ್ಯ ವ್ಯಸನಕ್ಕೆ ಒಳಪಟ್ಟ ಶೇ.೭೮ ಮಹಿಳೆಯರಿಗೆ ಮದ್ಯ ವ್ಯಸನಕ್ಕೆ ಚಿಕಿತ್ಸೆ ಇದೆ ಎಂಬ ಅರಿವು ಇಲ್ಲ. ಶೇ.೨೨ ಮಹಿಳೆಯರಿಗೆ ಮದ್ಯ ವ್ಯಸನಕ್ಕೆ ಚಿಕಿತ್ಸೆ ಇದೆ ಎಂಬ ಅರಿವು ಇದೆ.

ವ್ಯಸನವನ್ನು ಗುಣಪಡಿಸಲು ಸಾಧ್ಯವಿಲ್ಲವಾದರೂ ಅದನ್ನು ನಿಯಂತಣದಲ್ಲಿ ಇಡುವುದು ಸಾಧ್ಯವಿದೆ. ವ್ಯಕ್ತಿಯು ಒಮ್ಮೆ ವ್ಯಸನಕ್ಕೆ ಒಳಗಾದರೆ ಮತ್ತೆ ನಿಯಂತ್ರಣದಲ್ಲಿ ಮದ್ಯ ಸೇವನೆ ಅಸಾಧ್ಯವಾಗಿದೆ. ವ್ಯಸನಕ್ಕೆ ಒಳಗಾದಾಗ ವ್ಯಕ್ತಿಯು ಸರಿಯಾಗಿ ಆಹಾರ ಸೇವನೆ ಮಾಡುವುದಿಲ್ಲ. ನಿದ್ರೆಯ ಸಮಸ್ಯೆ, ನರಗಳು ದುರ್ಬಲವಾಗುತ್ತವೆ, ಆದುದರಿಂದ ಈ ಸಮಸ್ಯೆಗಳನ್ನು ತನ್ನಶ್ಶಕ್ಕೆ ನಿಭಾಯಿಸಲಾಗದ ವ್ಯಕ್ತಿ ಮತ್ತೆ ಮದ್ಯದ ಮೊರೆ ಹೋಗುವುದು ಸಾಮಾನ್ಯ. ಇಂತಹ ಸಂಧರ್ಭಗಳಲ್ಲಿ ಅವರಿಗೆ ಸರಿಯಾದ ಚಿಕಿತ್ಸೆ ಹಾಗೂ ವ್ಯಸನದ ಬಗ್ಗೆ ಸರಿಯಾದ ತಿಳುವಳಿಕೆ ನೀಡಿ ಪರಿಹಾರ ಸೂಚಿಸಬಹುದಾಗಿದೆ.

೪೯. ಪರಿಸರ ಮತ್ತು ಪರಿಸ್ಥಿತಿಗಳಿಂದಾಗಿ ವ್ಯಕ್ತಿ ಮದ್ಯವ್ಯಸನಿಯಾಗಲು ಸಾಧ್ಯ.

ಶೇ. ೬೬ ರಷ್ಟು ಮಹಿಳೆಯರು ಪರಿಸರ ಮತ್ತು ಪರಿಸ್ಥಿತಿಗಳಿಂದಾಗಿ ವ್ಯಕ್ತಿ ಮದ್ಯವ್ಯಸನಿಯಾಗಲು ಸಾಧ್ಯವಿದೆ ಎಂಬುವುದು ಗೊತ್ತಿಲ್ಲ ಎಂದು ಹೇಳುತ್ತಾರೆ. ಶೇ.೩೨ ಮಹಿಳೆಯರು ಪರಿಸರ ಮತ್ತು ಪರಿಸ್ಥಿತಿಗಳಿಂದಾಗಿ ವ್ಯಕ್ತಿ ಮದ್ಯವ್ಯಸನಿಯಾಗಲು ಸಾಧ್ಯ ಎಂದು ಒಪ್ಪಿಕೊಳ್ಳುತ್ತಾರೆ. ಶೇ.೨ ಮಹಿಳೆಯರು ಪರಿಸರ ಮತ್ತು ಪರಿಸ್ಥಿತಿಗಳಿಂದಾಗಿ ವ್ಯಕ್ತಿ ಮದ್ಯವ್ಯಸನಿಯಾಗಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ.

ಈ ಸಂಶೋಧನೆಯಿಂದ ಪರಿಸರ ಮತ್ತು ಪರಿಸ್ಥಿತಿಗಳಿಂದಾಗಿ ವ್ಯಕ್ತಿ ಮದ್ಯವ್ಯಸನಿಯಾಗಲು ಸಾಧ್ಯವಿರುವುದರ ಜೊತೆಗೆ, ಕುಟುಂಬದಲ್ಲಿ ವ್ಯಸನವಿದ್ದರೆ ಮದ್ಯ ವ್ಯಸನಿಯಾಗುವ ಅವಕಾಶಗಳು ಹೆಚ್ಚು ಎಂಬುವುದು ಸಹ ತಿಳಿದು ಬರುತ್ತದೆ.

೫೦. ಚಿಕಿತ್ಸೆ, ಸಲಹೆ, ಮಾರ್ಗದರ್ಶನದಿಂದ ಅಮಲು ಮುಕ್ತ ಜೀವನ ಸಾಧ್ಯ.

ಶೇ.೭೦ ರಷ್ಟು ಮಹಿಳೆಯರಿಗೆ ಅವರಿಗೆ ಮದ್ಯವ್ಯಸನವಾಗಿದೆ ಎಂಬ ಅರಿವು ಇಲ್ಲ. ಇದರಿಂದಾಗಿ ಅವರು ಚಿಕಿತ್ಸೆ, ಸಲಹೆ, ಮಾರ್ಗದರ್ಶನದಿಂದ ಅಮಲು ಮುಕ್ತ ಜೀವನ ಸಾಧ್ಯವಿದೆಯೆಂಬ ಅರಿವು ಇಲ್ಲ. ಶೇ.೨೨ ಮಹಿಳೆಯರು ಚಿಕಿತ್ಸೆ, ಸಲಹೆ, ಮಾರ್ಗದರ್ಶನದಿಂದ ಅಮಲು ಮುಕ್ತ ಜೀವನ ಸಾಧ್ಯಎಂದು ಹೇಳುತ್ತಾರೆ. ಶೇ.೧೦ ಮಹಿಳೆಯರು ಚಿಕಿತ್ಸೆ, ಸಲಹೆ, ಮಾರ್ಗದರ್ಶನದಿಂದ ಅಮಲು ಮುಕ್ತ ಜೀವನ ಸಾಧ್ಯವಿಲ್ಲವೆಂದು ತಿಳಿದಿದ್ದಾರೆ.

ಹೆಚ್ಚಿನ ಮಹಿಳೆಯರು ತಾವು ಮದ್ಯ ಸೇವನೆ ಮಾಡಲು ಕೇವಲ ಪರಿಸರ, ಪರಿಸ್ಥಿತಿಗಳು ಕಾರಣವೆಂದು ತಿಳಿದಿರುವುದು, ಹಾಗೂ ವ್ಯಸನಕ್ಕೆ ಚಿಕಿತ್ಸೆ ಇರುವ ಮಾಹಿತಿಯ ಕೊರತೆಯಿಂದಾಗಿ ತಮಗೆ ಯಾಕೆ ಚಿಕಿತ್ಸೆಯೆಂದು ಭಾವನೆ ಇರುವುದು ಕಂಡು ಬರುತ್ತದೆ. ಆದರೆ ಕೆಲವು ಮಹಿಳೆಯರಿಗೆ ಚಿಕಿತ್ಸೆ, ಸಲಹೆ, ಮಾರ್ಗದರ್ಶನದಿಂದ ಅಮಲು ಮುಕ್ತ ಜೀವನ ಸಾಧ್ಯ ಎಂಬ ಅರಿವು ಇದೆ.

ಮದ್ಯವ್ಯಸನಕ್ಕೆ ಒಳಗಾದ ಮಹಿಳೆಯರಿಗಾಗಿ ಪ್ರಶ್ನಾವಳಿಯನ್ನು ತಯಾರಿಸಿ ಅವರಿಂದ ಪಡೆದುಕೊಂಡ ಮಾಹಿತಿಯನ್ನು ಈ ಅಧ್ಯಾಯದಲ್ಲಿ ವಿಶ್ಲೇಶಿಸಲಾಗಿದೆ. ಈ ಮಹಿಳೆಯರು ಮದ್ಯವ್ಯಸನಕ್ಕೆ ಒಳಗಾಗಿದುದರಿಂದ ಅವರ ಮನೆಯವರು, ಸಮಾಜ ಸೇವಕರು, ಇತರ ಸಂಸ್ಥೆಗಳವರು ಇವರನ್ನು ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತಾರೆ. ಹೀಗೆ ಪಡೆದುಕೊಂಡ ಮಾಹಿತಿಯಿಂದ ಮಹಿಳೆಯರ ಕುಡಿತಕ್ಕೆ ಇರುವ ಕಾರಣಗಳನ್ನು, ಹಾಗೂ ಪರಿಸ್ಥಿತಿಗಳನ್ನು ತಿಳಿಯಲಾಯಿತು. ಇದರ ಜೊತೆಗೆ ಮಹಿಳೆಯರ ಕುಡಿತಕ್ಕೆ ಅವರು ಕೊಡುವ ಕಾರಣಗಳು ಹಾಗೂ ಪರಿಸ್ಥಿತಿಯ ಹೊರತಾಗಿ ಕುಟುಂಬದಲ್ಲಿ ಮದ್ಯವ್ಯಸನದ ಹಿನ್ನೆಲೆ ಸಹ ಮದ್ಯವ್ಯಸನಕ್ಕೆ ಕಾರಣವೆಂದು ತಿಳಿದು ಬರುವುದು.

ಮಹಿಳೆಯರಲ್ಲಿ ಮದ್ಯವ್ಯಸನ - ಕಾರಣಗಳು ಮತ್ತು ಪರಿಸ್ಥಿತಿಗಳು

I. ಮಹಿಳಾ ಮದ್ಯವ್ಯಸನಿಗಳ ಸಾಮಾಜಿಕ, ಬೌಗೋಳಿಕ ಹಿನ್ನೆಲೆಯ ವಿವರ:

ಕೋಷ್ಟಕ ೧

೧. ಪ್ರಾಯ:

	ಪ್ರತಿಸ್ಪಂದಿಗಳು	ಶೇಕಡಾವಾರು
೧. ೨೫ಕ್ಕಿಂತ ಕಡಿಮೆ	೬	೧೨
೨. ೨೬-೩೫	೧೨	೨೪
೩. ೩೬-೪೫	೨೦	೪೦
೪. ೪೬-೫೫	೮	೧೬
೫. ೫೬ ಮೇಲ್ಪಟ್ಟು	೪	೮
ಒಟ್ಟು	೫೦	೧೦೦

ಕೋಷ್ಟಕ ೨

೨. ವಿದ್ಯಾಭ್ಯಾಸ:

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಅನಕ್ಷರಸ್ಥರು	೧೬	೩೨
೨.ಪ್ರಾಥಮಿಕ	೧೦	೨೦
೩.ಪ್ರೌಢ ಶಿಕ್ಷಣ	೧೫	೩೦
೪. ಪದವಿಪೂರ್ವ	೩	೬
೫. ಪದವಿ	೫	೧೦
೬. ವೃತ್ತಿಪರ	೧	೨
ಒಟ್ಟು	೫೦	೧೦೦

ಕೋಷ್ಟಕ ೩

೩. ವೈವಾಹಿಕ ಸ್ಥಿತಿ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ವಿವಾಹಿತೆ	೩೬	೭೨
೨. ಅವಿವಾಹಿತೆ	೫	೧೦
೩. ವಿಚ್ಛೇದಿತೆ	೧	೨
೪. ವಿಧವೆ	೮	೧೬
ಒಟ್ಟು	೫೦	೧೦೦

ಕೋಷ್ಟಕ ೪

೪. ಉದ್ಯೋಗ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಗೃಹಿಣಿ	೧೨	೨೪
೨.ಕಚೇರಿ	೬	೧೨
೩. ಕೂಲಿ	೧೨	೨೪
೪ ವಿದ್ಯಾರ್ಥಿ	೨	೪
೫. ವ್ಯವಸಾಯ	೬	೧೨
೬. ಸ್ವ ಉದ್ಯಮ	೯	೧೮
೭. ಇತರ (ಮನೆಕೆಲಸ, ಬೀಡಿ	೬	೧೨
ಒಟ್ಟು	೫೦	೧೦೦

ಕೋಷ್ಟಕ ೫

೫. ತಿಂಗಳ ಆದಾಯ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ೨೦೦೦ ದಿಂದ ೪೦೦೦	೧೨	೨೪
೨. ೪೦೦೦ ದಿಂದ ೬೦೦೦	೧೫	೩೦
೩. ೬೦೦೦ ಕ್ಕಿಂತ ಮೇಲ್ಪಟ್ಟು	೮	೧೬
೪. ಆದಾಯವಿಲ್ಲ.	೧೫	೩೦
ಒಟ್ಟು	೫೦	೧೦೦

ಕೋಷ್ಟಕ ೬

೬. ಧರ್ಮ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹಿಂದು.	೩೦	೬೦
೨. ಕ್ರಿಸ್ಚಿಯನ್	೨೦	೪೦
೩. ಮುಸ್ಲಿಮ್	೦	೦
೪. ಇತರ	೦	೦
ಒಟ್ಟು	೫೦	೧೦೦

ಕೋಷ್ಟಕ ೭

೭. ಜಾತಿ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಸಾಮಾನ್ಯ	೧೮	೩೬
೨. ಒ.ಬಿ.ಸಿ	೨೦	೪೦
೩. ಪರಿಶಿಷ್ಟ ಜಾತಿ	೪	೮
೪. ಪರಿಶಿಷ್ಟ ಪಂಗಡ	೮	೧೬
ಒಟ್ಟು	೫೦	೧೦೦

ಕೋಷ್ಟಕ ೮

೮. ವಾಸವಿರುವ ಪ್ರದೇಶ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಗ್ರಾಮೀಣ	೨೩	೪೬
೨. ಪಟ್ಟಣ	೧೬	೩೨
೨. ನಗರ	೧೧	೨೨
ಒಟ್ಟು	೫೦	೧೦೦

ಕೋಷ್ಟಕ ೯

೯. ಖಿನ್ನತೆ, ಬೇಜಾರು ಕಳೆಯಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೮	೯೬
೨. ಇಲ್ಲ	೨	೪
ಒಟ್ಟು	೫೦	೧೦೦

ಕೋಷ್ಟಕ ೧೦

೧೦ ವಿಶ್ರಾಂತಿಗೆ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೨	೮೪
೨. ಇಲ್ಲ	೮	೧೬
ಒಟ್ಟು	೫೦	೧೦೦

ಕೋಷ್ಟಕ ೧೧

೧೧. ಮೈ ಕೈ ನೋವು ನಿವಾರಣೆಗೆ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೧	೮೨
೨. ಇಲ್ಲ	೯	೧೮
ಒಟ್ಟು	೫೦	೧೦೦

ಕೋಷ್ಟಕ ೧೨

೧೨. ಕೈ ನಡುಕ ನಿಲ್ಲಿಸಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೧	೮೨
೨. ಇಲ್ಲ	೯	೧೮
ಒಟ್ಟು	೫೦	೧೦೦

ಕೋಷ್ಟಕ ೧೩

೧೩. ನಿದ್ರೆಗೆ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೫	೯೦
೨. ಇಲ್ಲ	೫	೧೦
ಒಟ್ಟು	೫೦	೧೦೦

ಕೋಷ್ಟಕ ೧೪

೧೪. ಮತ್ತೇರಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೫೦	೧೦೦
೨. ಇಲ್ಲ	೦	೦
ಒಟ್ಟು	೫೦	೧೦೦

ಕೋಷ್ಟಕ ೧೫

೧೫. ಸಂತೋಷಕ್ಕಾಗಿ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೫	೯೦
೨. ಇಲ್ಲ	೫	೧೦
ಒಟ್ಟು	೫೦	೧೦೦

ಕೋಷ್ಟಕ ೧೬

೧೬. ಸಂತೋಷ ಕೂಟಗಳಲ್ಲಿ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೩೭	೭೪
೨. ಇಲ್ಲ	೧೩	೨೬
ಒಟ್ಟು	೫೦	೧೦೦

ಕೋಷ್ಟಕ ೧೭

೧೭. ಸ್ನೇಹಿತರ ಒತ್ತಾಯ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೧೮	೩೬
೨. ಇಲ್ಲ	೨೯	೬೪
ಒಟ್ಟು	೫೦	೧೦೦

ಕೋಷ್ಟಕ ೧೮

೧೮. ಆತ್ಮ ವಿಶ್ವಾಸ ವೃದ್ಧಿಸಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೮	೯೬
೨. ಇಲ್ಲ	೨	೪
ಒಟ್ಟು	೫೦	೧೦೦

ಕೋಷ್ಟಕ ೧೯

೧೯. ಸಮಯ ಕಳೆಯಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೪	೮೮
೨. ಇಲ್ಲ	೬	೧೨
ಒಟ್ಟು	೫೦	೧೦೦

ಕೋಷ್ಟಕ ೨೦

೨೦.ಸಿಟ್ಟು ನಿಭಾಯಿಸಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೩	೮೬
೨. ಇಲ್ಲ	೭	೧೪
ಒಟ್ಟು	೫೦	೧೦೦

ಕೋಷ್ಟಕ ೨೧

೨೧. ಉತ್ತಮವಾಗಿ ಕೆಲಸ ಮಾಡಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೪	೮೮
೨. ಇಲ್ಲ	೬	೧೨
ಒಟ್ಟು	೫೦	೧೦೦

ಕೋಷ್ಟಕ ೨೨

೨೨. ಕೌಟುಂಬಿಕ ಸಮಸ್ಯೆಗಳಿಗಾಗಿ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೮	೯೬
೨. ಇಲ್ಲ	೨	೪
ಒಟ್ಟು	೫೦	೧೦೦

ಕೋಷ್ಟಕ ೨೩

೨೩. ಸಾಲ, ಹಣದ ಸಮಸ್ಯೆ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೩೭	೭೪
೨. ಇಲ್ಲ	೧೩	೨೬
ಒಟ್ಟು	೫೦	೧೦೦

ಕೋಷ್ಟಕ ೨೪

೨೪. ಹೆದರಿಕೆ ಕಡಿಮೆ ಮಾಡಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೧	೯೨
೨. ಇಲ್ಲ	೯	೧೮
ಒಟ್ಟು	೫೦	೧೦೦

ಕೋಷ್ಟಕ ೨೫

೨೫. ದುಃಖ ಕಡಿಮೆ ಮಾಡಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೪	೮೮
೨. ಇಲ್ಲ	೬	೧೨
ಒಟ್ಟು	೫೦	೧೦೦

ಕೋಷ್ಟಕ ೨೬

೨೬. ಕೀಳರಿಮೆ ಹೋಗಲಾಡಿಸಲು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೩	೮೬
೨. ಇಲ್ಲ	೭	೧೪
ಒಟ್ಟು	೫೦	೧೦೦

ಕೋಷ್ಟಕ ೨೭

೨೭. ಹತಾಶೆಯಿಂದ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪೮	೯೬
೨. ಇಲ್ಲ	೨	೪
ಒಟ್ಟು	೫೦	೧೦೦

ಕೋಷ್ಟಕ ೨೮

೨೮. ಜಾತಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕುಡಿತ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೧೮	೩೬
೨. ಇಲ್ಲ	೩೨	೬೪
ಒಟ್ಟು	೫೦	೧೦೦

ಕೋಷ್ಟಕ ೨೯

೨೯. ಕುಡಿತಕ್ಕೆ ಪ್ರೋತ್ಸಾಹಿಸುವ ಸಂದರ್ಭಗಳು – ಹಬ್ಬ, ಜಾತ್ರೆ ಇತ್ಯಾದಿ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೨೭	೫೪
೨. ಇಲ್ಲ	೨೩	೪೬
ಒಟ್ಟು	೫೦	೧೦೦

ಕೋಷ್ಟಕ ೨೦

೨೦. ಪರಿಸರದಲ್ಲಿ ಕುಡಿತ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೨೯	೫೮
೨. ಇಲ್ಲ	೨೧	೪೨
ಒಟ್ಟು	೫೦	೧೦೦

ಕೋಷ್ಟಕ ೨೧

೨೧. ಸುಲಭದಲ್ಲಿ ಮದ್ಯದ ಪೂರೈಕೆ, ಲಭ್ಯತೆ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೨೯	೫೮
೨. ಇಲ್ಲ	೨೧	೪೨
ಒಟ್ಟು	೫೦	೧೦೦

ಕೋಷ್ಟಕ ೨೨

೨೨. ಧಾರ್ಮಿಕ ಕಾರಣಗಳಿಗಾಗಿ ಕುಡಿತ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೬	೧೨
೨. ಇಲ್ಲ	೪೪	೮೮
ಒಟ್ಟು	೫೦	೧೦೦

ಕೋಷ್ಟಕ ೩೩

೩೩. ವ್ಯಸನದ ಬಗ್ಗೆ ತಿಳುವಳಿಕೆ ಇಲ್ಲ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೪	೮
೨. ಇಲ್ಲ	೪೬	೯೨
ಒಟ್ಟು	೫೦	೧೦೦

ಕೋಷ್ಟಕ ೩೪

೩೪. ಕುಡಿತದ ಬಗ್ಗೆ ಇರುವ ಮೂಢನಂಬಿಕೆಗಳು.

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೩೯	೭೮
೨. ಇಲ್ಲ	೧೧	೨೨
ಒಟ್ಟು	೫೦	೧೦೦

ಕೋಷ್ಟಕ ೩೫

೩೫. ದೈಹಿಕ ಹಿಂಸೆ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೩೧	೬೨
೨. ಇಲ್ಲ	೧೯	೩೮
ಒಟ್ಟು	೫೦	೧೦೦

ಕೋಷ್ಟಕ ೩೬

೩೬. ಮಾನಸಿಕ ಕಿರುಕುಳ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೨೮	೫೬
೨. ಇಲ್ಲ	೨೨	೪೪
ಒಟ್ಟು	೫೦	೧೦೦

ಕೋಷ್ಟಕ ೩೭

೩೭. ಆರೋಗ್ಯದ ಬಗ್ಗೆ ನಿರ್ಲಕ್ಷ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೩೯	೭೮
೨. ಇಲ್‌ಲ	೧೧	೨೨
ಒಟ್ಟು	೫೦	೧೦೦

ಕೋಷ್ಟಕ ೩೮

ಮಹಿಳಾ ಮದ್ಯವ್ಯಸನಿಗಳ ಕೌಟುಂಬಿಕ ಹಿನ್ನೆಲೆ

೩೮. ಕುಟುಂಬ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ನ್ಯೂಕ್ಲಿಯರ್	೩೧	೬೨
೨.ಕೂಡು ಕುಟುಂಬ	೧೭	೩೪
೩. ಒಬ್ಬಂಟಿಯಾಗಿರುವುದು	೧	೨
೪. ಇತರ (ಸಂಸ್ಥೆ)	೧	೨
ಒಟ್ಟು	೫೦	೧೦೦

ಕೋಷ್ಟಕ ೩೯

೩೯. ಕುಟುಂಬದಲ್ಲಿ ಒಟ್ಟು ಸದಸ್ಯರು

	ಪ್ರತಿಸ್ಪಂದಿಗಳು	ಶೇಕಡಾವಾರು
೧. ೧	೨	४
೨. ೨	೩	೬
೩. ೩	೭	೧४
४.४	೧೬	೩೨
೫. ೫ ಮತ್ತು ಹೆಚ್ಚು	೨೨	४४
ಒಟ್ಟು	೫೦	೧೦೦

ಕೋಷ್ಟಕ ४೦

४೦. ಕುಟುಂಬದಲ್ಲಿ ಕುಡಿತದ ಅಭ್ಯಾಸವಿರುವ ಇತರ ಸದಸ್ಯರು

	ಪ್ರತಿಸ್ಪಂದಿಗಳು
೧. ತಂದೆ	४೦
೨. ತಾಯಿ	೧೧
೩. ಗಂಡ	೩೮
४. ಅಣ್ಣ, ತಮ್ಮ	೨೮
೫. ಅತ್ತೆ	೧೧
೬. ಮಾವ	೨೯
೭. ಮಗ	೧೨
೮. ಇತರ	೮
೯. ಇಲ್ಲ	೨

ಕೋಷ್ಟಕ ೪೧

೪೧. ಕುಟುಂಬದಲ್ಲಿ ಮದ್ಯವ್ಯಸನವಿರುವ ಇತರ ಸದಸ್ಯರು

	ಪ್ರತಿಸ್ಪಂದಿಗಳು
೧. ತಂದೆ	೩೨
೨.ತಾಯಿ	೬
೩.ಗಂಡ	೨೩
೪. ಅತ್ತೆ	೮
೫. ಮಾವ	೧೨
೬. ಅಣ್ಣ	೨೨
೭. ಇತರ	೭
೮. ಇಲ್ಲ	೧

ಕೋಷ್ಟಕ ೪೨

೪೨. ಕುಟುಂಬದಲ್ಲಿ ಮಹಿಳೆಯರು ಕುಡಿಯುವುದು ಸಮ್ಮತವೇ?

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೨೦	೪೦
೨. ಇಲ್ಲ	೩೦	೬೦
ಒಟ್ಟು	೫೦	೧೦೦

ಕೋಷ್ಟಕ ೪೩

೪೩. ಪ್ರಥಮ ಕುಡಿತದ ರುಚಿ ಕೊಟ್ಟವರು.

	ಪ್ರತಿಸ್ಪಂದಿಗಳು	ಶೇಕಡಾವಾರು
೧. ತಂದೆ	೪	೮
೨. ತಾಯಿ	೭	೧೪
೩. ಸ್ವಂತ	೨	೪
೪. ಗಂಡ	೨೭	೫೪
೫. ಸ್ನೇಹಿತರು	೭	೧೪
೬. ಇತರ (ಅಜ್ಜಿ, ನೆರೆಹೊರೆ, ಅಣ್ಣ)	೩	೬
ಒಟ್ಟು	೫೦	೧೦೦

ಕೋಷ್ಟಕ ೪೪

೪೪. ಪ್ರಥಮ ಕುಡಿದಾಗಿನ ಪ್ರಾಯ:

	ಪ್ರತಿಸ್ಪಂದಿಗಳು	ಶೇಕಡಾವಾರು
೧. ೨೫ಕ್ಕಿಂತ ಕಡಿಮೆ	೩೭	೭೪
೨. ೨೬-೩೫	೧೦	೨೦
೩. ೩೬-೪೫	೨	೪
೪. ೪೬-೫೫	೧	೨
ಒಟ್ಟು	೫೦	೧೦೦

ಕೋಷ್ಟಕ ೪೫

೪೫. ಪ್ರಥಮ ಕುಡಿತದ ಸಂದರ್ಭ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಸ್ನೇಹಿತೆಯರೊಂದಿಗೆ	೫	೧೦
೨. ಕುಟುಂಬದಲ್ಲಿ	೨೦	೪೦
೩. ಸಂತೋಷಕೂಟದಲ್ಲಿ	೪	೮
೪. ಬಾಣಂತನದಲ್ಲಿ	೨೧	೪೨
೫. ಇತರ	-	-
ಒಟ್ಟು	೫೦	೧೦೦

ಕೋಷ್ಟಕ ೪೬

ಮದ್ಯವ್ಯಸನದ ಬಗ್ಗೆ ಅಮಲು ವ್ಯಸನಿ ಮಹಿಳೆಯರಿಗೆ ಇರುವ ಜಾಗ್ರತಿಯನ್ನು ತಿಳಿಯುವುದು

೪೬. ನಿಯಂತ್ರಣ ತಪ್ಪಿದ ಮದ್ಯಸೇವನೆ ಒಂದು ವ್ಯಸನ

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೨	೪
೨. ಇಲ್ಲ	೦	೦
೩. ಗೊತ್ತಿಲ್ಲ	೩೮	೯೬
ಒಟ್ಟು	೫೦	೧೦೦

ಕೋಷ್ಟಕ ೪೭

೪೭. ಮದ್ಯ ಸೇವಿಸುವ ಯಾರೂ ಸಹ ಮದ್ಯವ್ಯಸನಿಯಾಗಲು ಸಾಧ್ಯ.

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೬	೧೨
೨. ಇಲ್ಲ	೨	೪
೩. ಗೊತ್ತಿಲ್ಲ	೪೨	೮೪
ಒಟ್ಟು	೫೦	೧೦೦

ಕೋಷ್ಟಕ ೪೮

೪೮. ಮದ್ಯ ವ್ಯಸನಕ್ಕೆ ಚಿಕಿತ್ಸೆ ಇದೆ.

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೧೧	೨೨
೨. ಇಲ್ಲ	೦	೦
೩. ಗೊತ್ತಿಲ್ಲ	೩೯	೭೮
ಒಟ್ಟು	೫೦	೧೦೦

ಕೋಷ್ಟಕ ೪೯

೪೯. ಪರಿಸರ ಮತ್ತು ಪರಿಸ್ಥಿತಿಗಳಿಂದಾಗಿ ವ್ಯಕ್ತಿ ಮದ್ಯವ್ಯಸನಿಯಾಗಲು ಸಾಧ್ಯ.

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೧೬	೩೨
೨. ಇಲ್ಲ	೧	೨
೩. ಗೊತ್ತಿಲ್ಲ	೩೩	೬೬
ಒಟ್ಟು	೫೦	೧೦೦

ಕೋಷ್ಟಕ ೫೦

೫೦. ಚಿಕಿತ್ಸೆ, ಸಲಹೆ, ಮಾರ್ಗದರ್ಶನದಿಂದ ಅಮಲು ಮುಕ್ತ ಜೀವನ ಸಾದ್ಯ.

	ಪ್ರತಿಸ್ಪಂದಿಗಳು	ಶೇಕಡಾವಾರು
೧. ಹೌದು	೧೧	೨೨
೨. ಇಲ್ಲ	೫	೧೦
೩. ಗೊತ್ತಿಲ್ಲ	೩೪	೬೮
ಒಟ್ಟು	೫೦	೧೦೦

ಅಧ್ಯಾಯ ೪

ಸಾರ

ಶೋಧನೆಗಳು

ಸಲಹೆಗಳು

ಅಧ್ಯಾಯ - ೪

<u>ಸಾರ:</u>

ದುಶ್ಚಟಗಳಲ್ಲಿ ಮದ್ಯ ಸೇವನೆ ಅತೀ ಪ್ರಮುಖವಾದುದು. ನಮ್ಮ ಪರಿಸರದಲ್ಲಿ ನಾವು ನೋಡುತ್ತಿರುವ, ಜನರನ್ನು ಕಾಡುತ್ತಿರುವ ಪ್ರಮುಖವಾದ ಸಮಸ್ಯೆಯೆಂದರೆ ಅಮಲು ವ್ಯಸನ. ಮದ್ಯ ವ್ಯಸನಕ್ಕೆ ಒಳಗಾದ ಬಡ ಹಾಗೂ ಮಧ್ಯಮ ವರ್ಗದ ಜನರು ಬಲಿಯಾದಾಗ ಇಡೀ ಸಮಾಜವೇ ರೋಗಗ್ರಸ್ಥವಾಗುತ್ತದೆ. ಇದು ಸಮಾಜದ ಜನರ ವೈಯಕ್ತಿಕ, ಕೌಟುಂಬಿಕ, ಆರ್ಥಿಕ, ಸಾಮಾಜಿಕ, ಆಧ್ಯಾತ್ಮಿಕ ಏಳಿಗೆಗೆ ಮಾರಕವಾಗಿದೆ. ಮೋಜಿಗೆಂದು ಆರಂಭವಾದ ಈ ಮದ್ಯ ಸೇವನೆ ಮುಂದೆ ಹೆಮ್ಮರವಾಗಿ ಬೆಳೆದು ವ್ಯಕ್ತಿಯನ್ನೂ, ಇಡೀ ಕುಟುಂಬವನ್ನೇ ಸರ್ವನಾಶ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ವ್ಯಸನಕ್ಕೆ ಒಳಗಾದ ವ್ಯಕ್ತಿ ಏನನ್ನೂ ಸಾಧಿಸಲಾರ. ವ್ಯಸನವು ಸಾಮಾಜಿಕ ಸಮಸ್ಯೆಗಳಾದ ಕಳ್ಳತನ, ಅನಕ್ಷರತೆ, ಅನಾರೋಗ್ಯ, ಬಾಲಕಾರ್ಮಿಕ ಸಮಸ್ಯೆ, ವಿವಾಹ ವಿಚ್ಛೇದನ, ಕೊಲೆ, ಸುಲಿಗೆಗಳಿಗೂ ಕಾರಣವಾಗಿದೆ.

ಮಹಿಳೆಯರಲ್ಲಿ ಸಣ್ಣ ಪ್ರಮಾಣದ ಮದ್ಯ ಸೇವನೆಯು ಕೂಡ ಬಹಳಷ್ಟು ಹಾನಿ ಮಾಡುತ್ತದೆ ಮತ್ತು ಅತಿಯಾದ ಕುಡಿತ ಅವರ ದೇಹ ಪ್ರಕೃತಿಗೇ ಮಾರಕವಾಗಿದೆ. ವ್ಯಸನವು ಗಂಡು, ಹೆಣ್ಣು ಎಂಬ ಭೇಧವಿಲ್ಲದೆ, ಪ್ರಾಯದ ಹಂಗಿಲ್ಲದೆ, ವಿದ್ಯಾಭ್ಯಾಸ, ಸಮಾಜದ ಸ್ಥಾನಮಾನ ಇದು ಯಾವುದೂ ವ್ಯಸನಿಯಾಗದಂತೆ ತಡೆಯುವುದು ಸಾಧ್ಯವಿಲ್ಲ ಎಂಬುದನ್ನು ಬಹಳಷ್ಟು ಅಧ್ಯಯನಗಳು ಹೇಳುತ್ತವೆ. ಇತ್ತೀಚಿನ ವೈಧ್ಯಕೀಯ ಶೋಧನೆಗಳಿಂದ ತಿಳಿದು ಬರುವಂತೆ ಮದ್ಯ ಸೇವಿಸುವ ಹೆಂಗಸರಿಗೆ ಗಂಡಸರಿಗಿಂತಲೂ ಬೇಗ ಅಮಲೇರುತ್ತದೆ. ಏಕೆಂದರೆ ಅವರ ಹೊಟ್ಟೆಗಳು ಮದ್ಯವನ್ನು ತಟಸ್ಥಗೊಳಿಸಲು ಸಮರ್ಥವಾಗಿರುವುದಿಲ್ಲ. ಪರಿಣಾಮವೆಂದರೆ ಸಾಮಾನ್ಯವಾಗಿ ನಡೆಯುವಂತೆ ಯಕೃತ್ತು ಮದ್ಯದ ಸಂಸ್ಕರಣ ಕಾರ್ಯ ಮಾಡುವುದಿಲ್ಲ, ಬದಲು ಮದ್ಯ ಜಠರ ಕವಚಗಳ ಮೂಲಕ ನೇರ ರಕ್ತನಾಳಗಳಿಗೆ, ಅಲ್ಲಿಂದ ಮೆದುಳಿಗೆ ತಲುಪಿ ಹೆಂಗಸರು ಹೆಚ್ಚು ಬೇಗ ಅಮಲೇರುವಂತೆ ಮಾಡುತ್ತದೆ. ಇದರಿಂದ ಯಕೃತ್ತಿಗೆ ಹಾನಿಯಾಗುತ್ತದೆ. ಗಂಡಸರು ತಾವು ಕುಡಿಯುವ ಮದ್ಯದ ಸ್ವಲ್ಪ ಭಾಗವನ್ನಾದರೂ ಜೀರ್ಣಿಸಿಕೊಳ್ಳುತ್ತಾರಾದರೆ, ಕುಡಿತರೋಗಿ ಹೆಂಗಸರ ಹೊಟ್ಟೆಗಳು ಮದ್ಯ ಜೀರ್ಣಿಸಿಕೊಳ್ಳುವುದನ್ನು ಪೂರ್ತಿಯಾಗಿ ನಿಲ್ಲಿಸುತ್ತವೆ ಎಂಬುದು ಹೆಚ್ಚು ಸ್ಪಷ್ಟವಾಗಿದೆ. ತಮಾಷೆ, ಮೋಜಿಗಾಗಿ, ಆರಂಭವಾದ ಅಮಲು ಸೇವನೆ ಮಹಿಳೆಯನ್ನು ಮದ್ಯದ ಗುಲಾಮನನ್ನಾಗಿಸುತ್ತಿದೆ.

[illegible]

[illegible]

ಮದ್ಯವ್ಯಸನಕ್ಕೆ ಚಿಕಿತ್ಸೆ ಅತೀ ಅಗತ್ಯ. ಹೆಚ್ಚಿನ ಜನರು ಇದನ್ನು ಒಪ್ಪಿಕೊಳ್ಳುವುದಿಲ್ಲ. ವ್ಯಸನಿಗಳು ಬೇಕೆಂದೇ ಬೇಜವಾಬ್ದಾರಿಯಾಗಿ ವರ್ತಿಸುತ್ತಾರೆಂದು ಹೆಚ್ಚಾಗಿ ಹೇಳುವುದನ್ನು ನಾವು ಕಾಣಬಹುದು. "ಸಾಗರ ಮುಳುಗಿಸಿದದಕ್ಕಿಂತ ಹೆಚ್ಚು ಸುರೆ ಮುಳುಗಿಸಿದೆ" ಎಂಬ ಗಾದೆ ಮಾತೊಂದಿದೆ. ಮೇಲ್ನೋಟಕ್ಕೆ ಅಮಲು ಸೇವನೆ ಮತ್ತು ಅಮಲು ವ್ಯವಹಾರ ರಂಜನೆಯಾಗಿ ಕಾಣಿಸುತ್ತದೆ. ಮಾಧ್ಯಮಗಳು ಮದ್ಯವನ್ನು ಸಾಕಷ್ಟು ವೈಭವೀಕರಿಸುತ್ತವೆ. ಮದ್ಯ ವ್ಯಾಪಾರಿಗಳ ಐಷಾರಾಮದ ಬದುಕು, ಬೆಲೆಬಾಳುವ ಬಂಗಲೆಗಳು, ಇಂಪೋರ್ಟೆಡ್ ಕಾರುಗಳು ಎಂಥವರನ್ನೂ ಬೆರಗುಗೊಳಿಸುತ್ತವೆ. ಇಂದು ನಮ್ಮ ಮುಂದೆ ನಡೆಸುತ್ತಿರುವ ಎಲ್ಲಾ ರೀತಿಯ ಅನಿಷ್ಟಗಳ ಹಿಂದೆ ಮದ್ಯದ ಪ್ರಭಾವವನ್ನು ಕಾಣುತ್ತೇವೆ. ಅದು ಬಡತನವಿರಬಹುದು, ಅನಾರೋಗ್ಯವಿರಬಹುದು, ಕೌಟುಂಬಿಕ ಕಲಹವಿರಬಹುದು, ಕೊಲೆ, ಸುಲಿಗೆ, ಅತ್ಯಾಚಾರವಿರಬಹುದು. ಎಲ್ಲದರ ಹಿಂದೆ ಅಮಲಿನ ಪ್ರಭಾವ ಇದ್ದೇ ಇದೆ.

ಶೋಧನೆಗಳು:

ಮಹಿಳೆಯರಲ್ಲಿ ಮದ್ಯವ್ಯಸನಕ್ಕೆ ದೂಡುವಂತಹ ಹಲವಾರು ಕಾರಣಗಳನ್ನು ಮತ್ತು ಅವರು ಬದುಕುವ ಪರಿಸ್ಥಿತಿಗಳ ಮೇಲೆ ಈ ಸಂಶೋಧನೆಯು ಬೆಳಕು ಚೆಲ್ಲಿದೆ.

ಮದ್ಯವ್ಯಸನವು ೩೦ರಿಂದ ೪೫ ವಯಸ್ಸಿನ ಮಹಿಳೆಯರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಮದ್ಯವ್ಯಸನವು ವಿದ್ಯಾಭ್ಯಾಸದ ಹಂಗಿಲ್ಲದೆ ಇದೆಯಾದರೂ ಅನಕ್ಷರಸ್ಥರಲ್ಲಿ ಹಾಗೂ ಕಡಿಮೆ ವಿದ್ಯಾಭ್ಯಾಸ ಇರುವವರಲ್ಲಿ ಹೆಚ್ಚಾಗಿದೆ. ಅವಿವಾಹಿತ ಮಹಿಳೆಯರಿಗಿಂತ ವಿವಾಹಿತ ಮಹಿಳೆಯರಲ್ಲಿ ಮದ್ಯಸೇವನೆ ಹಾಗೂ ಮದ್ಯವ್ಯಸನವು ಹೆಚ್ಚಾಗಿ ಕಂಡುಬರುತ್ತದೆ. ವ್ಯಸನಕ್ಕೆ ಒಳಪಟ್ಟ ಮಹಿಳೆಯರಲ್ಲಿ ಗ್ರಹಿಣಿಯರು ಹೆಚ್ಚಾಗಿದ್ದಾರೆ. ಕ್ರಷಿಕರು, ಸ್ವ ಉದ್ಯಮಿಗಳು, ಕೂಲಿ ಕಾರ್ಮಿಕರು, ಹಾಗೂ ಮನೆಕೆಲಸ ಮಾಡುವ ಮಹಿಳೆಯರೂ ವ್ಯಸನಕ್ಕೆ ಒಳಗಾಗಿದ್ದಾರೆ. ಮದ್ಯವ್ಯಸನವು ಆದಾಯವಿರುವ ಮಹಿಳೆಯರಲ್ಲಿ ಹಾಗೂ ಆದಾಯವಿರದ ಮಹಿಳೆಯರಲ್ಲೂ ಕಂಡುಬರುತ್ತದೆ.

ಮದ್ಯವ್ಯಸನವು ಹಿಂದು ಹಾಗೂ ಕ್ರಿಸ್ಚಿಯನ್ ಧರ್ಮದವರಲ್ಲಿ ಹೆಚ್ಚಾಗಿ ಕಂಡುಬಂದಿದೆ. ವ್ಯಸನಕ್ಕೆ ಒಳಗಾದ ಮಹಿಳೆಯರಲ್ಲಿ ಹೆಚ್ಚು ಒಬಿಸಿ ಪಂಗಡದವರು, ನಂತರ ಸಾಮಾನ್ಯ ವರ್ಗದವರು, ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿಯವರಾಗಿದ್ದಾರೆ. ವ್ಯಸನಕ್ಕೆ ಒಳಗಾದ ಹೆಚ್ಚಿನ ಮಹಿಳೆಯರು ಗ್ರಾಮೀಣ ಪ್ರದೇಶದವರು ಹಾಗೂ ಗ್ರಾಮೀಣ ಪ್ರದೇಶದ ಮಹಿಳೆಯರು ಚಿಕಿತ್ಸೆಗೆ ಬಂದಿರುತ್ತಾರೆ.

ವ್ಯಸನಕ್ಕೆ ಒಳಗಾದ ಮಹಿಳೆಯರು ತಮ್ಮ ಕುಡಿತಕ್ಕೆ ಈ ಕಾರಣಗಳನ್ನು ನೀಡುತ್ತಾರೆ: ಖಿನ್ನತೆ, ಬೇಜಾರು ಕಳೆಯಲು, ವಿಶ್ರಾಂತಿಗೆ, ಮೈ ಕೈ ನೋವು ನಿವಾರಣೆಗೆ, ಕೈ ನಡುಕ ನಿಲ್ಲಿಸಲು, ನಿದ್ರೆಗಾಗಿ, ಮತ್ತೇರಲು, ಸಂತೋಷಕ್ಕಾಗಿ, ಸಂತೋಷ ಕೂಟಗಳಲ್ಲಿ, ಸ್ನೇಹಿತರ ಒತ್ತಾಯ, ಆತ್ಮ ವಿಶ್ವಾಸ ವೃದ್ಧಿಸಲು, ಸಮಯ ಕಳೆಯಲು, ಸಿಟ್ಟು ನಿಭಾಯಿಸಲು, ಉತ್ತಮವಾಗಿ ಕೆಲಸ ಮಾಡಲು, ಕೌಟುಂಬಿಕ ಸಮಸ್ಯೆಗಳಿಗಾಗಿ, ಹಣ, ಸಾಲದ ಸಮಸ್ಯೆಯಿಂದಾಗಿ, ಹೆದರಿಕೆ ಕಡಿಮೆ ಮಾಡಲು, ದುಃಖ ಕಡಿಮೆ ಮಾಡಲು, ಕೀಳರಿಮೆ ಹೋಗಲಾಡಿಸಲು ಹಾಗೂ ಹತಾಶೆಯಿಂದ.

ಜಾತಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹಿಳೆಯರು ಕುಡಿತಕ್ಕೆ ಈಡಾಗಿರುವುದು ಕಡಿಮೆ. ಹಬ್ಬ, ಜಾತ್ರೆಗಳಲ್ಲಿ ಕುಡಿತದ ಲಭ್ಯತೆಯು ಮಹಿಳೆಯರು ಕುಡಿತದ ರುಚಿ ನೋಡಲು ಕಾರಣವಾಗಿವೆ. ಪರಿಸರದಲ್ಲಿ ಮದ್ಯ ಸೇವನೆ ಮಹಿಳೆಯರು ಕುಡಿಯಲು ಹಾಗೂ ವ್ಯಸನಕ್ಕೆ ಒಳಗಾಗಲು ಬಹಳ ಪ್ರಮುಖವಾದ ಕಾರಣಗಳಾಗಿವೆ. ಸುಲಭದಲ್ಲಿ ಮದ್ಯದ ಲಭ್ಯತೆ, ಪೂರೈಕೆ ಮಹಿಳೆ ಮದ್ಯದ ದಾಸಳಾಗುವುದಕ್ಕೆ ಕಾರಣವಾಗಿದೆ. ಹೆಚ್ಚಿನ ಮಹಿಳೆಯರಿಗೆ ಮದ್ಯ ವ್ಯಸನದ ಬಗ್ಗೆ, ಮದ್ಯ ಪಾನದ ದುಷ್ಪರಿಣಾಮಗಳ ಬಗ್ಗೆ ಅರಿವು ಇಲ್ಲ, ಇದರಿಂದಾಗಿ ಚಿಕ್ಕ ಚಿಕ್ಕ ಸಮಸ್ಯೆಗಳಿಗೂ ಮಹಿಳೆಯು ಮದ್ಯದ ಮೊರೆ ಹೋಗಿರುವುದು ಕಂಡುಬರುತ್ತದೆ. ಕುಡಿತದ ಬಗ್ಗೆ ಇರುವ ಮೂಢ ನಂಬಿಕೆಗಳು, ಮಹಿಳೆಯು ಸಹಾಯಕ್ಕೆ ಮೊರೆ ಹೋಗದೆ ಸಮಸ್ಯೆ ನಿವಾರಣೆಗೆ ಕುಡಿತಕ್ಕೇ ಮೊರೆ ಹೋಗಿರುವುದು ತಿಳಿದುಬರುತ್ತದೆ.

ಮಹಿಳೆಯು ಮದ್ಯ ಸೇವನೆ ಮಾಡುವುದರಿಂದಾಗಿ ಹೆಚ್ಚಿನ ದೈಹಿಕ ಹಿಂಸೆಗೆ ಒಳಗಾಗಿದ್ದಾಳೆ. ಮಹಿಳೆಯು ಮದ್ಯ ಸೇವನೆ ಮಾಡುವುದರಿಂದಾಗಿ ಮಾನಸಿಕ ಕಿರುಕುಳವನ್ನು ಮನೆಯವರಿಂದ, ಇತರರಿಂದ ಅನುಭವಿಸಿದ್ದಾಳೆ. ಮದ್ಯ ಸೇವನೆ ಮಾಡುವುದರಿಂದಾಗಿ ಮಹಿಳೆಯು ತನ್ನ ಆರೋಗ್ಯದ ಬಗ್ಗೆ ತೀವ್ರ ತರದ ನಿರ್ಲಕ್ಷ್ಯ ತೋರಿಸಿರುವುದು ಈ ಸಂಶೋಧನೆಯಿಂದ ತಿಳಿದು ಬರುತ್ತದೆ. ನ್ಯೂಕ್ಲಿಯರ್ ಕುಟುಂಬದಲ್ಲಿ ವಾಸಿಸುವ ಮಹಿಳೆಯರು ಹೆಚ್ಚಾಗಿ ಮದ್ಯ ಸೇವನೆ, ಹಾಗೂ ವ್ಯಸನಕ್ಕೆ ಒಳಗಾಗಿದ್ದಾರೆ. ಕುಟುಂಬದ ಇತರ ಸದಸ್ಯರು ಮದ್ಯ ಸೇವನೆ ಮಾಡುವುದು ಮಹಿಳೆಯರು ಮದ್ಯ ಸೇವನೆ ಮಾಡಲು ಹಾಗೂ ವ್ಯಸನಕ್ಕೆ ಬಲಿಯಾಗಲು ಕಾರಣವಾಗಿದೆ. ಕುಟುಂಬದಲ್ಲಿ ಮದ್ಯ ವ್ಯಸನದ ಹಿನ್ನೆಲೆ ಇರುವುದು ಮಹಿಳೆಯು ಬದುಕುವ ಪರಿಸರ ಮತ್ತು ಪರಿಸ್ಥಿತಿಯಷ್ಟೇ ಪ್ರಮುಖವಾದ ಅಂಶವಾಗಿದೆ. ಹೆಚ್ಚಿನ ಕುಟುಂಬಗಳಲ್ಲಿ ಮಹಿಳೆಯರು ಕುಡಿಯುವುದು ಸಮ್ಮತವಲ್ಲ, ಆದರೂ ಒಮ್ಮೆ ಮದ್ಯದ ರುಚಿ ಸಿಕ್ಕಿ, ವ್ಯಸನಕ್ಕೆ ಒಳಗಾದ ಮೇಲೆ ಕುಡಿತವನ್ನು ನಿಲ್ಲಿಸುವುದು ಅಸಾಧ್ಯವಾಗಿದೆ.

ಹೆಚ್ಚಿನ ಮಹಿಳೆಯರಿಗೆ ಪ್ರಥಮ ಕುಡಿತದ ರುಚಿ ತನ್ನ ಕುಟುಂಬದ ಸದಸ್ಯರಿಂದಲೇ ಸಿಕ್ಕಿದೆ. ಹೆಚ್ಚಾಗಿ ಮದುವೆಯಾದ ಮಹಿಳೆಯರಿಗೆ ಗಂಡನೇ ಪ್ರಥಮ ಕುಡಿತದ ರುಚಿ ಕೊಟ್ಟಿರುವುದು ಸಂಶೋಧನೆಯಿಂದ ತಿಳಿದು ಬರುತ್ತದೆ. ಕೆಲವೊಮ್ಮೆ ತಾಯಿ, ತಂದೆ ಹಾಗೂ ಕುಟುಂಬದ ಇತರ ಸದಸ್ಯರು ಮಹಿಳೆಗೆ ಮೊದಲ ಕುಡಿತದ ರುಚಿ ಕೊಟ್ಟಿದ್ದಾರೆ. ವ್ಯಸನಕ್ಕೆ ಒಳಗಾದ ಮಹಿಳೆಯರಲ್ಲಿ ಹೆಚ್ಚಿನ ಮಹಿಳೆಯರು ತಮ್ಮ ೨೫ನೇ ವಯಸ್ಸಿನ ಮೊದಲೇ ಅಮಲಿನ ರುಚಿ ನೋಡಿದ್ದಾರೆ. ಆದ್ದರಿಂದ ಚಿಕ್ಕ ಪ್ರಾಯದಲ್ಲಿ ಅಮಲು ಸೇವನೆ ಪ್ರಾರಂಭಿಸುವುದು ವ್ಯಸನಕ್ಕೆ ಒಳಗಾಗಲು ಪ್ರಮುಖ ಕಾರಣವಾಗಿದೆ. ಹೆಚ್ಚಿನ ಮಹಿಳೆಯರು ಬಾಣಂತನದಲ್ಲಿ ಮೊದಲ ಕುಡಿತದ ರುಚಿ ನೋಡಿರುವುದು, ಬಾಣಂತಿಗೆ ಮದ್ಯ ನೀಡುವುದು ತಪ್ಪು ಎಂಬುವುದನ್ನು ತೋರಿಸಿಕೊಡುತ್ತದೆ.

ಹೆಚ್ಚಿನ ಮಹಿಳೆಯರಿಗೆ ಮದ್ಯ ವ್ಯಸನದ ಬಗ್ಗೆ, ನಿಯಂತ್ರಣ ತಪ್ಪಿದ ಮದ್ಯಸೇವನೆ ಒಂದು ವ್ಯಸನ ಎಂಬ ಅರಿವು ಇಲ್ಲ. ಹೆಚ್ಚಿನ ಮಹಿಳೆಯರಿಗೆ ಮದ್ಯ ಸೇವಿಸುವ ಯಾರೂ ಮದ್ಯ ವ್ಯಸನಿಯಾಗಲು ಸಾಧ್ಯ ಎಂಬ ಅರಿವು ಇಲ್ಲದಿರುವುದು ಅವರಿಗಿರುವ ಅರಿವಿನ ಕೊರತೆಯನ್ನು ತೋರಿಸಿಕೊಡುತ್ತದೆ.

ಸಂಶೋಧನೆಗೆ ಒಳಪಟ್ಟ ಮದ್ಯ ವ್ಯಸನಿ ಮಹಿಳೆಯರಿಗೆ ಮದ್ಯ ವ್ಯಸನಕ್ಕೆ ಚಿಕಿತ್ಸೆ ಸಾಧ್ಯ ಎಂಬ ಅರಿವು ಇಲ್ಲ. ಪರಿಸರ ಮತ್ತು ಪರಿಸ್ಥಿತಿಗಳಿಂದಾಗಿ ಮಹಿಳೆಯು ಮದ್ಯವ್ಯಸನಿಯಾಗಲು ಸಾಧ್ಯ ಹಾಗೂ ಕುಟುಂಬದಲ್ಲಿ ಮದ್ಯವ್ಯಸನದ ಹಿನ್ನೆಲೆ ಜೊತೆಯಾದಾಗ ಮದ್ಯ ವ್ಯಸನವಾಗಲು ಬೇಗನೇ ಸಾಧ್ಯ ಎಂಬುದನ್ನು ಈ ಸಂಶೋಧನೆಯು ತೋರಿಸಿಕೊಡುತ್ತದೆ. ಚಿಕಿತ್ಸೆ, ಸಲಹೆ, ಮಾರ್ಗದರ್ಶನದಿಂದ ಅಮಲು ಮುಕ್ತ ಜೀವನ ಸಾಧ್ಯವಿದೆಯೆಂದು ಹೆಚ್ಚಿನ ಮಹಿಳೆಯರು ಒಪ್ಪುವುದಿಲ್ಲ, ಇದರ ಪ್ರಮುಖ ಕಾರಣ ಅವರು ತಮ್ಮ ಮದ್ಯ ವ್ಯಸನದ ಸಮಸ್ಯೆಯನ್ನು ನಿರಾಕರಣೆ ಮಾಡುವುದಾಗಿದೆ.

<u>ಸಲಹೆಗಳು</u>

ಮೇಲಿನ ಶೋಧನೆಗಳಿಂದ ಮಹಿಳೆಯರಲ್ಲಿ ಮದ್ಯವ್ಯಸನಕ್ಕೆ ದೂಡುವಂತಹ ಹಲವಾರು ಕಾರಣಗಳು, ಅವರು ಬದುಕುವ ಪರಿಸರ ಮತ್ತು ಕುಟುಂಬದ ಹಿನ್ನೆಲೆ ಸಹ ಮಹಿಳೆ ಮದ್ಯವ್ಯಸನಿಯಾಗಲು ಕಾರಣವೆಂದು ತೋರಿಸಿಕೊಟ್ಟಿದೆ.

ಈ ಸಂಶೋಧನೆಯಿಂದ ಕೆಲವು ಸಲಹೆಗಳನ್ನು ನೀಡಬಹುದು.

- ಮಹಿಳೆಯರಿಗೆ ಅವರ ದೇಹ ಪ್ರಕೃತಿಯ ಬಗ್ಗೆ ಸರಿಯಾದ ಅರಿವು, ಇರದೆ ಇರುವುದರಿಂದ ಅವರು ಸುಲಭವಾಗಿ ಮದ್ಯದ ದಾಸರಾಗುತ್ತಾರೆ. ಅವಳ ದೇಹ ಪ್ರಕೃತಿಯ ಬಗ್ಗೆ ಸರಿಯಾದ ಮಾಹಿತಿಯನ್ನು ಸರಿಯಾದ ಸಮಯದಲ್ಲಿ ಮಹಿಳೆಗೆ ಕೊಡುವುದು ಅವಶ್ಯಕವಾಗಿದೆ.

- ಗ್ರಾಮೀಣ ಪ್ರದೇಶದ ಮಹಿಳೆಯರು, ಗೃಹಿಣಿಯರು ಹೆಚ್ಚಾಗಿ ಮದ್ಯವ್ಯಸನಕ್ಕೆ ಒಳಗಾಗಿರುವುದರಿಂದ ಅವರಿಗೆ ಇತರ ಮನೋರಂಜನೆಯ ವ್ಯವಸ್ಥೆನ್ನು ನೀಡಬೇಕು.

- ಮದ್ಯಪಾನದಿಂದಾಗುವ ದೈಹಿಕ, ಮಾನಸಿಕ ಪರಿಣಾಮಗಳ ಬಗ್ಗೆ ಅದರಲ್ಲೂ ಮಹಿಳೆಯ ದೇಹದ ಮೇಲಾಗುವ ಕೆಡುಕುಗಳ ಬಗ್ಗೆ ಮಾಹಿತಿ ನೀಡಬೇಕಾಗಿದೆ.

- ಮಹಿಳೆಯರಿಗೆ ಬಾಣಂತನದಲ್ಲಿ ಮದ್ಯ ನೀಡಬಾರದು, ಈ ಬಗ್ಗೆ ಮಹಿಳೆಯರಿಗೆ ಮಾಹಿತಿಯನ್ನು ನೀಡಬೇಕು.

- ಕುಟುಂಬದಲ್ಲಿ ಪುರುಷರು ಅಮಲು ಸೇವನೆ ಮಾಡುವುದು ಮಹಿಳೆಯರು ಅಮಲನ್ನು ಸೇವಿಸಲು ಕಾರಣವಾಗಿದೆ. ಅದರಿಂದ ಇದು ಮಹಿಳೆಯರಿಗೆ ಅಮಲು ಸೇವನೆಗೆ ಪ್ರೇರಣೆಯಾಗಿದೆ. ಮಹಿಳೆ ತನ್ನತನವನ್ನು ಬಿಟ್ಟುಕೊಡದೆ, ಅಮಲಿನ ಬಲೆಗೆ ಬೀಳದಂತೆ ಅವಳನ್ನು ಸದೃಡಳಾಗಲು ಪ್ರೇರೇಪಿಸಬೇಕಾಗಿದೆ.

- ಸಮಾರಂಭಗಳಲ್ಲಿ ಮದ್ಯ ನೀಡುವುದನ್ನು ಮಹಿಳೆಯರೇ ವಿರೋಧಿಸಬೇಕಾಗಿದೆ ಮತ್ತು ಮದ್ಯವು ಸಮಾರಂಭಗಳಲ್ಲಿ ಇರುವಾಗ ಅದನ್ನು ಮಹಿಳೆತರು ನಿರಾಕರಿಸಬೇಕಾಗಿದೆ.

- ಮದ್ಯವ್ಯಸನದ ಬಗ್ಗೆ, ಮದ್ಯದ ಬಗ್ಗೆ ಸಮಾಜದಲ್ಲಿರುವ ಮೂಢ ನಂಬಿಕೆಗಳ ಬಗ್ಗೆ ಜಾಗುರತಿಯನ್ನು ಮೂಢಿಸಬೇಕು.

- ಮದ್ಯವ್ಯಸನದ ಸಮಸ್ಯೆಯಾದಾಗ ಮಹಿಳೆಯರು ಇದರಿಂದ ಮುಕ್ತಿ ಪಡೆಯಲು ಹಿಂಜರಿಯದಂತೆ ಅವರನ್ನು ಗೌರವದಿಂದ ಕಾಣಲು ಸಮಾಜ ಸೇವಕರನ್ನು ತರಬೇತುಗೊಳಿಸಬೇಕಾಗಿದೆ.

- ಸಮಸ್ಯೆಯ ನಿವಾರಣೆಗೆ, ಖಿನ್ನತೆ, ಬೇಜಾರು ಕಳೆಯಲು ಮಹಿಳೆಯರು ಮದ್ಯದ ಮೊರೆ ಹೋಗುವುದರಿಂದ ವ್ಯಸನವಾಗುವ ಅವಕಾಶಗಳು ಹೆಚ್ಚಾಗಿರುವುದರಿಂದ ಈ ಬಗ್ಗೆ ಅವರಿಗೆ ಸರಿಯಾದ ಮಾಹಿತಿಯನ್ನು ನೀಡಬೇಕಾಗಿದೆ.

- ಸಂತೋಷಕ್ಕಾಗಿ, ಸಂತೋಷ ಕೂಟಗಳಲ್ಲಿ, ಸ್ನೇಹಿತರ ಒತ್ತಾಯದಿಂದ ಅಮಲು ಸೇವನೆ ಆರಂಭವಾಗುವ ಅವಕಾಶಗಳು ಹೆಚ್ಚು ಇದಕ್ಕಾಗಿ ಇಂಥ ಸಂಧರ್ಬ್ಗಳಲ್ಲಿ ಮದ್ಯವನ್ನು ಸ್ವೀಕರಿಸಬಾರದು.

- ಮಹಿಳೆ ಮತ್ತು ಮದ್ಯವ್ಯಸನ ಇದರ ಬಗ್ಗೆ ನಿಯತಕಾಲಿಕಗಳಲ್ಲಿ, ಪತ್ರಿಕೆಗಳಲ್ಲಿ ಮಾಹಿತಿಯನ್ನು ನೀಡಬೇಕು.

****

ಪ್ರಶ್ನಾವಳಿ

ಮಹಿಳೆಯರಲ್ಲಿ ಮದ್ಯವ್ಯಸನ

ಕಾರಣಗಳು ಮತ್ತು ಪರಿಸ್ಥಿತಿಗಳು - ಒಂದು ಅಧ್ಯಯನ

ಹೆಸರು:

I. ಮಹಿಳಾ ಮದ್ಯವ್ಯಸನಿಗಳ ಸಾಮಾಜಿಕ, ಬೌಗೋಳಿಕ ಹಿನ್ನಲೆಯ ವಿವರ:

೧. ಪ್ರಾಯ:

೧. ೨೫ಕ್ಕಿಂತ ಕಡಿಮೆ ೨. ೨೬-೩೫ ೩. ೩೬-೪೫ ೪. ೪೬-೫೫
೫. ೫೬ ಮೇಲ್ಪಟ್ಟು

೨. ವಿದ್ಯಾಭ್ಯಾಸ:

೧. ಅನಕ್ಷರಸ್ಥರು ೨.ಪ್ರಾಥಮಿಕ ೩.ಪ್ರೌಢ ಶಿಕ್ಷಣ ೪. ಪದವಿಪೂರ್ವ ೫. ಪದವಿ
೬. ವೃತ್ತಿಪರ.

೩. ವೈವಾಹಿಕ ಸ್ಥಿತಿ

೧. ವಿವಾಹಿತೆ ೨. ಅವಿವಾಹಿತೆ ೩. ವಿಚ್ಚೇದಿತೆ ೪. ವಿಧವೆ

೪. ಉದ್ಯೋಗ

೧. ಗ್ರಹಿಣಿ ೨.ಕಚೇರಿ ೩. ಕೂಲಿ ೪.ವಿಧ್ಯಾರ್ಥಿ ೫. ವ್ಯವಸಾಯ
೬. ಸ್ವ ಉದ್ಯಮ ೭. ಇತರ.

೫. ತಿಂಗಳ ಆದಾಯ

೧. ೨೦೦೦ ದಿಂದ ೪೦೦೦ ೨. ೪೦೦೦ ದಿಂದ ೬೦೦೦
೩. ೬೦೦೦ ಕ್ಕಿಂತ ಮೇಲ್ಪಟ್ಟು ೪. ಆದಾಯವಿಲ್ಲ.

೬. ಧರ್ಮ

೧. ಹಿಂದು, ೨. ಕ್ರಿಸ್ಚಿಯನ್ ೩. ಮುಸ್ಲಿಮ್ ೪. ಇತರ

೭. ಜಾತಿ

೧. ಸಾಮಾನ್ಯ ೨. ಒ.ಬಿ.ಸಿ ೩. ಪರಿಶಿಷ್ಟ ಜಾತಿ ೪. ಪರಿಶಿಷ್ಟ ಪಂಗಡ

೮. ವಾಸವಿರುವ ಪ್ರದೇಶ

೧. ಗ್ರಾಮೀಣ ೨. ಪಟ್ಟಣ ೩. ನಗರ

II. ಮದ್ಯ ವ್ಯಸನಿ ಮಹಿಳೆಯರು ಕುಡಿತಕ್ಕೆ ಕೊಡುವ ಕಾರಣಗಳು

೯. ಖಿನ್ನತೆ, ಬೇಜಾರು ಕಳೆಯಲು	೧. ಹೌದು	೨. ಇಲ್ಲ
೧೦ ವಿಶ್ರಾಂತಿಗೆ	೧. ಹೌದು	೨. ಇಲ್ಲ
೧೧. ಮೈ ಕೈ ನೋವು ನಿವಾರಣೆಗೆ	೧. ಹೌದು	೨. ಇಲ್ಲ
೧೨. ಕೈ ನಡುಕ ನಿಲ್ಲಿಸಲು	೧. ಹೌದು	೨. ಇಲ್ಲ
೧೩. ನಿದ್ರೆಗೆ	೧. ಹೌದು	೨. ಇಲ್ಲ
೧೪. ಮತ್ತೇರಲು	೧. ಹೌದು	೨. ಇಲ್ಲ
೧೫. ಸಂತೋಷಕ್ಕಾಗಿ	೧. ಹೌದು	೨. ಇಲ್ಲ
೧೬. ಸಂತೋಷ ಕೂಟಗಳಲ್ಲಿ	೧. ಹೌದು	೨. ಇಲ್ಲ

೧೭. ಸ್ನೇಹಿತರ ಒತ್ತಾಯ	೧. ಹೌದು	೨. ಇಲ್ಲ
೧೮. ಆತ್ಮ ವಿಶ್ವಾಸ ವೃದ್ಧಿಸಲು	೧. ಹೌದು	೨. ಇಲ್ಲ
೧೯. ಸಮಯ ಕಳೆಯಲು	೧. ಹೌದು	೨. ಇಲ್ಲ
೨೦.ಸಿಟ್ಟು ನಿಭಾಯಿಸಲು	೧. ಹೌದು	೨. ಇಲ್ಲ
೨೧. ಉತ್ತಮವಾಗಿ ಕೆಲಸ ಮಾಡಲು	೧. ಹೌದು	೨. ಇಲ್ಲ
೨೨. ಕೌಟುಂಬಿಕ ಸಮಸ್ಯೆಗಳಿಗಾಗಿ	೧. ಹೌದು	೨. ಇಲ್ಲ
೨೩. ಸಾಲ, ಹಣದ ಸಮಸ್ಯೆ	೧. ಹೌದು	೨. ಇಲ್ಲ
೨೪. ಹೆದರಿಕೆ ಕಡಿಮೆ ಮಾಡಲು	೧. ಹೌದು	೨. ಇಲ್ಲ
೨೫. ದುಖಃ ಕಡಿಮೆ ಮಾಡಲು	೧. ಹೌದು	೨. ಇಲ್ಲ
೨೬. ಕೀಳರಿಮೆ ಹೋಗಲಾಡಿಸಲು	೧. ಹೌದು	೨. ಇಲ್ಲ
೨೭. ಹತಾಶೆಯಿಂದ	೧. ಹೌದು	೨. ಇಲ್ಲ

III. ಮದ್ಯವ್ಯಸನಿ ಮಹಿಳೆ ಬದುಕುತ್ತಿರುವ ಪರಿಸರ ಮತ್ತು ಪರಿಸ್ಥಿತಿ

೨೮. ಜಾತಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕುಡಿತ	೧. ಹೌದು	೨. ಇಲ್ಲ

೨೯. ಕುಡಿತಕ್ಕೆ ಪ್ರೋತ್ಸಾಹಿಸುವ ಸಂದರ್ಭಗಳು - ಹಬ್ಬ, ಜಾತ್ರೆ ಇತ್ಯಾದಿ

೧. ಹೌದು   ೨. ಇಲ್ಲ

೩೦. ಪರಿಸರದಲ್ಲಿ ಕುಡಿತ	೧. ಹೌದು	೨. ಇಲ್ಲ
೩೧. ಸುಲಭದಲ್ಲಿ ಮದ್ಯದ ಪೂರೈಕೆ, ಲಭ್ಯತೆ	೧. ಹೌದು	೨. ಇಲ್ಲ
೩೨. ಧಾರ್ಮಿಕ ಕಾರಣಗಳಿಗಾಗಿ ಕುಡಿತ	೧. ಹೌದು	೨. ಇಲ್ಲ
೩೩. ವ್ಯಸನದ ಬಗ್ಗೆ ತಿಳುವಳಿಕೆ ಇಲ್ಲ	೧. ಹೌದು	೨. ಇಲ್ಲ
೩೪. ಕುಡಿತದ ಬಗ್ಗೆ ಇರುವ ಮೂಢನಂಬಿಕೆಗಳು.	೧. ಹೌದು	೨. ಇಲ್ಲ
೩೫. ದೈಹಿಕ ಹಿಂಸೆ	೧. ಹೌದು	೨. ಇಲ್ಲ
೩೬. ಮಾನಸಿಕ ಕಿರುಕುಳ	೧. ಹೌದು	೨. ಇಲ್ಲ
೩೭. ಆರೋಗ್ಯದ ಬಗ್ಗೆ ನಿರ್ಲಕ್ಷ	೧. ಹೌದು	೨. ಇಲ್ಲ

IV. ಮಹಿಳಾ ಮದ್ಯವ್ಯಸನಿಗಳ ಕೌಟುಂಬಿಕ ಹಿನ್ನೆಲೆ

೩೮. ಕುಟುಂಬ

೧. ನ್ಯೂಕ್ಲಿಯರ್ ೨.ಕೂಡು ಕುಟುಂಬ

೩. ಒಬ್ಬಂಟಿಯಾಗಿರುವುದು ೪. ಇತರ

೩೯. ಕುಟುಂಬದಲ್ಲಿ ಒಟ್ಟು ಸದಸ್ಯರು

೧. ೧ ೨. ೨ ೩. ೩ ೪.೪ ೫. ೫ ಮತ್ತು ಹೆಚ್ಚು

೪೦. ಕುಟುಂಬದಲ್ಲಿ ಕುಡಿತದ ಅಭ್ಯಾಸವಿರುವ ಇತರ ಸದಸ್ಯರು

೧. ತಂದೆ ೨. ತಾಯಿ ೩. ಗಂಡ ೪. ಅಣ್ಣ, ತಮ್ಮ ೫. ಅತ್ತೆ

೬. ಮಾವ ೭.ಮಗ ೮. ಇತರ ೯.ಇಲ್ಲ

೪೧. ಕುಟುಂಬದಲ್ಲಿ ಮದ್ಯವ್ಯಸನವಿರುವ ಇತರ ಸದಸ್ಯರು

೧. ತಂದೆ ೨. ತಾಯಿ ೩. ಗಂಡ ೪. ಅತ್ತೆ

೫. ಮಾವ ೬. ಅಣ್ಣ, ತಮ್ಮ ೭. ಇತರ ೮. ಇಲ್ಲ

೪೨. ಕುಟುಂಬದಲ್ಲಿ ಮಹಿಳೆಯರು ಕುಡಿಯುವುದು ಸಮ್ಮತವೇ?

೧. ಹೌದು ೨. ಇಲ್ಲ

೪೩. ಪ್ರಥಮ ಕುಡಿತದ ರುಚಿ ಕೊಟ್ಟವರು.

೧. ತಂದೆ ೨. ತಾಯಿ ೩. ಸ್ವಂತ ೪. ಗಂಡ

೫. ಸ್ನೇಹಿತರು ೬. ಇತರ

೪೪.ಪ್ರಥಮ ಕುಡಿದಾಗಿನ ಪ್ರಾಯ

೧. ೨೫ಕ್ಕಿಂತ ಕಡಿಮೆ ೨. ೨೬-೩೫ ೩. ೩೬-೪೫ ೪. ೪೬-೫೫

೪೫. ಪ್ರಥಮ ಕುಡಿತದ ಸಂದರ್ಭ

೧. ಸ್ನೇಹಿತೆಯರೊಂದಿಗೆ ೨. ಕುಟುಂಬದಲ್ಲಿ ೩. ಸಂತೋಷಕೂಟದಲ್ಲಿ

೪. ಬಾಣಂತನದಲ್ಲಿ ೫. ಇತರ

V. ಮದ್ಯವ್ಯಸನದ ಬಗ್ಗೆ ಅಮಲು ವ್ಯಸನಿ ಮಹಿಳೆಯರಿಗೆ ಇರುವ ಜಾಗ್ರತಿಯನ್ನು ತಿಳಿಯುವುದು

೪೬. ನಿಯಂತ್ರಣ ತಪ್ಪಿದ ಮದ್ಯಸೇವನೆ ಒಂದು ವ್ಯಸನ

೧. ಹೌದು ೨. ಇಲ್ಲ ೩. ಗೊತ್ತಿಲ್ಲ

೪೭. ಮದ್ಯ ಸೇವಿಸುವ ಯಾರೂ ಸಹ ಮದ್ಯವ್ಯಸನಿಯಾಗಲು ಸಾಧ್ಯ.

೧. ಹೌದು ೨. ಇಲ್ಲ ೩. ಗೊತ್ತಿಲ್ಲ

೪೮. ಮದ್ಯ ವ್ಯಸನಕ್ಕೆ ಚಿಕಿತ್ಸೆ ಇದೆ.

೧. ಹೌದು ೨. ಇಲ್ಲ ೩. ಗೊತ್ತಿಲ್ಲ

೪೯. ಪರಿಸರ ಮತ್ತು ಪರಿಸ್ಥಿತಿಗಳಿಂದಾಗಿ ವ್ಯಕ್ತಿ ಮದ್ಯವ್ಯಸನಿಯಾಗಲು ಸಾಧ್ಯ.

೧. ಹೌದು ೨. ಇಲ್ಲ ೩.ಗೊತ್ತಿಲ್ಲ

೫೦. ಚಿಕಿತ್ಸೆ, ಸಲಹೆ, ಮಾರ್ಗದರ್ಶನದಿಂದ ಅಮಲು ಮುಕ್ತ ಜೀವನ ಸಾಧ್ಯ.

೧. ಹೌದು ೨. ಇಲ್ಲ ೩. ಗೊತ್ತಿಲ್ಲ

IV. ಪರಾಮರ್ಶನ ಗ್ರಂಥಗಳು:

- ಮದ್ಯಪಾನ
  ಸಂತೋಷ,- ವ್ಯಸನ ಯಾವುದು ಸರಿ?
  ಕೆ.ಪಿ.ಸ್ವಾಮಿ, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್
  ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು.
  ಪ್ರಥಮ ಮುದ್ರಣ ೧೯೯೦

- ಮದ್ಯಪಾನದ ಸಮಸ್ಯೆ
  ಡಾ. ಹೆಚ್. ಡಿ. ಚಂದ್ರಪ್ಪಗೌಡ - ಪ್ರದಾನ ಸಂಪಾದಕರು
  ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
  ಪ್ರಕಾಶಕರು: ಕೆ.ಸಿ. ಶಿವಪ್ಪ
  ನಿರ್ದೇಶಕರು (ಕಾರ್ಯನಿರ್ವಾಹಕ) ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ,
  ಬೆಂಗಳೂರು ೫೬೦ ೦೫೬.

- ಮಾದಕ ವಸ್ತುಗಳ ಮಾಯಾಜಾಲ
  ಡಾ. ಸಿ. ಆರ್. ಚಂದ್ರಶೇಖರ್
  ನವಕರ್ನಾಟಕ ಪ್ರಕಾಶನ
  ಪ್ರಥಮ ಮುದ್ರಣ ೧೯೮೭
  ಪ್ರಕಾಶಕರು: ನವ ಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್
  ಎಂಬಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು ೫೬೦ ೦೦೧.

- ಅಮಾಲ್ ಸಂಸರಾಂತ್
  ಫಾ. ವಿನ್ಸೆಂಟ್, ವಿಕ್ಟರ್ ಮಿನೇಜಸ್
  ಪ್ರಕಾಶಕರು: ರಾಕ್ಣೊ ವೀಕ್ಲಿ,
  ಪ್ರಥಮ ಮುದ್ರಣ ೧೯೭೨.

- The family's journey through Alcoholism into Recovery
  Rukmini Jayaraman, V. Thirumagal
  Publisher: TT Ranganathan Clinical Reserch Foundation,
  Published in: 2010.

- Treatment for Alcoholism
  Shanthi Ranganathan
  Publisher: TT Ranganathan Clinical Reserch Foundation,
  Published in: 2011.

- Counselling and Group Therapy in Addiction Treatment
  Produced by TTK Hospital, Chinnai
  Published by MSJE and UNODC
  Published in:2011

- Medical Management of Substance Dependance
  Dr. Anita Rao, Dr.V.Thirumagal
  Publisher: TT Ranganathan Clinical Reserch Foundation,
  Published in:2011

- Are Alcoholic Women More likely to drink premenstrually
  Danny Allen
  Revised Publication in 1995.

- Alcoholism in Women
  Harmats J.S
  Archieves of General Psychiatry